ಅಖಿಲ ಭಾರತ ಪತ್ರಿಕೆ

ಏಪ್ರಿಲ್ 2023



# ಯುಗಳಾವತಾರದ ಲೀಲೆ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಈ ಲೋಕ–ಕ್ಷಮತೆ–ಪರಿಪೂರ್ಣ–ಶಕ್ತಿ ಪಾಲಿತವು ಲೀಲೆಯೊಳಗೆ
ಸರ್ವಶಕ್ತಿಧರ ನಿತ್ಯ–ಮಂಗಳದ ಶಿವನಧಿಷ್ಠಾನದೊಳಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 5 ಪುಟ 525)**

**ಅಖಿಲ ಭಾರತ ಪತ್ರಿಕೆ**

**ಏಪ್ರಿಲ್ 2023**

ಸಂಪುಟ: 33 ಸಂಚಿಕೆ: 04


**ಪರಿವಿಡಿ**


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


# ಯುಗಳಾವತಾರದ ಲೀಲೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಶ್ರೀ ಅರವಿಂದರ ಭವಿಷ್ಯದ್ವಾಣಿ–ವಾಸ** 6
ಅನು: ನಾಗಜ್ಯೋತಿ ಮಾನ್ವಿ

**ಶ್ರೀ ಅರವಿಂದರ ಸನ್ನಿಧಿ** 12
ಅನು: ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರು ಮತ್ತು ಶ್ರೀಮಾತೆ** 21
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 53
ಅನು: ಜಾನ್ವಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 58
ಅನು: ಡಾ॥ ಬಿ.ಆರ್. ಭೀಡ್

**ಯುಗಳಾವತಾರದ ರಹಸ್ಯ** 63
– ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಸಾವಿತ್ರಿ'** 75
– ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 76

## ಸಂಪಾದಕರ ಟಿಪ್ಪಣಿ

ಅವರ (ಶ್ರೀ ಅರವಿಂದರ) ಮೃಣ್ಮಯದ ಶರೀರದ ವ್ಯವಸ್ಥೆಯ ಮೂಲಕ ಅಸ್ತಿತ್ವದಲ್ಲಿದ್ದ ಆಕಾರದಿಂದ ಮತ್ತು ಭಾವದಿಂದ ಉಪರತಿಯನ್ನು ಹೊಂದಿದಾಗಲೂ ಸಹಿತ, 'ಅವತಾರದ ಲೀಲೆ' ಮಾತ್ರ ನಿರ್ಬಂಧಿಸಲ್ಪಡಲಿಲ್ಲ. ಅದು ಮೊದಲಿಗಿಂತಲೂ ಅಧಿಕಾಧಿಕವಾಗಿ ಶಕ್ತಿಯನ್ನು ಜೊತೆಗೆ ವೇಗವನ್ನೂ ಪಡೆದುಕೊಂಡಿತು. ಒಂದು ನಿಯತಿಗತವಾಗಿಯೇ ನಿರ್ಧರಿತವಾಗಿದ್ದ ಈ ಭವದ ಮೇಲೆ ಅವತರಣಗೊಳ್ಳುವ ಅವಶ್ಯಕತೆ ಇದ್ದುದರಿಂದ, ಅದನ್ನು ಈಡೇರಿಸುವ ಸಲುವಾಗಿಯೇ, ಆ ಚೈತನ್ಯ ಮತ್ತು ಅದರ ರೂಪಣೆಗೊಂಡಿರುವ ಶಕ್ತಿ (ಬಲ/ಸಾಮರ್ಥ್ಯ) ಮತ್ತು ಇಲ್ಲಿ ಭೌತಿಕವಾಗಿ ಹೊಂದಿದ್ದ ಈ ಕಾಯದಿಂದ ಬಿಡುಗಡೆ ಹೊಂದಿ, ಈ 'ಅವತಾರ'ವು ವೈಶ್ವಿಕವಾಗಿ ಅನುಷ್ಠಾನಗೊಳಿಸುವಲ್ಲಿ, ಆ ಕ್ರಿಯೆಯನ್ನು ಮತ್ತೂ ಹೆಚ್ಚು ಸಮರ್ಥಶೀಲವಾಗಿ, ಲೀಲೆಗೊಳಿಸತೊಡಗಿತು. ಇದಿಷ್ಟೇ ಅಲ್ಲದೇ, ಅವರ ದಿವ್ಯತ್ವ ಸ್ವರೂಪದ ಮೃಣ್ಮಯದ ವ್ಯವಸ್ಥೆಯ ಮಾನವೀಯ ವ್ಯಕ್ತಿತ್ವವು (ಅಸ್ಮಿತೆಯು) ಈ ಭೂಮಿಗೆ ಮತ್ತು ಯಾರು ಯಾರು ವಿಶ್ವಾಸಪೂರ್ಣವಾಗಿ ತಮ್ಮನ್ನು ತಾವು ಇದನ್ನು ಸ್ವೀಕರಿಸಲು ಹೃದಯಗಳನ್ನು ತೆರೆದುಕೊಳ್ಳುತ್ತಾರೋ ಅವರಿಗೆ ಮತ್ತು ಯಾರು ಈ ದಿವ್ಯ ಕಾರ್ಯಕ್ಕಾಗಿ ಅದನ್ನು ಆಧರಿಸಿಕೊಳ್ಳುತ್ತಾರೋ ಅವರ ಸಲುವಾಗಿಯೇ ಈ 'ದೈವೀ ಆಗಮನ'ದ ಸ್ವರೂಪವಾಗಿರುತ್ತದೆ.

ಅವಿರತವಾಗಿ ಮುಂದುವರೆದಿರುವ ಶ್ರೀ ಅರವಿಂದರ ಲೀಲೆಗಳ ಕುರಿತು ಶ್ರೀಮಾತೆಯವರು ಅಭಿವ್ಯಕ್ತಿಸಿದ ವಿಷಯಗಳಿಗೆ ಈ ಸಂಚಿಕೆಯು ರೂಪಿಸಲ್ಪಟ್ಟಿದೆ. (ಎಐಎಮ್)

## ಸಂಪಾದಕೀಯ

### ಯುಗಳಾವತಾರದ ನಿಯತಿ

ಯುಗಗಳು ಮತ್ತು ಯುಗಾವತಾರದ ಆಧಾರದಲ್ಲಿಯೇ ಭಾರತೀಯ ಚಿಂತನಾ ವಿಕಾಸವು ಆಯಾಮಗಳನ್ನು ರೂಪಿಸಿಕೊಂಡಿದೆ. 'ಯುಗ ಪುರುಷ' ಎನ್ನುವ ಸ್ವರೂಪವೂ ಆಯಾ ಯುಗ ಧರ್ಮದ ಅಸ್ಮಿತೆಯನ್ನು ಸಮಗ್ರೀಕರಿಸಿಕೊಂಡು, ಹಿಂದಿನ ಮೌಲ್ಯಗಳನ್ನೂ ಪರಿಷ್ಕರಿಸಿಕೊಂಡು, ನೂತನವಾಗಿರುವ ಬದುಕಿನ ಸುವ್ಯವಸ್ಥೆಗೆ ಪಥಗಳನ್ನು ನಿರ್ಮಿಸುತ್ತಾ ಅನುಷ್ಠಾನಿಸಲ್ಪಟ್ಟಿವೆ. ಸೂಕ್ಷ್ಮವಾಗಿ ಅವಲೋಕಿಸದರೆ, ಈವರೆಗೂ ರೂಪಣೆಗೊಂಡಿರುವ ಅವತಾರ ಅಥವಾ ಯುಗ ಪುರುಷ ವ್ಯವಸ್ಥೆಯಲ್ಲಿ 'ಪುರುಷ'ನೇ ಪ್ರಧಾನ. ಇಲ್ಲಿ ಪ್ರಕೃತಿಯ ಪಾತ್ರ ಕಡೆಗಣಿಸಲ್ಪಟ್ಟಿದೆ ಎಂದರ್ಥವಲ್ಲ. ಆದರೆ ಯುಗ ಧರ್ಮದ ಮತ್ತು ವಿಕಾಸದ ನಿಯತಿಯಂತೆಯೇ ಇದು ಪಯಣ ಮಾಡಿಕೊಂಡು ಬಂದಿದೆ. ಚೇತನಾವಸ್ಥೆಯ ಊರ್ಧ್ವಮುಖೀ ಆರೋಹಣದ ಸಂದರ್ಭದಲ್ಲಿ, ಇಲ್ಲಿ ಪುರುಷ ಮತ್ತು ಪ್ರಕೃತಿ ಇಬ್ಬರೂ ಸಮತೆಯಲ್ಲಿ ಇರುತ್ತಾರೆ. ಪುರುಷ ಮತ್ತು ಪ್ರಕೃತಿಯನ್ನು 'ಜಡ ಮತ್ತು ಚೇತನ'ವೆಂದು, 'ಶಿವ ಶಕ್ತಿ' ಎನ್ನುವ ರೂಪಿತದಲ್ಲಿ ಆರಾಧನೆಯ ಪಥ ನಿರ್ಮಾಣಗೊಂಡಿತು. ಈ ರೀತಿಯ 'ಪುರುಷ–ಪ್ರಕೃತಿ'ಯ ವೈಶ್ವಿಕ ಅಸ್ಮಿತೆಯು ವಿಶ್ವದ ರಹಸ್ಯವೇ ಆಗಿದೆ. ಇದನ್ನು ಆತ್ಮಗತ ಮಾಡಿಕೊಳ್ಳಲು ಯತ್ನಿಸಿದ 'ಜ್ಞಾನ ಮಾರ್ಗ'ದಲ್ಲಿ, ಇದರ ಸೂತ್ರವನ್ನು ತೋರಿಸಿದವನು ಯಾಜ್ಞವಲ್ಕ್ಯ. ಈಶಾವಾಸ್ಯೋಪನಿಷತ್ತಿನ ಪ್ರಪ್ರಥಮ ಮಂತ್ರವೇ "ಈಶಾವಾಸ್ಯಮಿದಂ ಸರ್ವಂ" ಎಂದೇ ಇದೆ. 'ಈ' ಮತ್ತು 'ಶ' ಎರಡೂ ಈ ಪ್ರಕೃತಿ ಮತ್ತು ಪುರುಷ ಅಥವಾ ಚೇತನ ಮತ್ತು ಜಡದ ಬೀಜಮಂತ್ರಗಳಾಗಿವೆ. ಇವು ಎರಡೂ ಅವತಾರದ ಸ್ವರೂಪಗಳೇ ಆಗಿವೆ. ಜಡದ ಆಂತರ್ಯದಲ್ಲಿ ಚೇತನವಿದೆ; ಚೇತನದ ಸಂಪರ್ಕವಿಲ್ಲದಿದ್ದಲ್ಲಿ ಜಡಕ್ಕೆ ಅಸ್ತಿತ್ವವಿಲ್ಲ; ಜಡದ ಸ್ವರೂಪವಿಲ್ಲದಿದ್ದಲ್ಲಿ ಚೇತನವೂ ನಿರಾಕಾರ. ಹೀಗೆ ಇವೆರಡೂ 'ಏಕ'ವೇ ಆಗಿವೆ. ಆಯಾಮಗಳಲ್ಲಿ ಅನುಭವಕ್ಕೆ ಲಭ್ಯವಾಗುತ್ತವೆ.


ಇಲ್ಲಿಯವರೆಗೂ ಅವತರಣಗೊಂಡು ಬಂದ 'ಚೇತನವು' ಪುರುಷ ರೂಪಿಯಾಗಿಯೇ ಇದೆ. ಒಮ್ಮೆ ಅವತರಣಗೊಂಡು ಭೂ–ತಲವನ್ನು ತಲುಪಿದ ನಂತರದಲ್ಲಿ ಅದು ನಿಯತಿಯ ಅನುಗುಣವಾಗಿ ಊರ್ಧ್ವಗಾಮಿಯಾಗಿಯೇ ಯಾನ ನಡೆಸಬೇಕು. ಈ ಊರ್ಧ್ವ ಗಮನದಲ್ಲಿ ಇದರ ಸ್ವರೂಪ ಪುರುಷ

ರೂಪಿಯಾಗಿರುವದಿಲ್ಲ. ಈ ರೀತಿಯ 'ಬದುಕು' ಮಾನವನಿಗೆ ಲಭ್ಯಗೊಳ್ಳುತ್ತಿರುವ ಯುಗ ಇದು. ಇಲ್ಲಿ ಸ್ತ್ರೀ ಮತ್ತು ಪುರುಷ ಇಬ್ಬರೂ ಸಮತೆಯಲ್ಲಿ ಇರುತ್ತಾರೆ. ಸಮಾನತೆಯ ಪ್ರಶ್ನೆ ಉದ್ಭವಿಸುವದಿಲ್ಲ. ಅವತರಣಗೊಂಡು ಬಂದ ಚೇತನವು, ಮೃಣ್ಮಯದ ಬದುಕಿನ ಸ್ವರೂಪದಲ್ಲಿಯೂ ಅದಕ್ಕೆ ಸಿಲುಕಿಕೊಳ್ಳದೇ, ಅದರ ಆಯಾಮದಲ್ಲಿ 'ಪ್ರಜ್ಞೆ'ಯಾಗಿ ವಿಕಸನಗೊಂಡು, ಮತ್ತೆ ತನ್ನ ಮೂಲ ನೆಲೆಯತ್ತ ಏರಬೇಕೆಂಬ ಅಭೀಪ್ಸೆ ಹೊಂದಿದ 'ಬದುಕು' ಅದನ್ನು ಪ್ರಜ್ಞಾಪೂರ್ವಕವಾಗಿ, ತೆರೆದ ಹೃದಯದಿಂದ ಸ್ವೀಕರಿಸಿ ಸಾಧನೆ ಮಾಡಿಕೊಳ್ಳುತ್ತದೆ.

ಈ ಸಂಕೇತವನ್ನು ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ವಿಷಯದಲ್ಲಿ, ರಕ್ತಾರವಿಂದ ಮತ್ತು ಶ್ವೇತಾರವಿಂದ ಎಂದು ಅಧ್ಯಯನವಿದೆ. ಇಲ್ಲಿ ಶ್ವೇತಾರವಿಂದ ಎಂದರೆ ಶ್ರೀಮಾತೆ; ರಕ್ತಾರವಿಂದ ಎಂದರೆ ಶ್ರೀ ಅರವಿಂದರು. ಈ ವಿಷಯವನ್ನು ಶ್ರೀಮಾತೆಯವರೇ ಲಿಖಿತ ರೂಪದಲ್ಲಿ ಅಭಿವ್ಯಕ್ತಿಸಿದ್ದಾರೆ. ಶ್ವೇತ ಕಮಲವು ಊರ್ಧ್ವದೆಡೆಯಿಂದ ಆಗಮಿಸುವ ಚಿತ್ಸೂರ್ಯನ ಚಿನ್ಮಯದ ಪ್ರವಾಹವಾಗಿದ್ದು ಅದು ಶುಭ್ರ–ಶ್ವೇತವರ್ಣದ್ದಾಗಿರುತ್ತದೆ. ಇದನ್ನೇ 'ಋತ–ಚೇತನ'ವೆಂದು ಕರೆಯಲಾಗಿದೆ. ಬ್ರಹ್ಮಾಂಡದಲ್ಲಿರುವ ಈ ಋತ–ಚೇತನವು ಅವತರಣದಲ್ಲಿ ಭೂಮಿಗೆ ಬರುವಾಗ, ಈ ಭೂ–ವಲಯದ ಭೌತಿಕ ಅಂಶಗಳಿಂದಾಗಿ ಸಂಹೂತಿಯಲ್ಲಿ (ವಕ್ರೀಭವನದಲ್ಲಿ) ವರ್ಣವಿನ್ಯಾಸವನ್ನು ಪಡೆದುಕೊಂಡು ರಕ್ತಾರವಿಂದವಾಗುತ್ತದೆ.

ಕಾಂತಿಮಯವಾಗಿ ಮಿನುಮಿನುಗುತ್ತಿರುವ ಅವಳ ಅವಯವ ಸರ್ವಸ್ವವೂ ಈಗ ಇಲ್ಲಿ, ಬೆಳಕಿನ ಜೊತೆಗೇ ಮಹಾನ್–ಉತ್ಕರ್ಷ ಸ್ವರೂಪದ ಕಳೆಯನ್ನು ತನ್ನದಾಗಿಸಿಕೊಳ್ಳುತ್ತದೆ. ಕೇವಲ ಅಷ್ಟಕ್ಕೇ ಮಾತ್ರ ಸೀಮಿತಗೊಳ್ಳದೇ ಆ ಬೆಳಕಿನಲ್ಲಿಯೂ ಅವಳನ್ನೇ ಭರಣಗೊಳಿಸಿಕೊಂಡು ಪೂರ್ಣಗೊಳ್ಳುವ ಭಾವದಿಂದ, ಅದಕ್ಕಾಗಿ 'ಅವನ' ಆ ಶಕ್ತ ಗಭೀರಾಸಕ್ತ ಕಿರಣಗಳ ಛಂದವನ್ನು ಹೊಂದುತ್ತದೆ. ಈ ರೀತಿಯಲ್ಲಿ ಅವಳ ಆ ಕಾಯದ ಅಚ್ಚು ಅಚ್ಚಿನಲ್ಲಿ – ಅದೂ ಪಾರದರ್ಶಕವಾಗಿರುವ ನೆಲೆಯಲ್ಲಿಯೇ ಅದನ್ನು ಪಡೆದುಕೊಳ್ಳುವವರೆಗೆ ಸೆಲೆಯೆ ಆಗಿ ತುಂಬಿಕೊಳ್ಳುತ್ತ ತುಂಬಿಕೊಳ್ಳುತ್ತ ಪರಿಪೂರ್ಣವಾಗುತ್ತದೆ. ಆ ರೀತಿಯಲ್ಲಿ ಸೃಷ್ಟಿಗೊಳ್ಳುವ ಆ 'ಒಂದು ರೂಪ'ವು ಅವನದೇ ಪ್ರತಿರೂಪವಾಗುವವರೆಗೂ ಪ್ರಗತಿಗೊಳ್ಳುತ್ತದೆ.

ಇದೇ 'ಯುಗ್ಮಾವತಾರ' ಅಥವಾ 'ಯುಗಳಾವತಾರ'ದ ಆಂತರ್ಯವಾಗಿದೆ. [ಪಿಪಿಕೆ]



ಶ್ರೀ ಅರವಿಂದರು ನಮ್ಮಲ್ಲಿ – ಅಂತರಂಗದಲ್ಲಿ ಚಿರಂತನವಾಗಿ ನೆಲೆಸಿದ್ದು, ಯಾರು ಶ್ರೀ ಅರವಿಂದರನ್ನು ದೃಷ್ಟಿಸಲು ಮತ್ತು ಶ್ರಾವ್ಯಗೊಳ್ಳಲು ಅಭೀಪ್ಸೆಯನ್ನು ಹೊಂದಿರುತ್ತಾರೆಯೋ ಅವರಿಗೆ ಖಚಿತವಾಗಿಯೂ ದರ್ಶಗೊಳ್ಳುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/11** **– ಶ್ರೀಮಾತೆ**

# ಶ್ರೀ ಅರವಿಂದರ ಭವಿಷ್ಯದ್ವಾಣಿ–ವಾಸ

**– ಅನು: ನಾಗಜ್ಯೋತಿ ಮಾನ್ವಿ**

ಇಲ್ಲಿ ರೂಪಿತವಾಗಿರು ಆಂಗ್ಲ ಶಬ್ದ 'ಎಬೋಡ್' ಎನ್ನುವದು ಮೇಲ್ನೋಟಕ್ಕೆ ವಾಸಸ್ಥಾನ ಎಂದು ಕಂಡುಬಂದರೂ, ಅದನ್ನು ಉಚ್ಚರಿಸುವಾಗ ಆಗುವ ಧ್ವನಿ ಸೂಕ್ಷ್ಮತೆಯಲ್ಲಿ ಅದು 'ಎ–ಬೋಡ್' ಆಗುತ್ತದೆ. ಇದಕ್ಕೆ 'ಭವಿಷ್ಯದ್–ವಾಣಿ' ಅಥವಾ 'ಶುಭಶಕುನದ ಆ–ವಾಸ' ಅಥವಾ 'ಸರ್ವಜ್ಞ ವಾಣಿ' ಎಂದು ಅರ್ಥವಿದೆ. – (ಸಂಪಾದಕ)

**ಭವದಿಂದ ದೂರ ಸರಿಯುವ ನಿರ್ಧಾರ**

ನನಗೆ ಈಗಲೂ ಸ್ಪಷ್ಟವಾಗಿ ನೆನಪಿದೆ ಮತ್ತು ನಿಖರವಾಗಿಯೂ ಗೊತ್ತಿದೆ. ಅವರ ಕೋಣೆಯ ಇಡೀ ದೃಶ್ಯವನ್ನು ಈಗಲೂ ನೋಡುತ್ತಿರುವೆ. ಒಮ್ಮೆ ಅದಾವುದೋ ವಿಷಯದ ಕುರಿತು ಸಂವಾದ ನಡೆಸಿದ್ದೆ. ಯಾವುದರ ಬಗೆಗೆ ಎಂದರೆ... ಅದು.. ಅದು.., ಒಟ್ಟಿನಲ್ಲಿ ಸಂವಾದವು ಯಾವ ವಿಷಯದಿಂದ ಪ್ರಾರಂಭವಾಯಿತು ಎನ್ನುವದು ನನಗೆ ಮರೆತುಹೋಗಿದೆ. ಹಾ, ಹಾ ಈಗ ನೆನೆಪಿಗೆ ಬರುತ್ತಿದೆ, 'ಭೂಮಿಯಲ್ಲಿ ನಾವಿಬ್ಬರೂ ಒಟ್ಟಿಗೆ ಇರಲು ಸಾಧ್ಯವಿಲ್ಲ, ಒಬ್ಬರು ಹೋಗಲೇಬೇಕು' ಎಂದಿದ್ದರು. ಅದಕ್ಕೆ 'ನಾನು ಸಿದ್ಧಳಿದ್ದೇನೆ, ನಾನು ಹೋಗುತ್ತೇನೆ' ಎಂದಿದ್ದೆ. ಆಗ ಅವರು, "ಇಲ್ಲ, ಇಲ್ಲ, ನೀನು ಈಗಲೇ ಹೋಗಲು ಸಾಧ್ಯವಿಲ್ಲ. ನನ್ನ ಶರೀರಕ್ಕಿಂತ ನಿನ್ನ ಶರೀರದ ಆರೋಗ್ಯವು ಉತ್ತಮವಾಗಿದೆ. ನನಗಿಂತಲೂ ನೀನು ಉತ್ತಮವಾಗಿ ರೂಪಾಂತರವಾಗಬಲ್ಲೆ" ಎಂದು ಹೇಳಿದ್ದರು. ಮತ್ತೊಂದು ವಿಚಿತ್ರವೆಂದರೆ, ಅವರ ಎಲ್ಲಾ ದೈಹಿಕ ತೊಂದರೆಗಳು ಬರುವ ಮುಂಚೆಯೇ ಈ ಸಂವಾದ ನಡೆದಿತ್ತು.

ಆದರೆ ನಾನು ಇದಕ್ಕೆಲ್ಲ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಿಲ್ಲ; ಯಾವಾಗ ಅವರು ದೇಹತ್ಯಾಗ ಮಾಡಿದರೋ, ಆಗ ನನಗೆ ತಟ್ಟನೆ ನೆನಪಾಯಿತು. ಆಗ ನಾನು ಯೋಚಿಸಿದ್ದೇನೆಂದರೆ, 'ಅವರಿಗೆ ಇದು ತಿಳಿದಿತ್ತು'.. ಹೀಗಿದ್ದರೂ ಇರಬಹುದು, ಏನೆ ಆಗಲಿ, ನನಗೆ ಗೊತ್ತಿಲ್ಲ, ಅದು ಬಹುತೇಕ ಒಂದು ರೀತಿಯ ಭವಿಷ್ಯದ್ವಾಣಿ ಆಗಿತ್ತು. ಅವರು ಅದನ್ನು ನನಗೆ ಸಹಜವಾಗಿ ಹೇಳಿದ್ದರು. ಅದು ನಾವು ಬೇರೆ ನಿವಾಸದಿಂದ ಈ ನಿವಾಸಕ್ಕೆ 1927ರ ಫೆಬ್ರವರಿಯಲ್ಲಿ ಬಂದ

ಸಮಯದಲ್ಲಿ. ಅಂದರೆ ಅಪಘಾತವಾಗಿ ಅವರ ಕಾಲು ಮುರಿದ ಘಟನೆ (1938 ನವಂಬರ 24). ಆದರೆ ಯಾವ ವಿಷಯದ ಕುರಿತು ಮಾತುಕತೆ ನಡೆಯಿತೋ ಎನ್ನುವದು ನನಗೆ ಮರೆತು ಹೋಗಿದೆ. ಈಗ ನಿನಗೆ ಇದು ತಿಳಿಯಿತೇ?

ಆದರೆ ನನಗೆ ಸ್ಪಷ್ಟವಾಗಿ ಈಗಲೂ ನೆನಪಿದೆ, ಇನ್ನೂ ಆ ಕೋಣೆ ಮತ್ತು ಎಲ್ಲವನ್ನೂ ನಾನು ಈಗಲೂ ನೋಡುತ್ತಿದ್ದೇನೆ. ಆಗ ಅವರು ಹೇಗಿದ್ದರು, ಹೇಗೆ ತಾನೆ ಆ ವಿಷಯವನ್ನು ತಿಳಿಸಿದ್ದರು.. "ನಾವಿಬ್ಬರೂ ಭೂಮಿಯ ಮೇಲೆ ಒಟ್ಟಿಗೇ ಇರಲು ಸಾಧ್ಯವಿಲ್ಲ". ಇಷ್ಟೆ ಮುಗಿಯಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜುಲೈ 26, 1969**

**ಚೈತ್ಯ ಪುರುಷನೊಂದಿಗೆ ಸಂಪರ್ಕ**

ಶ್ರೀ ಅರವಿಂದರು ದೇಹತ್ಯಾಗ ಮಾಡಿದಾಗ, ನಾನು ಆ ಚೈತ್ಯ ಪುರುಷನ ಸಂಪರ್ಕವನ್ನು ಹೇಗೆ ಕತ್ತರಿಸಿಕೊಳ್ಳಬೇಕು ಎನ್ನುವದು ನನಗೆ ತಿಳಿದಿತ್ತು. ಇಲ್ಲದಿದ್ದರೆ ಅವರೊಂದಿಗೇ ನಾನೂ ಹೋಗಬೇಕಾಗಿತ್ತು; ನಾನು ಇಲ್ಲಿಯೇ ಇದ್ದು, ಕೆಲಸ ಮಾಡುತ್ತೇನೆ ಎಂದು ಅವರಿಗೆ ಪ್ರಮಾಣ ಮಾಡಿದ್ದೆ. ಅದನ್ನು ನಾನು ಮಾಡಲೇಬೇಕಾಗಿತ್ತು; ಮಾಡಬೇಕಾಗಿದೆ; ಹೀಗಾಗಿ ಆ ಚೈತ್ಯ ಪುರುಷನಿರುವ ಆ ಊರ್ಧ್ವದ ಬಾಗಿಲನ್ನು ನಾನು ಅಕ್ಷರಶಃ ಮುಚ್ಚಿದ್ದೆ, ಅಷ್ಟೇ ಅಲ್ಲದೇ 'ಇನ್ನು ಮುಂದೆ ಇದು ಅಸ್ತಿತ್ವವಿರುವದಿಲ್ಲ' ಎಂದು ಹೇಳಿದ್ದೆ, ಮುಂದಿನ ಹತ್ತು ವರ್ಷಗಳ ಕಾಲ ಅದು ಹಾಗೆಯೇ ಇತ್ತು. ನಂತರದಲ್ಲಿ ಅದು ನಿಧಾನವಾಗಿ ನಿಧಾನವಾಗಿ ತೆರೆದುಕೊಳ್ಳಲು ಪ್ರಾರಂಭಿಸಿತು. ಈ ಘಟನೆಯು ಆಗ ನನಗೆ ಆಶ್ಚರ್ಯವನ್ನು ತುಂಬಿತ್ತು. ಏಕೆ ಹೀಗಾಗುತ್ತಿದೆ ಎಂದು ಅಚ್ಚರಿಯಾಗಿತ್ತು. ನಾನೇಕೆ ಆ ದೇವರನ್ನು ಸ್ವೀಕರಿಸಬೇಕು, ಮತ್ತು ಏಕೆ ಅದರ ಆಶಯವನ್ನು ನಡೆಸಬೇಕಿತ್ತು, ಯಾವಾಗ ನನ್ನ ದೇಹದಲ್ಲಿ ಆ ದೈವೀ ಪ್ರೇಮದ ಜೊತೆಗೆ ತಾದಾತ್ಮ್ಯವನ್ನು ಹೊಂದಿದೆನೋ, ಅದಾದ ನಂತರದಲ್ಲಿ, ಚೈತ್ಯ ಪುರುಷನ ಸಂಪರ್ಕವನ್ನು ಬಿಟ್ಟೆನು. ಆಗ ಪ್ರತಿಯೊಂದು ಜೀವಕೋಶವೂ ಸಹಿತ ಆ ಆದೇಶವನ್ನು ಪಾಲಿಸಬೇಕಿತ್ತು. ಆಮೇಲೆಯೇ ಏಕೆ ಇಡೀ ಜಗತ್ತು ಮುಚ್ಚಿಕೊಂಡಿದೆ ಎನ್ನುವದು ಅರಿವಾಯಿತು. ಅದು ದೈವೀ–ಪ್ರೇಮದ ಅನುಭವವಿಲ್ಲದೇ ಇರುವ ಸಂದರ್ಭವಾಗಿದೆ. ಅದಕ್ಕಾಗಿ ಸಹಜವಾಗಿ ಈ ಚೈತ್ಯ–ಪುರುಷನನ್ನು ಬಚ್ಚಿಡಬೇಕಾಯಿತು. ಈ ವಿಷಯವೂ ನನಗೆ ಅರಿವಾಯಿತು. ಏಕೆಂದರೆ ಬಹಿರಂಗದಲ್ಲಿ ಶ್ರೀ ಅರವಿಂದರ ಸನ್ನಿಧಾನವಿಲ್ಲದೇ

ನಾನು ಬದುಕುವದು ಅಸಾಧ್ಯವಾಗಿತ್ತು. ಆ ದೈವೀ–ಪ್ರೇಮದ ಸನ್ನಿಧಾನವಿಲ್ಲದೇ ನಾವು ಬದುಕಬೇಕಾಗಿದೆ ಎಂದು ನನ್ನ ಎಲ್ಲಾ ಜೀವಕೋಶಗಳೂ ಅರಿತುಕೊಂಡವು. ಭೌತಿಕ ಜಗತ್ತು ಹೀಗೆ ತಾನೆ ಇರುವದು. ಆದರೆ ಭೌತಿಕ ಜಗತ್ತು ರೂಪುಗೊಳ್ಳಲು ಮತ್ತು ಪ್ರಗತಿಗೊಳ್ಳಲು ಇದು ಅವಶ್ಯಕವಾಗಿಯೂ ಇತ್ತು.

ಆದರೆ ಒಂದು ಸಂತೋಷದ ಸಂಗತಿ ಎಂದರೆ, ಅದು ಈಗ, ಈಗ ಏನನ್ನು ಮತ್ತೆ ತೆರೆದು ತೋರಿಸಿಕೊಳ್ಳಲು ಇಚ್ಛಿಸುತ್ತಿದೆಯೋ, ಆ ಸಮಯಕ್ಕೇ ನಾವು ಸಮೀಪಿಸುತ್ತಿದ್ದೇವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜುಲೈ 27, 1966**

ಇನ್ನೂ ಜಗತ್ತು ಸಿದ್ಧವಿದ್ದಿಲ್ಲ ಎಂದು ನಾವು ಈ ರೀತಿಯಲ್ಲಿಯೂ ಹೇಳಬಹುದು, ಆದರೆ ನಿಜ ಸಂಗತಿ ಎಂದರೆ, ಅವರ ಸುತ್ತಮುತ್ತಲೂ ಸಂಪೂರ್ಣವಾಗಿ ಸಿದ್ಧವಿರಲಿಲ್ಲ. ಹೀಗಾಗಿ ಅವರು ಇದನ್ನು ಗಮನಿಸಿದಾಗ (ಈ ವಿಷಯ ನನಗೆ ಆಮೇಲೆ ತಿಳಿದುಬಂದಿತು) ತಾವು ಇಲ್ಲಿ ಇರದಿದ್ದರೇ ಎಲ್ಲವೂ ಬೇಗನೇ ಆಗುತ್ತದೆ, ಎಂದು ಅವರಿಗೆ ಖಚಿತವಿತ್ತು.

ಹೀಗಾಗಿ ಅವರು ಅದನ್ನೇ ಮಾಡಿದರು. ಇದೆಲ್ಲವೂ ನನಗೆ ತಿಳಿಯಬಾರದೆಂದು ಈ ರೀತಿಯಲ್ಲಿ ಮಾಡಿದರು. ಸಾಮಾನ್ಯವಾಗಿರುವ ಅನಾರೋಗ್ಯದಂತೆಯೇ ಅಪ್ರಜ್ಞಾಪೂರ್ವಕವೆನ್ನುವಂತೆ ಎಲ್ಲವನ್ನೂ ಸಹಿಸಿಕೊಂಡಿದ್ದರು. ಯಾವ ಸಮಯದಲ್ಲಿ ನಿರ್ಗಮಿಸಬೇಕಿತ್ತೋ, ಅದೇ ರೀತಿಯಲ್ಲಿ ನಿರ್ಗಮಿಸಿದರು. ಆದರೆ. ..

ಆದರೆ ಅವರು ಹೋದ ಮೇಲೆ ‘ಅವರು ಹೋಗಿದ್ದಾರೆ ಎನ್ನುವ ಕಲ್ಪನೆಯನ್ನು ಮಾಡಿಕೊಳ್ಳಲೂ ಸಾಧ್ಯವಿರಲಿಲ್ಲ. ಇಲ್ಲಿಯೇ ಎಲ್ಲೋ ಒಂದು ಕಡೆಗೆ, ನನ್ನ ಎದುರಿಗೇ ದೂರದಲ್ಲಿ ನಡೆದಂತೆ ಅನಿಸಿತು. ಅವರು ದೇಹವನ್ನು ತ್ಯಜಿಸಿದ ನಂತರದಲ್ಲಿ ನನ್ನಲ್ಲಿ ಬಂದು ನೆಲೆಸಿದರು. ಆಗ ನನಗೆ ಎಲ್ಲವೂ ಅರ್ಥವಾಯಿತು. ಇದು ನಿಜಕ್ಕೂ ಅತ್ಯದ್ಭುತವಾದ ಸಂಗತಿ.

ಅತ್ಯದ್ಭುತ.

ಇದು ನಿಜವಾಗಿಯೂ ಅತಿಮಾನುಷವಾದುದು. ಒಬ್ಬ ಮಾನವನಿಗೆ ಈ ರೀತಿ ಮಾಡಲು ಸಾಧ್ಯವೇ ಇಲ್ಲ. ಅದಾವ ರೀತಿಯಲ್ಲಿ ಈ ದೇಹದ **ಮೇಲೆ ಮತ್ತು**

**ಜೀವದ ಮೇಲೆ ಪ್ರಭುತ್ವವನ್ನು ಹೊಂದಿದ್ದರು – ಅದು ಪರಿಪೂರ್ಣವಾದ ಪ್ರಭುತ್ವ. ಸಂಪೂರ್ಣವಾದ ಪ್ರಭುತ್ವ!**

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 19, 1960**

ಅಗಸ್ಟ 15ರ ಮುನ್ನ ನನಗೊಂದು ಅನನ್ಯವಾದ ಅನುಭವವಾಯಿತು. ಅದು ಎಲ್ಲವನ್ನೂ ಉದಾಹರಣೆಗಳೊಂದಿಗೆ ವಿವರಿಸುತ್ತದೆ. ಮೊದಲಬಾರಿಗೆ 'ಅತಿಮಾನಸ ಬೆಳಕು' ಅಂತಃಸತ್ತೆಯನ್ನು ಹಾದುಹೋಗದೇ ನೇರವಾಗಿ ನನ್ನ ದೇಹವನ್ನು ಪ್ರವೇಶಿಸಿತು. ಒಂದು ಕೆಂಪು ವರ್ಣದ ಮತ್ತು ಬಂಗಾರ ಬಣ್ಣದ, ಅದ್ಭುತವಾದ, ಬೆಚ್ಚನೆಯ ಅನುಭವದ, ತೀವ್ರವಾದಂತಹ ಮತ್ತು ಮೇಲಕ್ಕೆ ಮೇಲಕ್ಕೆ ಏರುತ್ತ ಸಾಗಿತ್ತು. ಆ ರೀತಿ ಮೇಲಕ್ಕೆ ಮೇಲಕ್ಕೇ ಏರುತ್ತಿದ್ದಂತೆಯೇ ನನ್ನ ದೇಹದ ಉಷ್ಣವೂ ಏರತೊಡಗಿತು. ಏಕೆಂದರೆ ಆ ತೀವ್ರತೆಗೆ ನನ್ನ ದೇಹವು ಪೂರ್ತಿಯಾಗಿ ಒಪ್ಪಿಕೊಂಡಿರುವದಿಲ್ಲ. ಈ ಎಲ್ಲಾ ಬೆಳಕು ಶಿರದ ಸಮೀಪ ಬರುತ್ತಿದ್ದಂತೆಯೇ, ನಾನು ಸಿಡಿದುಹೋಗುತ್ತೇನೆಯೋ ಎಂದು ಯೋಚಿಸತೊಡಗಿದೆ. ನಾನು ಸಿಡಿದು–ಹೋಗಬಹುದು ಎಂದುಕೊಂಡು, ಈ ಅನುಭವವನ್ನು ತಡೆಯಲು ಯತ್ನಿಸಿದೆ. ಆದರೆ, ಆಗ ನಾನು 'ನಿಶ್ಚಲ ಮತ್ತು ಪ್ರಶಾಂತವಾದ' ಅವರೋಹಣವೊಂದು ನಡೆಯುವ, ಈ ಎಲ್ಲಾ ದೇಹದ ಜೀವಕೋಶಗಳ ಪ್ರಜ್ಞೆಯನ್ನು ವಿಶಾಲಗೊಳಿಸುವ, ಬಹು ಸುಸ್ಪಷ್ಟವಾದ ಸೂಚನೆಯನ್ನು ಸ್ವೀಕರಿಸಿದೆ, ಇದರಿಂದ 'ಸುಪ್ರಮಾನಸದ ಬೆಳಕನ್ನು ಹಿಡಿದಿಟ್ಟುಕೊಳ್ಳಬಹುದು'. ಈ ಮೂಲಕ ನಾನು ವಿಶಾಲಗೊಂಡೆ. ಆ ಬೆಳಕು ಆರೋಹಿಸುತ್ತಿದ್ದಂತೆಯೇ ನಾನು ವೈಶಾಲ್ಯತೆ ಮತ್ತು ಪ್ರಶಾಂತ ಘನದ ಶಾಂತಿಯನ್ನು ಅವರೋಹಣಗೊಳಿಸಿಕೊಂಡೆ. ತಟ್ಟನೇ, ಮುಂದಿನ ಕ್ಷಣದಲ್ಲಿಯೇ ಒಂದು ಕ್ಷಣ ಮೂರ್ಛೆ ಹೋದಂತಾಯಿತು.

ನಾನು ಇನ್ನೊಂದು ಜಗತ್ತಿ(ಲೋಕದಲ್ಲಿರುವಂತೆ)ನಲ್ಲಿರುವಂತೆ ಕಂಡೆ. ಆದರೆ ಅದು ಬಲು ದೂರವಿಲ್ಲ (ನಾನು ಸಂಪೂರ್ಣ ಸಮಾಧಿ ಸ್ಥಿತಿಯಲ್ಲಿ ಇರಲಿಲ್ಲ). ಈ ಜಗತ್ತು ಬಹುತೇಕವಾಗಿ ಭೌತಿಕ ಜಗತ್ತಿನಂತೆಯೇ ನೈಜವಾಗಿದೆ. ಅಲ್ಲಿ ಬಹಳಷ್ಟು ಕೋಣೆಗಳಿವೆ. ಶ್ರೀ ಅರವಿಂದರು ವಿಶ್ರಮಿಸುವ ಕೋಣೆಯಲ್ಲಿ, ಅವರಿಗಾಗಿ ಹಾಸುಗೆಯೊಂದಿದೆ, ಹೌದು, ಅವರು ಅಲ್ಲಿಯೇ ಜೀವಿಸುತ್ತಿದ್ದಾರೆ. ಅವರು ಎಲ್ಲಾ ಸಮಯದಲ್ಲೂ ಅಲ್ಲಯೇ ಇದ್ದಾರೆ; ಅದು ಅವರ ವಾಸಸ್ಥಾನವೂ ಆಗಿದೆ. ನನ್ನ ಕೋಣೆಯೂ ಸಹ ಅಲ್ಲಿಯೇ ಇದೆ. ಇಲ್ಲಿರುವಂತೆಯೇ ಅಲ್ಲಿಯೂ

ದೊಡ್ಡದಾದ ಕನ್ನಡಿ ಇದೆ, ಬಾಚಣಿಕೆಗಳು ಇವೆ, ಎಲ್ಲಾ ರೀತಿಯ ವಸ್ತುಗಳೂ ಇವೆ. ಈ ಎಲ್ಲಾ ವಸ್ತುಗಳ ಸತ್ವವು ಭೌತಿ ಜಗತ್ತಿನಲ್ಲಿರುವ ವಸ್ತುಗಳಷ್ಟೇ ಘನವಾಗಿಯೂ ಇದೆ. ಆದರೆ ಅವು ತಮ್ಮದೇ ಆದ ಬೆಳಕಿನಲ್ಲಿ ತೋರಿಸಲ್ಪಡುತ್ತಿವೆ. ಪಾರದರ್ಶಕವೂ ಅಲ್ಲ, ಅರೆಪಾರದರ್ಶಕವೂ ಅಲ್ಲದ ಸ್ಥಿತಿ. ಉಜ್ಜ್ವಲವಲ್ಲದಿದ್ದರೂ ಸ್ವಪ್ರಕಾಶದಲ್ಲಿ ಹೊಳೆಯುತ್ತಿವೆ. ಕೋಣೆಯ ವಿವಿಧ ವಸ್ತುಗಳು ಮತ್ತು ಮೂಲ ವಸ್ತುಗಳ ಭೌತಿಕ ವಸ್ತುಗಳಂತೆ ಒಂದೇ ರೀತಿಯ ಅಪಾರದರ್ಶಕತೆಯನ್ನು ಹೊಂದಿರುವದಿಲ್ಲ. ಅವು ನಮಗೆ ತಿಳಿದಿರುವ ಭೌತಿಕ ವಸ್ತುಗಳಂತೆ ಶುಷ್ಕ ಮತ್ತು ಕಠಿಣತಮವಾಗಿರುವದಿಲ್ಲ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 6, 1959**

**ಒಂದು ಭವ್ಯವಾದ ಸೌಂದರ್ಯ ಮತ್ತು ಸಾರ್ವಭೌಮತೆಯೊಂದಿಗೆ ಶ್ರೀ ಅರವಿಂದರು**

ಒಂದು ಭವ್ಯವಾದ ಸೌಂದರ್ಯ ಮತ್ತು ಸಾರ್ವಭೌಮಿಕತೆಯೊಂದಿಗೆ ಶ್ರೀ ಅರವಿಂದರು ಅಲ್ಲಿದ್ದರು. ಮುಂಚಿನಂತೆಯೇ ಆಕರ್ಷಕವಾದ ಕೂದಲುಗಳನ್ನು ಹೊಂದಿದ್ದರು. ಸಂಪೂರ್ಣ ವಾಸ್ತವದ ಜೊತೆಗೆ ನೈಜವೂ ಆಗಿದ್ದವು. ಅವರು ಒಂದು ರೀತಿಯ ಭೋಜನವನ್ನೂ ಸಹಿತ ಉಣಬಡಿಸಲ್ಪಟ್ಟರು. ಒಂದು ತಾಸಿನ ಸಮಯ ನಾನು ಅಲ್ಲಿಯೇ ಇದ್ದೆ. (ನಾನು ಮೊದಲೇ ಸಮಯವನ್ನು ನೋಡಿದ್ದೆ, ನಂತರವೂ ಗಮನಿಸಿದ್ದೆ.) ಕೆಲವು ವಿಷಯಗಳನ್ನು ಸಾಕ್ಷಾತ್ಕರಿಸಿಕೊಳ್ಳುವದಕ್ಕಾಗಿ ನಾನು ಶ್ರೀ ಅರವಿಂದರೊಡನೆ ಮತನಾಡಿದೆ. ಆದರೆ ಅವರು ಏನೂ ಹೇಳಲಿಲ್ಲ. ನಾನು ಹೇಳುತ್ತಿದ್ದುದನ್ನು ನಿಶ್ಚಿಂತರಾಗಿ ನಿಶ್ಚಲರಾಗಿ ಕೇಳಿಸಿಕೊಂಡಿದ್ದರು. ಆದರೆ ನನ್ನ ಎಲ್ಲಾ ಶಬ್ದಗಳೂ ಅನುಪಯುಕ್ತ ಎನ್ನುವಂತೆ ನನ್ನೆಡೆಗೆ ನೋಡಿದರು. ಅವರು ಒಂದೇ ಬಾರಿಗೆ ಎಲ್ಲವನ್ನೂ ಅರ್ಥಮಾಡಿಕೊಂಡಿದ್ದರು. ಅವರು ಸನ್ನೆಯೊಂದಿಗೆ ನನಗೆ ಉತ್ತರಿಸಿದರು. ಅವರ ಮುಖದಲ್ಲಿ ಎರಡು ಅಭಿವ್ಯಕ್ತಿಗಳಿದ್ದವು.

ನನ್ನ ವಿಚಾರಕ್ಕೆ ಸಂಬಂಧವೇ ಇಲ್ಲದ ಒಂದು ಅನಿರೀಕ್ಷಿತ ಅಭಿವ್ಯಕ್ತಿ; ಉದಾಹರಣೆಗೆ, ಅವರು ಕನ್ನಡಿಯ ಮೇಲಿದ್ದ ಮೂರು ಬಾಚಣಿಕೆಗಳನ್ನು ತೆಗೆದುಕೊಂಡರು. (ಅವು ನಾನು ಉಪಯೋಗಿಸುತ್ತಿರುವ ಬಾಚಣಿಕೆಯಂತೆಯೇ ಕಂಡರೂ, ಗಾತ್ರದಲ್ಲಿ ಕೊಂಚ ದೊಡ್ಡವಾಗಿದ್ದವು) ಅವುಗಳಲ್ಲಿ ಒಂದನ್ನು ತಮ್ಮ ಕೂದಲಿನಲ್ಲಿ ಇಟ್ಟುಕೊಂಡು, ಉಳಿದ ಎರಡು ಬಾಚಣಿಕೆಗಳನ್ನು, ಹಣೆಯ ನೇರಕ್ಕೆ

ಎಲ್ಲಾ ಕೂದಲು ಸೇರಿರುವಂತೆ ಎರಡೂ ಬದಿಗೆ ಇರಿಸಿಕೊಂಡಿದ್ದರು. ಅದು ನೋಡಲು ಕಿರೀಟದಂತೆಯೇ ಕಾಣುತ್ತಿತ್ತು. ಆಗ ನನಗೆ ಅದರ ಅರ್ಥ ಗೊತ್ತಾಯಿತು, ಅದೇನೆಂದರೆ; ಇವರು ನನ್ನ ವಿಚಾರವನ್ನು ಅಳವಡಿಸಿಕೊಂಡಿದ್ದಾರೆ ಎನ್ನುವ ವಿಷಯ ತಿಳಿಯಿತು; 'ನೋಡು, ನೀನು ತಿಳಿದುಕೊಂಡಿದ್ದೆಲ್ಲವನ್ನೂ ನಾನು ಸ್ವಾಗಿತಸುತ್ತೇನೆ. ಅದಕ್ಕೆ ನನ್ನ ಸಹಮತಿಯು ಇದೆ, ಇದೇ ನನ್ನ ಸಂಕಲ್ಪವೂ ಆಗಿದೆ'. ಆದಾಗ್ಯೂ ನಾನು ಒಂದು ತಾಸಿನ ಕಾಲ ಅಲ್ಲಿಯೇ ಕುಳಿತಿದ್ದೆ.

**ಸತ್ಯದ ಜಗತ್ತು**

ನೋಡಿ, ಈ ಸತ್ಯದ ಜಗತ್ತನ್ನು ಶೂನ್ಯದಿಂದ ಸೃಷ್ಟಿಸಲಾಗಿಲ್ಲ. ಇದು ಸಂಪೂರ್ಣವಾಗಿಯೇ ಸಿದ್ಧಗೊಂಡಿದೆ. ನಮ್ಮ ಪ್ರಸ್ತುತ ಜಗತ್ತಿನ ಒಳ ಪದರದಂತೆಯೇ ಇದೂ ಇದೆ. ಎಲ್ಲವೂ ಇದೆ. ಎಲ್ಲವೂ ಅಲ್ಲಿದೆ.

ನಾನು ಎರಡು ದಿನಗಳ ಕಾಲ ಪೂರ್ತಿಯಾಗಿ 'ಆ ಸ್ಥಿತಿ'ಯಲ್ಲಿ ಇದ್ದೆ; ಪರಮಾನಂದದಲ್ಲಿದ್ದೆ. ಈ ಅವಧಿಯಲ್ಲಿ ಪೂರ್ತಿಯಾಗಿ ಶ್ರೀ ಅರವಿಂದರೂ ನನ್ನ ಜೊತೆಗಿದ್ದರು. ನಾನು ನಡೆಯುತ್ತಿರುವಾಗ ಅವರು ನನ್ನೊಡನೆ ನಡೆದಾಡಿದರು; ನಾನು ಕುಳಿತಾಗ ಅವರೂ ಪಕ್ಕದಲ್ಲಿ ಕುಳಿತುಕೊಂಡರು. ಆ ದಿನ, ಅಗಸ್ಟ 15 ರಂದೂ ಸಹ ದರ್ಶನದ ಅವಧಿಯಲ್ಲಿ ಅವರು ಅಲ್ಲಿಯೇ ಇದ್ದರು. ಆದರೆ ಈ ವಿಷಯದ ಬಗೆಗೆ ಯಾರಿಗೆ ಅರಿವಿದೆ? ಕೇವಲ ಕೆಲವೇ ಕೆಲವರಿಗೆ ಮಾತ್ರ – ಅದೂ ಒಬ್ಬರಿಗೇ ಎರಡು ಜನಕ್ಕೋ – ಏನೋ ಅನುಭವವಾಯಿತು. ಆದರೆ ಯಾರು ನೋಡಿದ್ದಾರೆ? ಯಾರೂ.. ಯಾರೂ ಇಲ್ಲ.

ನಾನು ಶ್ರೀ ಅರವಿಂದರಿಗೆ ಈ ಎಲ್ಲಾ ಜನರನ್ನು, ಇಡೀ ಕಾರ್ಯಕ್ಷೇತ್ರವನ್ನೂ ತೋರಿಸಿದೆ. ಈ ಸತ್ಯದ ಜಗತ್ತು, ನಮ್ಮ ಅಸತ್ಯದ ಜಗತ್ತನ್ನು ಬದಲಿಸಲು ಯಾವಾಗ ಬರುತ್ತದೆ ಎಂದು ಅವರನ್ನು ಕೇಳಿದೆ. "ಇನ್ನೂ ಸಿದ್ಧವಾಗಿಲ್ಲ" ಎಂದು ಅವರು ಪ್ರತ್ಯುತ್ತರ ನೀಡಿದ್ದರು.

ಈ ಎರಡು ದಿನಗಳ ಕಾಲ ಶ್ರೀ ಅರವಿಂದರು ಸಂಪೂರ್ಣ ಆನಂದವನ್ನು ನನಗೆ ದಯಪಾಲಿಸಿದರು. ಆದರೆ, ಅದೇ ರೀತಿಯಲ್ಲಿ, ಎರಡನೇ ದಿನದ ಕೊನೆಯಲ್ಲಿ ನನಗೆ ಅರಿವಾದದ್ದು ಏನೆಂದರೆ, ನಾನು ನಿರಂತರವಾಗಿ ಈ ಸ್ಥಿತಿಯಲ್ಲಿ ಇರಬಾರದು. ಕೆಲಸವು ನಡೆಯುತ್ತಿಲ್ಲ, ಕೆಲಸವು ನಡೆಯಬೇಕೆಂದರೆ

ಈ ಭೌತಿಕ ದೇಹದಲ್ಲಿಯೇ ಕಾರ್ಯಮಾಡಬೇಕಿದೆ. ಈ ಸಾಕ್ಷಾತ್ಕಾರವನ್ನು ಭೌತಿಕ ಸ್ಥಿತಿಯಲ್ಲಿಯೇ ಮಾಡಬೇಕಾಗಿದೆ. ಇಲ್ಲದೇ ಹೋದಲ್ಲಿ ಅದು ಪೂರ್ಣಗೊಳ್ಳುವದಿಲ್ಲ. ಹೀಗಾಗಿ ನಾನು 'ಆ ಜಗತ್ತಿನ ಸ್ಥಿತಿಯಿಂದ' ಹಿಂದೆ ಸರಿದೆ, ಮತ್ತೆ ಇಲ್ಲ ಕಾರ್ಯ ಪ್ರಾರಂಭಿಸಿದೆ.

ಆದಾಗ್ಯೂ ಈ ಜಗತ್ತಿಂದ 'ಆ ಜಗತ್ತಿಗೆ' ಸಾಗಲು ಅಥವಾ 'ಆ ಜಗತ್ತು' ಇಲ್ಲಿಗೆ ಸಮೀಪವಾಗಿ ನಿಜವಾದ ಜಗತ್ತಾಗಲು ಸ್ವಲ್ಪವೇ ಸ್ವಲ್ಪ ಪ್ರಯತ್ನ ಸಾಕು. ಒಂದು ಚಿಟಿಕೆ ಹೊಡೆಯುವಷ್ಟೇ ಸಾಕು. ಅಥವಾ **"ಅಂತರ್–ಮನೋಭಾವದಲ್ಲಿ ಒಂದು ಚಿಕ್ಕ ಸಂಪೂರ್ಣವಾದ ಪರಿವರ್ತನೆ ಸಾಕು. ನಾನು ಇದನ್ನು ಹೇಗೆ ತಾನೆ ವಿವರಿಸಲಿ".. ಇದು ಸಾಮಾನ್ಯ ಪ್ರಜ್ಞೆಯ ಹಂತದಲ್ಲಿ ನಿಲುಕುವದಿಲ್ಲ; ಇಲ್ಲಿ ಅಂತರಂಗದ ಒಂದು ಅತಿ ಸೂಕ್ಷ್ಮ ರೂಪಾಂತರವು ಸಾಕು, ಗುಣಮಟ್ಟದಲ್ಲಿಯೂ ಒಂದು ಬದಲಾವಣೆ ಸಾಕು.**

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 6, 1959**

## ಶ್ರೀ ಅರವಿಂದರ ಸನ್ನಿಧಿ

**– ಅನು: ಕಿಶೋರಕುಮಾರ ಕಾಸಾರ**

### ಸಮಾಧಿ ಸ್ಥಿತಿಯಲ್ಲಿಯೂ ಜಾಗೃತಾವಸ್ಥೆಯಲ್ಲಿರುವ ಶ್ರೀ ಅರವಿಂದರು

ಯಾವಾಗಲಾದರೂ ನೀವು ಯಾತನೆಯಲ್ಲಿದ್ದಾಗ ಅಥವಾ ನೀವು ಕಷ್ಟದಲ್ಲಿದ್ದಾಗ, ನಿಮಗೆ ಮುಂದೇನು ಮಾಡಬೇಕೆಂಬುದು ತೋಚದೇ ಇದ್ದಾಗ, ನೀವು ಮಾಡಬೇಕಾಗಿರುವ ಕೆಲಸ ಇಷ್ಟೆ, ಮೊದಲು ಮೌನಕ್ಕೆ ಶರಣಾಗಿ ನಂತರ ನಿಧಾನವಾಗಿ ನಿಮ್ಮ ಬಾಹ್ಯೇಂದ್ರಿಯಗಳ ಕದಗಳೆಲ್ಲವನ್ನು ಮುಚ್ಚಿ ಅಂತರಾಳಕ್ಕೆ ಇಳಿಯಿರಿ. ಅಲ್ಲಿ ನಿಮಗೆದುರಾಗುವ ನಿಮ್ಮ ಅತೀಂದ್ರಿಯ ಕಾಯದೊಡನೆ, ನಿಮ್ಮದೇ ಆದಂತಹ ಆತ್ಮದೊಡನೆ ಅನುಸಂಧಾನಗೊಳ್ಳಿರಿ. ಆಗ ನಿಮ್ಮ ಪ್ರಾಮಾಣಿಕವಾದ ಸಮಸ್ಯೆಗಳಿಗೆ ಸೂಕ್ತ ಉತ್ತರವನ್ನು ಕಂಡುಕೊಳ್ಳುವಿರಿ. ಹಾಗೂ ನೀವು ಮುಂದೇನು ಮಾಡಬೇಕೆಂಬುದರ ಕುರಿತು ಸ್ಪಷ್ಟ ಸಲಹೆಗಳನ್ನು ಪಡೆದುಕೊಳ್ಳುವಿರಿ.

ಇಲ್ಲಿ ನಿಮಗೆ ಇನ್ನೊಂದು ದಾರಿಯಿದೆ. ಆ ಮಾರ್ಗದಲ್ಲಿ ನೀವು ಸಾಗಿದ್ದೇ ಆದಲ್ಲಿ, ಪ್ರತಿಬಾರಿಯೂ ಪರಿಣಾಮಕಾರಿಯಾದಂತಹ ಯಶಸ್ಸನ್ನು ನೀವು

ಪಡೆಯಬಹುದು. ಅದೇ ಶ್ರೀ ಅರವಿಂದರೊಂದಿಗಿನ ನೇರ ಅನುಸಂಧಾನ! ಈ ಅನುಸಂಧಾನದಲ್ಲಿ ನೀವು ಇಡೀ ವಿಶ್ವದ ಯಾವುದೇ ಸಮಸ್ಯೆಗಳಿಗೂ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಲ್ಲಿರಿ. ನೀವು ಯಾವುದಾದರೂ ತೊಂದರೆಯಲ್ಲಿ ಸಿಲುಕಿ ಯಾತನೆಯನ್ನು ಅನುಭವಿಸುತ್ತಿದ್ದರೆ, ನೀವೇ ಮಾಡಿದ ತಪ್ಪಿನಿಂದ ನೀವು ಪಶ್ಚಾತ್ತಾಪವನ್ನು ಅನುಭವಿಸುತ್ತಿದ್ದರೆ, ನಿಮಗೆ ಸಂಬಂಧವೇ ಇಲ್ಲದ, ಅಷ್ಟೊಂದು ಪ್ರಾಮುಖ್ಯತೆಯೂ ಇಲ್ಲದ ಯಾವುದೋ ಒಂದು ಸಾಮಾನ್ಯವಾದ ವಿಷಯ–ವೊಂದರಿಂದ ನೀವು ಕೋಪ–ತಾಪ–ಅಸಮಾಧಾನವನ್ನು ಅನುಭವಿಸುತ್ತಿದ್ದರೆ, ಜೀವನದಲ್ಲಿ ಯಾವುದೂ ಸರಿಯಿಲ್ಲ ಎಂದು ನಿಮಗನ್ನಿಸುತ್ತಿದ್ದರೆ, ನಿಮ್ಮ ಈ ಎಲ್ಲಾ ಅಸಮಾಧಾನಕ್ಕೆ ಕಾರಣವಾದ ಗೊಂದಲವನ್ನು ಪರಿಹರಿಸಿಕೊಳ್ಳಬೇಕಿದ್ದಲ್ಲಿ ನೀವು ನೇರವಾಗಿ ಸಮಾಧಿ ಸ್ಥಿತಿಗಿಳಿದು, ನಿಮ್ಮ ತಲೆ(ಅಹಮಿಕೆ)ಯನ್ನು ತಗ್ಗಿಸಿ ಸಮಾಧಿಯಲ್ಲಿ ಲೀನರಾಗಿ. ಆಗ ನಿಮ್ಮೆದುರು ಪ್ರಕಟಗೊಳ್ಳುವ ಶ್ರೀ ಅರವಿಂದರಲ್ಲಿ ಮುಕ್ತವಾಗಿ ಸಮಾಲೋಚಿಸಿರಿ. ಯಾವುದೇ ಹಿಂಜರಿಕೆ ಅನುಮಾನಗಳಿಲ್ಲದಂತೆ ಅವರೆದುರು ನಿಮ್ಮ ಜೀವಮಾನದ ಪ್ರಶ್ನೆಯನ್ನಿಡಿ. ನಿಮಗೆ ಗೊತ್ತಿರಬಹುದು, ಈ ಹಿಂದೆ ಹಲವಾರು ಬಾರಿ ನೀವು ನಿಮ್ಮ ಸಮಸ್ಯೆಗಳನ್ನು ಹೊತ್ತು ನನ್ನಲ್ಲಿಗೆ ಬಂದು ನನ್ನೊಡನೆ ಅದನನ್ನು ಚರ್ಚಿಸಿ ಮರಳುವಾಗ ನಿಮ್ಮೆಲ್ಲ ಕಷ್ಟಗಳಿಂದಲೂ ನೀವು ಮುಕ್ತರಾಗಿದ್ದೀರಿ. ಏಕೆಂದರೆ, ನಾನು ನಿಮ್ಮೊಳಗೆ ಮನೆಮಾಡಿಕೊಂಡಿದ್ದ ಆ ಸಮಸ್ಯೆಯ ಮೂಲಗಳನ್ನು ನಿಮ್ಮಿಂದ ದೂರ ಓಡಿಸಿದ್ದೆ, ಹಾಗಾಗಿಯೇ ನೀವು ಋಣಾತ್ಮಕ ಅಂಶಗಳಿಂದ ಮುಕ್ತರಾಗಿ, ಅಪಾಯಕಾರಿ ಸ್ವರೂಪಗಳನ್ನು ಕಳೆದುಕೊಂಡು ಹಗುರ ಮನಸ್ಸಿನಿಂದ ತೆರಳಿದ್ದಿರಿ. ಏಕೆಂದರೆ, ಆ ಭಾರಗಳ ಸಂಕೋಲೆಯಿಂದ ನಿಮನ್ನು ಬಿಡಿಸಿ ನಿಮ್ಮಲ್ಲಿ ಸಂತಸವು ಮೂಡುವಂತೆ ಮಾಡಿದ್ದೆ. ಇದನ್ನು ನೀವೇ ಹಲವಾರು ಬಾರಿ ನನಗೆ ಹೇಳಿದ್ದೀರಿ, ನೆನಪಿದೆಯಲ್ಲವೇ?

"ಹೌದು ಶ್ರೀಮಾತೆ, ಹಲವಾರು ಬಾರಿ ನಾನದನ್ನು ನಿಮ್ಮೊಂದಿಗೆ ಚರ್ಚಿಸಿದ್ದೆ."

ಹೀಗೆ ನನ್ನೊಂದಿಗೆ ಚರ್ಚಿಸುವ ರೀತಿಯಲ್ಲಿಯೇ ಅವರೊ(ಶ್ರೀ ಅರವಿಂದರು)ಂದಿಗೂ ಚರ್ಚಿಸಿ, ತಲೆ ತಗ್ಗಿಸಿ ಸಮಾಧಿಯಲ್ಲಿ ಮುಳುಗಿ(ಶ್ರೀಮಾತೆಯರು ತಮ್ಮ ತಲೆಯನ್ನು ತಗ್ಗಿಸಿ.) ಆಗ ನಿಮ್ಮೆದುರು ಸಾಕಾತ್ಷಾರಗೊಳ್ಳುವ ಅವರ ಚಿರಂತನ ಅಸ್ತಿತ್ವದೆದುರು ನಿಮ್ಮ ಕಷ್ಟಗಳನ್ನು ಹೇಳಿಕೊಳ್ಳಿ ಅಥವಾ ಅವರಿಗೆ ಈ ರೀತಿಯಾಗಿ ಪ್ರಾರ್ಥನೆಯನ್ನು ಸಲ್ಲಿಸಿ (ಶ್ರೀಮಾತೆಯವರು ತಮ್ಮ ಹಸ್ತವನ್ನು ಹೃದಯದ ಭಾಗದಲ್ಲಿಟ್ಟು ಮೇಲ್ಮುಖವಾಗಿ ಕೈಯನ್ನು ಆಡಿಸಿ ತೋರಿಸಿದರು.) ಆಗ ನಿಮ್ಮ ಲಕ್ಷ್ಯವೆಲ್ಲವೂ ನಿಮ್ಮ ಅಂತರಂಗದಾಳದಲ್ಲೇ

ನೆಲೆಸಿರಬೇಕು. ಆಗ ಖಂಡಿತವಾಗಿಯೂ ಅವರು ನಿಮ್ಮ ನಿವೇದನೆಯನ್ನು ಕೇಳಿಸಿಕೊಂಡು ನಿಮ್ಮ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಒದಗಿಸುತ್ತಾರೆ. ಈ ರೀತಿಯಲ್ಲಿ ನೀವು ಅವರೊಂದಿಗೆ ಸಂಪರ್ಕವನ್ನು ಸಾಧಿಸಬಹುದು. ಈಗಾಗಲೇ ಅದೆಷ್ಟೋ ಜನ ಅವರೊಂದಿಗೆ ಸಮಾಧಿ ಸಂಪರ್ಕ ಗೈದು ತಮ್ಮ ಉತ್ತರಗಳನ್ನು ಕಂಡುಕೊಂಡಿದ್ದಾರೆ. ಸಮಾಧಿ ಸ್ಥಿತಿಯಲ್ಲಿ ಪ್ರಕಟಗೊಳ್ಳುವ ಶ್ರೀ ಅರವಿಂದರು ಹೆಚ್ಚು ಮುಕ್ತವಾಗಿಯೂ–ಚೈತನ್ಯಯುತವಾಗಿಯೂ ನಮ್ಮೊಡನೆ ಅನುಸಂಧಾನ–ಗೊಳ್ಳುತ್ತಾರೆ. ನೀವು ಶ್ರೀ ಅರವಿಂದರಿಂದಲೇ ಉತ್ತರವನ್ನು ಕಂಡುಕೊಳ್ಳಬೇಕೆಂದಿದ್ದರೆ, ಇನ್ನು ತಡ ಮಾಡಬೇಡಿ. ನೀವು ಸಿದ್ಧರಾಗಿದ್ದರೆ ಮೊದಲು ನನಗೆ ತಿಳಿಸಿ ನಾನು ಆ ಸಂಪರ್ಕ ಸಾಧನೆಗೆ ಯುಕ್ತವಾಗಿರುವ ದಿನಾಂಕ ಮತ್ತು ಸಮಯವನ್ನು ನಿಗದಿ ಮಾಡಿಕೊಳ್ಳುತ್ತೇನೆ. ಮತ್ತು ಸಮಾಧಿ ಸಂಪರ್ಕದ ವಿಧಾನಗಳನ್ನು ತಿಳಿಸುತ್ತೇನೆ. ಈ ಸಂಪೂರ್ಣ ಪ್ರಕ್ರಿಯೆಯ ನಂತರವೇ ನೀವು ಅವರಿಂದ ಉತ್ತರವನ್ನು ಪಡೆಯುವಿರಿ. ಈ ವಿಧಾನವು ಮುಕ್ತವೂ–ಅನುಕೂಲಕರವೂ ಆಗಿದ್ದು ಇದಕ್ಕೆ ನಿಮ್ಮ ಸಹನೆ ಮತ್ತು ತಾಳ್ಮೆ ತುಂಬಾ ಅವಶ್ಯಕ. ಏಕೆಂದರ ಕೆಲವು ಬಾರಿ ನಿಮ್ಮ ಸಂಪರ್ಕವು ನಿಗದಿಗಿಂತ ಹೆಚ್ಚಿನ ಸಮಯವನ್ನು ಪಡೆಯಬಹುದು. ಆದರೆ ಒಂದೊಮ್ಮೆ ನೀವು ಅವರೊಂದಿಗೆ ಸಂಪರ್ಕವನ್ನು ಸಾಧಿಸಿದ್ದೇ ಆದಲ್ಲಿ, ಮುಂದೆ ಯಾವಾಗ ಬೇಕಾದರೂ ನೇರವಾಗಿ ಸಮಾಧಿ ಸ್ಥಿತಿಗಿಳಿದು ಅವರನ್ನು ಕಾಣಬಹುದು.

ಜೀವನದಲ್ಲಿ ಯಾವುದೂ ಸರಿಯಾಗಿ ಸಾಗುತ್ತಿಲ್ಲ ಎಂದೆನಿಸಿದಾಗ, ಅದರ ಮೂಲವನ್ನು ತಿಳಿದುಕೊಳ್ಳಲು, ನಿಮ್ಮಲ್ಲಿರುವ ದೌರ್ಬಲ್ಯವನ್ನು ತೊಡೆದು ಸ್ವಸ್ಥರಾಗಲು, ಶುದ್ಧಾತ್ಮರಾಗಲು ಬಯಸಿದ್ದಲ್ಲಿ, ಆಗ ಶ್ರೀ ಅರವಿಂದರನ್ನು ಸಮಾಧಿ ಸಂಪರ್ಕ ಗೈದು ಪ್ರಶ್ನಿಸಿರಿ. ಅವರು ನಿಮಗೆ ಉತ್ತರವನ್ನಷ್ಟೇ ಅಲ್ಲ ಅದರ ಜೊತೆಗೆ ಆಶೀರ್ವಾದ, ಕರುಣೆ, ಶಾಂತಿ ಹಾಗೂ ಅವರ ದಿವ್ಯಜ್ಯೋತಿಯ ಪ್ರಕಾಶವನ್ನೂ ಕರುಣಿಸುತ್ತಾರೆ. ಅಂದು ನೀವು ಅವರ ಶಕ್ತಿಯುತವಾದ ಪ್ರೇಮ ಮಂಡಲದಲ್ಲಿ ನೆಲೆಸುತ್ತೀರಿ. ಒಮ್ಮೆ ನಿಮ್ಮತನವನ್ನು ಅವರಡಿಯಲ್ಲಿ ಒಪ್ಪಿಸಿಬಿಡಿ ಅವರು ನಿಮ್ಮನ್ನು ಎಲ್ಲ ದುರ್ಘಟನೆಗಳಿಂದಲೂ ಸಂರಕ್ಷಿಸುತ್ತಾರೆ. ಯಾರು ಸರಳ–ಸಜ್ಜನ–ಪ್ರಾಮಾಣಿಕತೆಯಿಂದ ಅವರನ್ನು ಸಂಪರ್ಕಿಸಲು ಪ್ರಯತ್ನಿಸುತ್ತಾರೋ, ಅವರೆದುರಿಗೆ ತಮ್ಮ ದಿವ್ಯ ಚೇತನವನ್ನು ತೆರೆದಿಡುತ್ತಾರೆ. ಅವರು ಈಗಲೂ ಅಲ್ಲಿ ಜಾಗೃತಾವಸ್ಥೆ–ಯಲ್ಲಿದ್ದು, ಇಡೀ ವಿಶ್ವದ ಆಗುಹೋಗುಗಳನ್ನು ಅಲ್ಲಿಂದಲೇ ನಿಯಂತ್ರಿಸುತ್ತಿದ್ದಾರೆ.

**– ಕೃಪಾಪೂರಿತ ಆಶೀರ್ವಾದಗಳು, ಪುಟ 120–21**

## ಶ್ರೀ ಅರವಿಂದರ ಉತ್ತರಗಳು

ನಿಮಗೆ ಗೊತ್ತೇ? ಅವರಿನ್ನೂ ಭೌತಿಕ ಶರೀರದೊಂದಿಗೆ ನಮ್ಮ ನಡುವೆ ಇದ್ದ ಸಮಯದಲ್ಲಿ, ಜನರು ಅವರನ್ನು 'ಭಕ್ತರಿಂದ ಅಂತರವನ್ನು ಕಾಯ್ದುಕೊಂಡಿರುವರೆಂದೂ, ಅವರನ್ನು ಸಂಪರ್ಕಿಸುವುದು ತೀರಾ ದುರ್ಗಮ'ವೆಂದೂ ಭಾವಿಸಿದ್ದರು. ಅವರು ತಿಳಿದುಕೊಂಡಂತೆಯೇ ಸಾದನೆಯ ಮಾರ್ಗದಲ್ಲಿರುವ ಸಾಧಕರನ್ನು ಸಂಪರ್ಕಿಸುವ ಗೋಜಿಗೆ ಅವರು ಪ್ರಯತ್ನಿಸಿಲ್ಲವೆಂಬುದೂ ನಿಜ. ಅದನ್ನು ಸ್ವತಃ ಅರಿತಿದ್ದ ಶ್ರೀ ಅರವಿಂದರು ಮುಂದೆ ತಮಗೆ ಬರುತ್ತಿದ್ದ ರಾಶಿ–ರಾಶಿ ಪತ್ರಗಳಿಗೆ ಉತ್ತರವನ್ನು ಬರೆಯಲೆಂದು ಹಲವಾರು ರಾತ್ರಿಗಳನ್ನು ವಿಶ್ರಾಂತಿಯಿಲ್ಲದಂತೆ ಕಳೆದಿದ್ದರು. ಅದರ ಜೊತೆಜೊತೆಗೆ ಮರ್ತ್ಯವನ್ನು ಉದ್ಧರಿಸುವ ಮತ್ತು ಸುಪ್ರಮಾನಸದ ಅವತರಣಕ್ಕೆಂದು ಭೂಮಿಯನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಈ ಎರಡೂ ಕಾರ್ಯಗಳನ್ನು ಒಟ್ಟೊಟ್ಟಿಗೆ ಮಾಡುತ್ತ, ಒಂದೆಡೆ ಮೃಣ್ಮಯವನ್ನು ಉನ್ನತಿಗೇರಿಸುತ್ತ ಇನ್ನೊಂದೆಡೆ ಸಾಧಕರಿಗೆ ಪತ್ರ ಮುಖೇನ ಮಾರ್ಗದರ್ಶನವನ್ನು ನೀಡುತ್ತ ವಿಶ್ರಾಂತಿಯಿಲ್ಲದಂತೆ ಬಳಲಿದ್ದರು. ಅದಕ್ಕಾಗಿ ಅವರೊಂದು ಉಪಾಯವನ್ನು ಕೈಗೊಂಡರು. ಸಾಧಕರು ನೇರವಾಗಿ ನನ್ನನ್ನು ಸಂಪರ್ಕಿಸಿ, ನನ್ನಿಂದ ಆಶೀರ್ವಾದವನ್ನೂ, ಸಾಧನೆಗೆ ಪೂರಕವಾದ ಸಹಾಯವನ್ನು ಆಂತರಿಕ ಮತ್ತು ಬಾಹ್ಯ ಎರಡೂ ರೀತಿಯಲ್ಲಿ ಪಡೆಯುವ ವಿಧಾನವನ್ನು ರಚಿಸಿದರು. ಆಗ ನಾನು, ನನ್ನಲ್ಲಿಗೆ ಬರುವ ಸಾಧಕರನ್ನು ಸುಪ್ರಮಾನಸದವರೆಗಿನ ಪ್ರಜ್ಞಾರೋಹಣಕ್ಕೆ ಸಿದ್ಧಪಡಿಸುತ್ತ, ಅವರು ಅಲ್ಲಿ ಉದ್ಭವಿಸುವ ಮಾರ್ಗ ಪ್ರತಿಬಂಧಕಗಳಿಂದ ಪಾರಾಗಿ, ಮೇಲೇರುವ ಸಾಮರ್ಥ್ಯವನ್ನು ತುಂಬುತ್ತಿದ್ದೆ. ಆ ಸಮಯದಲ್ಲಿ ಶ್ರೀ ಅರವಿಂದರು, ಮತ್ತೆ ಯೋಗ ಮಾರ್ಗದಲ್ಲಿ ತೆರಳಿ, ವಿವಿಧ ಲೋಕಗಳನ್ನು ಮತ್ತು ನಮ್ಮ ಕಾರ್ಯಾಚರಣೆಗೆ ಅಡ್ಡಿಯನ್ನುಂಟು ಮಾಡುತ್ತಿದ್ದ ವಿವಿಧ ಶಕ್ತಿಗಳನ್ನೂ, ಅಸಂಖ್ಯಾತ ಪ್ರತಿಬಂಧಕ ಪ್ರಜ್ಞಾವಸ್ಥೆಗಳನ್ನೂ ತಮ್ಮ ನಿಯಂತ್ರಣ–ದಲ್ಲಿಟ್ಟುಕೊಳ್ಳುವ ಕಾರ್ಯದಲ್ಲಿ ನಿರತರಾದರು. ಸುಪ್ರಮಾನಸದವರೆಗಿನ ಮಾರ್ಗವನ್ನು, ಹಲವು ಪ್ರಜ್ಞಾ ಸ್ತರಗಳನ್ನು ಶೋಧಿಸುವ ಅಲೌಕಿಕ ಕಾರ್ಯದಲ್ಲಿ ಅವರು ನಿರತರಾಗಿದ್ದರೆ, ಇತ್ತ ನಾನು ಆಶ್ರಮದ ವ್ಯವಹಾರವನ್ನು ನೋಡಿಕೊಳ್ಳುತ್ತ, ಸಾಮೂಹಿಕ ಯೋಗ ಶಿಬಿರವನ್ನೇರ್ಪಡಿಸುತ್ತ, ನನ್ನಲ್ಲಿಗೆ ಬರುವ ಸಾಧಕರಿಗೆ ಮಾರ್ಗದರ್ಶನ ನೀಡುವ ಲೌಕಿಕ ಕಾರ್ಯದಲ್ಲಿ ನಿರತಳಾಗಿದ್ದೆ. ಆ ಸಮಯದಲ್ಲಿ, ಅವರು ಜನರೊಂದಿಗೆ ನೇರ ಸಂಪರ್ಕವನ್ನು ಇಟ್ಟುಕೊಂಡಿರಲಿಲ್ಲ. ಆದರೆ ಈಗ

ಅವರು ವಿಶ್ವಾತ್ಮಕ ಚೇತನವಾಗಿರುವದರಿಂದ ಅವರು ಪ್ರತಿಯೋರ್ವನ ಪ್ರಜ್ಞೆಗೂ ಆತ್ಮೀಯರಾಗಿದ್ದಾರೆ. ಹಾಗಾಗಿ ಈಗ ಯಾರು ಬೇಕಾದರು ಅವರನ್ನು ಸಮಾಧಿ ಸ್ಥಿತಿಯಲ್ಲಿ ನೇರವಾಗಿ ಸಂಪರ್ಕಿಸಬಹುದು.

**– ಕೃಪಾಪೂರಿತ ಆಶೀರ್ವಾದಗಳು, ಪುಟ 121–122**

**ಚಿರಂತನ ಭರವಸೆ**

ಅವರೊಬ್ಬ ಅಸಾಮಾನ್ಯ ಚೇತನ. ಅವರ ಚಿರಂತನ ಅಸ್ತಿತ್ವವು ಇನ್ನೂ ಸಹ ಸಮಾಧಿಯಲ್ಲಿ ಮೂರ್ತರೂಪದಲ್ಲಿದ್ದು ಜಾಗೃತಚೇತನವಾಗಿ ನೆಲೆಸಿದೆ. ಅವರ ಪ್ರಭಾವವು ಅಂತರಂಗವನು ಸ್ಪರ್ಶಿಸಿ, ಅಂತರಾಳವನ್ನು ಛೇದಿಸಿ ಮರ್ತ್ಯದ ಪ್ರಜ್ಞೆಗಳೆಲ್ಲವನ್ನು ತಟ್ಟಿ ಜಾಗೃತಗೊಳಿಸುತ್ತ, ಅವುಗಳನ್ನು, ಬರಲಿರುವ ಆಧ್ಯಾತ್ಮಿಕ ಜೀವನಕ್ಕೆಂದು ಸಿದ್ಧಗೊಳಿಸುತ್ತಿದೆ. ಕೆಲವೊಮ್ಮೆ ದೈವಿಕ ಅಸ್ತಿತ್ವದ ಕುರಿತು ಸ್ಪಷ್ಟ ನಿಲುವನ್ನು ತಿಳಿಯದೇ ಇರುವ ಆಜ್ಞೇಯತಾವಾದಿಗಳು, ದೈವೀಕತೆಯನ್ನು ಅಲ್ಲಗಳೆಯುವ ನಾಸ್ತಿಕವಾದಿಗಳು ಹಾಗೂ ದೇವದ್ವಿಷರ ಅಸುರೀ ಪ್ರಭಾವಕ್ಕೊಳಗಾದ ಜನರು ಕೇವಲ ಚೋದ್ಯಕ್ಕೆಂದು–ಕುತೂಹಲಕ್ಕೆಂದು ಅವರ ಸಮಾಧಿಯನ್ನು ದರ್ಶಿಸಲು ಬರುತ್ತಾರೆ. ಆದರೆ ಮರಳುವಾಗ ಆಂತರಿಕ ಶಾಂತಿಯೊಂದನ್ನು ಹೊತ್ತು, ಮನಪರಿವರ್ತನೆಯನ್ನು ಮಾಡಿಕೊಂಡು, ವಿಸ್ಮಿತರಾಗಿ ಮುನ್ನಡೆಯುತ್ತಾರೆ. ಏಕೆಂದರೆ, ಅವರು ಸಮಾಧಿಯ ಮುಂದೆ ಹಾದು ಹೋಗುವಾಗ ಅಲ್ಲಿ ಸುರಿಯುವ ಶ್ರೀ ಅರವಿಂದರ ಶಾಂತಿ ಮತ್ತು ಕರುಣೆಯಲ್ಲಿ ಮಿಂದು ಶುದ್ಧಾತ್ಮರಾಗಿ ಮುಂಬರಿಯುತ್ತಾರೆ. ಭವಿತವ್ಯದಲ್ಲಿ ಅವತರಿಸಲಿರುವ ದಿವ್ಯತೆಯ ಅನಾವರಣಕ್ಕೆ ನಮಗಿರುವ ಏಕೈಕ ಚಿರಂತನ ಭರವಸೆಯೆಂದರೆ ಅವರೊಬ್ಬರೆ. ಭುವಿಯ ವಾತಾವರಣದಲ್ಲಿ ದಿವ್ಯಶಕ್ತಿ ಮತ್ತು ದಿವ್ಯಪ್ರಕಾಶಗಳನ್ನು ಪಸರಿಸುತ್ತ, ಭೌತಿಕ ಪರಿಸರದಲ್ಲಿ ದಿವ್ಯವೂ–ಭವ್ಯವೂ ಆದ ಶಾಂತಿಯನ್ನು ನೆಲೆಗೊಳಿಸುತ್ತ ಇಡೀ ಸ್ತರವನ್ನೇ ದಿವ್ಯ ಅಭಿವ್ಯಕ್ತಿಯೆಡೆಗೆ ಕೊಂಡೊಯ್ಯುವ ಏಕಮಾತ್ರ ಚೇತನವೆಂದರೆ ಅವರೊಬ್ಬರೇ. ನಿಮಗೆ ಗೊತ್ತೇ? ಅಲ್ಲಿ ಅವರು ತಮ್ಮ ದಿವ್ಯ ಶರೀರವನ್ನು ಹೊತ್ತು ಇಡೀ ಮನುಕುಲದ ಪ್ರತಿನಿಧಿಯಾಗಿ ನೆಲೆಸಿದ್ದಾರೆ. ಅವರು ಅಂತರ್ಯಜ್ಞ, ತಪಸ್ಸು ಮತ್ತು ಸಾಧನೆಗಳಿಂದ ತಮ್ಮ ಮರ್ತ್ಯ ದೇಹವನ್ನು ದಿವ್ಯ ಶರೀರವನ್ನಾಗಿ ಪರಿವರ್ತಿಸಿದ್ದಾರೆ. ಹಾಗೂ ತಾವು ಸಾಕ್ಷಾತ್ಕರಿಸಿಕೊಂಡ, ಅನುಭವಿಸಿದ ಅಲೌಕಿಕ ದರ್ಶನಗಳು ಮತ್ತು ಯೋಗಿಕ ಸಾಧನೆಯಿಂದ ಸಂಚಯಿಸಿದ ದಿವ್ಯಶಕ್ತಿಗಳು

ಅವರ ದಿವ್ಯಶರೀರವನ್ನು ಒಂದು ಶಕ್ತಿ ಕೇಂದ್ರವನ್ನಾಗಿ ಪರಿವರ್ತಿಸಿವೆ. ಅದರಿಂದ ಉದಿಸುವ ಶಕ್ತಿ–ಪ್ರಕಾಶಗಳು ಇಡೀ ವಾತವಾರಣವನ್ನು ಪ್ರವೇಶಿಸಿ ಅವರ ಅಸ್ತಿತ್ವವನ್ನು ಇಲ್ಲಿ ನೆಲೆಸುವಂತೆ ಮಾಡುತ್ತದೆ. ಅವರೊಬ್ಬ ಕುಂದದ ಸುಪ್ರಮಾನಸದ ಶಕ್ತಿಯೆಂಬುದನು ಸಾರುತ್ತದೆ.

ಅವರ ದರ್ಶನಕ್ಕೆಂದು ಬರುವ ಜನರು ಸಮಾಧಿಯ ಮುಂದಿನಿಂದ ಹಾದು ಹೋಗುವಾಗ ತಮಗರಿವಿಲ್ಲದಂತೆಯೇ ಅಲ್ಲಿನ ದಿವ್ಯ ಶಾಂತಿಯಲ್ಲಿ ಮಿಂದು ಶುದ್ಧಾತ್ಮರಾಗುತ್ತಾರೆ, ಸಮಾಧಿಯೊಂದಿಗೆ ಅನುಸಂಧಾನಗೊಳ್ಳುವವರು ನಿಗೂಢವಾದ ದಿವ್ಯತೆಯನ್ನು ಅನುಭವಿಸುತ್ತಾರೆ. ಸಮಾಧಿಯನ್ನು ಸ್ಪರ್ಶಿಸುವವರು ತಮಗಾದ ಪರಿವರ್ತನೆಯ ಮೂಲವನ್ನರಿಯದೆ ದಿಗ್ಭ್ರಾಂತರಾಗುತ್ತಾರೆ. ಏಕೆಂದರೆ ಅಲ್ಲಿ ಸುತ್ತಲೂ ತುಂಬಿದ ಶಕ್ತಿಯು ಅವರ ಮನದಲ್ಲಿರುವ ಧಾರ್ಮಿಕ ಭಾವನೆಗಳನ್ನು ನೆಲಸಮ ಮಾಡಿ, ಪ್ರತಿಯೊಂದು ತಾಪತ್ರಯಗಳಿಗೂ ಸ್ವರ್ಗದೆಡೆಗೆ ನೋಡಿ ಪರಿಹಾರಕ್ಕೆಂದು ಕೂಗಿ ಕರೆಯುವ ದೀನ ಮನಸ್ಥಿತಿಗಳನ್ನು ಒಡೆದು, ಅವರನ್ನು ಒಂದು ಅನೂಹ್ಯ ವಸ್ತುಸ್ಥಿತಿಗೆ ಕೊಂಡೊಯ್ದು ನಿಲ್ಲಿಸುತ್ತದೆ. ಅಲ್ಲಿ ಅವರೆದುರು ಅನಾವರಣಗೊಳ್ಳುವ ಋತದ ಅದ್ಭುತ ವಿದ್ಯಮಾನದೆದುರು ಬೆರಗಾಗಿ ನಿಲ್ಲುವಂತೆ ಮಾಡುತ್ತದೆ. ಒಂದೊಮ್ಮೆ ಅವರ ಸಮಾಧಿಯ ಸಾಮಿಪ್ಯಕ್ಕೆ ಬಂದವರು ಆ ದಿವ್ಯ ಅನುಭೂತಿಯನ್ನು ಮತ್ತೆ–ಮತ್ತೆ ಪಡೆಯಲು, ತನ್ನ ಅಂತರಂಗದ ಶಕ್ತಿ–ಶಾಂತಿಗಳನ್ನು ಮರಳಿ ಸಂಗ್ರಹಿಸಲು ಪದೇ–ಪದೇ ಬರುತ್ತಲೇ ಇರುತ್ತಾರೆ. ಸಮಾಧಿಯೊಳಗೆ ಮೂರ್ತರೂಪದಲ್ಲಿರುವ ಅವರ ಚೇತನವು ಸುತ್ತಣ ವಾತಾವರಣವನ್ನು ಸದಾ ಪ್ರಬಲ ಮತ್ತು ಶಕ್ತಿಯುತವಾಗಿರುವಂತೆ ನೋಡಿಕೊಳ್ಳುತ್ತದೆ. ಆ ಪ್ರಜ್ಞಾವಲಯವು ಬೆಳಕು ಮತ್ತು ಬಣ್ಣಗಳಿಂದ ಕೂಡಿರುವದನ್ನು ನಾನು ಕಂಡಿದ್ದೇನೆ. ಅದೊಂದು ಗ್ರಹಿಸಲಾಗದ ಆನಂದದ ಸೌಂದರ್ಯ, ಪವಿತ್ರ ಚೇತನದ ಚಿರಂತನ ಅಸ್ತಿತ್ವ, ಈ ಜಗತ್ತು ಇನ್ನೂ ಅನುಭವಿಸದೇ ಇರುವ ದಿವ್ಯ ಮಾಧುರ್ಯವನ್ನು ಸೂಸುವ ದೈವಿಕ ದ್ರವ್ಯ. ನನಗೆ ತಿಳಿದಂತೆ ಅದೊಂದು ದಿವ್ಯ ಜೀವನದ ಮಹಾತಾಕ್ವಾಂಕ್ಷೆಯನ್ನುಳ್ಳ ಹೃದಯವಾಗಿದೆ. ಹಾಗಾಗಿ ಸಮಾಧಿ ಸುತ್ತಲಿನ ಪ್ರದೇಶವು, ಈ ಭುವಿಯು, ಇಲ್ಲಿಯವರೆಗೂ ಕಂಡಿರದಂತಹ, ಅಸಂಖ್ಯಾತ ಸ್ವರ್ಗಗಳ ಅನುಭವಗಳನ್ನೂ ಮೀರಿಸುವಂತಹ ಆನಂದದ ವಲಯವಾಗಿದೆ.

**– ಕೃಪಾಪೂರಿತ ಆಶೀರ್ವಾದಗಳು, ಪುಟ. 122–25**

## ಅವರ ಭವ್ಯ ಅಸ್ತಿತ್ವ

ಶ್ರೀ ಅರವಿಂದರ ಭಕ್ತರು. ತಮ್ಮ ಪ್ರಜ್ಞೆಗಳನ್ನು ಶ್ರೀ ಅರವಿಂದರೊಂದಿಗೆ ಒಂದಾಗಿಸಲೆಂದು ಹಾತೊರೆಯುತಿಹ ಜನರು, ಅವರ ಅಸಾಮಾನ್ಯ ಅಸ್ತಿತ್ವವನು ಅನುಭವಿಸಲು ಕಾತರರಾಗಿರುವವರು, ಇಲ್ಲಿ ನನ್ನನ್ನು ಈ ಮೂರ್ತರೂಪದಲ್ಲಿ ಕಾಣುವಂತೆ ಅವರನ್ನೂ ಸಹ ಕಂಡು ತಮ್ಮ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಲೆಂದು ಆ ಒಂದು ಸ್ಥಳವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಅಲ್ಲಿ ಅವರು ತೆರೆಮರೆಯಲ್ಲಿದ್ದು, ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸಿ ಒಂದು ನವ್ಯ ಸೃಷ್ಟಿಯನ್ನೇ ರಚಿಸುವ ಮಹಾಕಾರ್ಯದಲ್ಲಿ ನಿರತರಾಗಿದ್ದಾರೆ. ತಮ್ಮ ನಿರಂತರ ಕಾರ್ಯ, ಅಗಾಧ ತಾಳ್ಮೆ, ದೃಢಸಂಕಲ್ಪ ಮತ್ತು ಕ್ರಿಯಾ ವಿಧಾನಗಳಿಂದ ಅದನ್ನು ಕಾರ್ಯಗತಗೊಳಿಸುತಿದ್ದಾರೆ. ಹಾಗೂ ಒಂದಾದ ನಂತರ ಒಂದರಂತೆ ಜಯವನ್ನು ಸಾಧಿಸುತ್ತ ಮುನ್ನುಗ್ಗುತ್ತಿದ್ದಾರೆ. ಮೊದಲಿಗೆ ಇಡೀ ಮನುಕುಲದ ಮರ್ತ್ಯ ಪ್ರಜ್ಞೆಯನ್ನು ಪರಿವರ್ತಿಸುವದು. ನಂತರ ಅದನ್ನು ಎಲ್ಲಾ ಆಯಾಮದಿಂದಲೂ ಸಮರ್ಥವಾಗಿಸುವದು. ದಿನದಿನದ ಜಂಜಡ, ಒತ್ತಡ ಮತ್ತು ಕ್ಷಣಿಕವಾದ ಏಳುಬೀಳುಗಳಿಂದ ಮಾನವನನ್ನು ಹಿಡಿದೆತ್ತಿ ಅವರನ್ನು ಜೀವನದ ಎಲ್ಲಾ ಅಡೆತಡೆಗಳನ್ನು ಜಯಿಸಿ ಮುನ್ನುಗ್ಗುವಂತೆ ಸಿದ್ಧಗೊಳಿಸುವದು, ಮತ್ತು ಆ ಪರಿವರ್ತನೆಯ ಕಾರ್ಯ ಮತ್ತು ಕ್ರಿಯಾ ವಿಧಾನಗಳನ್ನು ಜಾಗತಿಕ ಮಟ್ಟದಲ್ಲಿ ಪ್ರಚುರಪಡಿಸುವದು ಮತ್ತು ಈ ಪ್ರಕ್ರಿಯೆಗಳೆಲ್ಲವನ್ನೂ ಅವರ ದಿವ್ಯ ಪ್ರಕಾಶದ ಶಾಂತಿ ಧಾಮದಲ್ಲೇ ನಡೆಸತಕ್ಕದ್ದು. ಹಾಗೂ ಈ ಪುನರುಜ್ಜೀವನವು ಆಧ್ಯಾತ್ಮಿಕ ರೂಪದಲ್ಲಿಯೇ ಜರುಗಬೇಕೆಯೇ ಹೊರತು ಧಾರ್ಮಿಕ ಡಂಭಾಚಾರ, ನಾಸ್ತಿಕವಾದ ಹಾಗೂ ಯುದ್ಧ, ಅತಿರಿಕ್ತ ಹಿಂಸೆ, ರಕ್ತಪಾತಗಳಂತಹ ಘೋರ ರೂಪಗಳಲ್ಲ! ಮೃಗೀಯ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಪಶುವಿಗಿಂತ ವಿಹೀನನಾದ ಮಾನವನ ಅಧಿಕಾರದ ಲಾಲಸೆ, ರಕ್ತದ ಹಪಹಪಿಯಿಂದ ಇಡೀ ಜಗತ್ತು ಕಾಲಾಂತರದಲ್ಲಿ ಜರುಗಿದ ಕದನ, ಕಾಳಗ, ಹಾಗೂ ಹಿಂಸಾತ್ಮಕ ಘಟನೆಗಳಿಂದ ಬೇಸತ್ತು ಹೋಗಿದೆ. ಬರಲಿರುವ ಉತ್ತಮ ನಾಳೆಗಳಿಗಾಗಿ ಕಾದುಕುಳಿತಿದೆ.

ಬಹುಕಾಲದಿಂದಲೂ ಹೀಗೆಯೇ ಮಾನವನು ತನ್ನ ಪ್ರಜ್ಞಾಪ್ರವರ್ತನೆಯ ಪ್ರಯತ್ನವನ್ನೇ ಕೈಗೊಂಡಿಲ್ಲ! ಇದೊಂದು ಬಗೆಹರಿಯದ ಕಗ್ಗಂಟಾಗಿ ಪರಿಣಮಿಸಿದೆ. ಮರ್ತ್ಯನಿವಾಸಿಗಳಾದ ಸಾಮಾನ್ಯರಷ್ಟೇ ಅಲ್ಲ, ಬದಲಾಗಿ ವಿಶೇಷ ಶಕ್ತಿ–ಸಾಮರ್ಥ್ಯಗಳನ್ನು ಪಡೆದಿರುವ ಅಸಾಮಾನ್ಯರು ಸಹಿತ ಈ ಅತಿ ಪ್ರಜ್ಞೆ ಮತ್ತು

ಅಪ್ರಜ್ಞೆಗಳ ನಡುವೆ ವಿಕಸನದ ನಿಶ್ರೇಣಿಯೊಂದನ್ನು ನೆಡುವ ಸಾಹಸವನ್ನು ಕೈಗೊಂಡಿಲ್ಲ. ಈ ಬೇಜವಾಬ್ದಾರಿತನವೇ ಮಾನವ ಜನಾಂಗವನ್ನು ಈ ಹಂತಕ್ಕೆ ತಂದು ನಿಲ್ಲಿಸಿದೆ.

ಆದರೆ ಚಿಂತಿಸುವ ಅಗತ್ಯವಿಲ್ಲ. ಆ ಒಬ್ಬ ದಿವ್ಯ ಪುರುಷರಿದ್ದಾರೆ! ಭುವಿಯ ಪುನರುಜ್ಜೀವನಕ್ಕೆಂದು ತಮ್ಮ ತಪಶ್ಶಕ್ತಿಯನ್ನು ವಿನಿಯೋಗಿಸಿ ಮರ್ತ್ಯವನ್ನು ಹೊಸಜಗಕೆ–ಹೊಸಯುಗಕೆ ಕೊಂಡೊಯ್ಯುವ ಹೊಣೆಗಾರಿಕೆಯನ್ನು ಹೊತ್ತು, ತಮ್ಮ ಮಹಾನ್ ಕಾರ್ಯದಲ್ಲಿ ಎದುರಾಗುವ ಅಡ್ಡಿ–ಆತಂಕಗಳೆಲ್ಲವನ್ನು ಕ್ಷಣಾರ್ಧದಲ್ಲಿ ನಿರ್ಮೂಲಿಸಿ, ಇಡೀ ಮಾನವ ಜನಾಂಗವನ್ನು ದಿವ್ಯ ಪ್ರಕಾಶದಿಂದ ತುಂಬಿದ ಭವಿಷ್ಯದ ಪ್ರಪಂಚಕ್ಕಾಗಿ ಸಿದ್ಧಪಡಿಸುತ್ತಿದ್ದಾರೆ. ಅವರು ಏಕಾಂಗಿಯಾಗಿಯೇ ಎಲ್ಲ ಅಡಚಣೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಏಕೆಂದರೆ, ಅವರು ನಮ್ಮ ಅಸ್ತಿತ್ವದ ಪ್ರತಿನಿಧಿಯಾಗಿದ್ದಾರೆ. ಭೂಮಂಡಲವನ್ನು ಪುನರುತ್ಥಾನ–ಗೊಳಿಸುವ ಅವರ ದಿವ್ಯ ಯೋಜನೆಯಲ್ಲಿ, ಮರ್ತ್ಯವು ಬಹುಷಃ ವಿಕಾಸ ಚಕ್ರದ ಮೊದಲನೇ ಹಂತವನ್ನು ಮಾತ್ರ ತಲುಪಿದೆ, ಆದರೆ ಇನ್ನು ಕೆಲವೇ ದಿನಗಳಲ್ಲಿ ನಾವು ದಿವ್ಯ ಪ್ರಕಾಶವನ್ನೂ – ಮಹತ್ತರ ಬದಲಾವಣೆಯನ್ನೂ ಕಾಣುತ್ತೇವೆ. ಅವರ ಸನ್ನಿಧಿಯು ಮಾತ್ರ ಆ ದಿವ್ಯ ಸಾಮ್ರಾಜ್ಯವನ್ನು ಧರೆಗಿಳಿಸಿ ಅದನ್ನು ಭುವಿಯ ವಾತಾವರಣದಲ್ಲಿ ಸ್ಥಾಪಿಸುವ ಮಹೋನ್ನತ ಕಾರ್ಯವನ್ನು ಕೈಗೊಳ್ಳಬಲ್ಲದು.

**– ಕೃಪಾಪೂರಿತ ಆಶೀರ್ವಾದಗಳು, ಪುಟ 125**

## ಶ್ರೀ ಅರವಿಂದರ ದಿವ್ಯಶಕ್ತಿ

ಕೆಲ ದಿನಗಳ ಹಿಂದೆಯಷ್ಟೆ 'ಒ' ಅವರ ಸಹೋದರಿ ದೇಹಾಂತರಾದರು (ಅವರು ಮಾನಸಿಕವಾಗಿ ಬಹಳ ಕುಗ್ಗಿಹೋಗಿದ್ದು, ಬದುಕುವ ಯಾವುದೇ ಲಕ್ಷಣಗಳಿರಲಿಲ್ಲ) ಅಂದು ನಾನು ಮೇಲ್ಮಹಡಿಯ ಸ್ನಾನದ ಮನೆಯಲ್ಲಿದ್ದಾಗ, ಅವಳ ಚೇತನವು ದೇಹದಿಂದ ನಿರ್ಗಮಿಸುತ್ತಿದೆ ಎಂಬುದು ತಿಳಿಯಿತು. ಕೂಡಲೇ ನಾನು ಅಲ್ಲಿಯಿಂದಲೇ ಶ್ರೀ ಅರವಿಂದರನ್ನು ಸಂಪರ್ಕಿಸಿ, (ಈ ಹಿಂದೆಯೂ ನಾನು ಅನೇಕ ಬಾರಿ ಅವರನ್ನು ಸಂಪರ್ಕಿಸಿದ್ದೆ.) "ಈ ಆಶ್ರಮದಲ್ಲಿ ಮರಣಹೊಂದುವ ಜನರ ಆತ್ಮಕ್ಕೆ ಏನಾಗುತ್ತದೆ?" ಎಂದು ಪ್ರಶ್ನಿಸಿದೆ. ಕೂಡಲೆ ಅವರು "ಅಲ್ಲಿ ನೋಡಿ" ಎಂದರು. ಅವರು ತೋರಿದೆಡೆಗೆ ನೋಡಿದ ನನಗೆ ಅದ್ಭುತ ದೃಶ್ಯವೊಂದು ಗೋಚರಿಸಿತು. ಅಲ್ಲಿ ಆಕೆಯ ಚೇತನವು ನಿಧಾನವಾಗಿ ಮೇಲೇರುತ್ತಿತ್ತು. ಹಾಗೂ

ಅವಳ ಲಲಾಟ ಪ್ರದೇಶದಲ್ಲಿ ಅತ್ಯಂತ ಪ್ರಕಾಶಮಾನವಲ್ಲದ, ಆದರೆ ಸ್ಪಷ್ಟವಾಗಿರುವ ಶ್ರೀ ಅರವಿಂದರ ಸಂಕೇತವು ಸ್ವರ್ಣೀಯ ಜ್ಯೋತಿಯಿಂದ ಥಳಗುಟ್ಟುತ್ತಿರುವುದನ್ನು ಕಂಡೆ. ಅವರ ಸಂಕೇತವನ್ನು ಹೊತ್ತು ಮೇಲೇರುತ್ತಿದ್ದ ಆಕೆಯ ಚೇತನವು, ದೇಹಾಂತ ಪೂರ್ವದಲ್ಲಿದ್ದ ಎಲ್ಲ ಮಾನಸಿಕ ತೊಂದರೆಗಳಿಂದ ಮುಕ್ತವಾಗಿತ್ತು. ನಾನು ನೋಡುನೋಡುತ್ತಿದ್ದಂತೆ ಆ ಚೇತನವು ಪ್ರಶಾಂತವಾಗಿ ತೇಲುತ್ತ ಮೇಲೇರುತ್ತ, ನಮ್ಮ ದೃಷ್ಟಿಯಿಂದ ಅದೃಶ್ಯವಾಯಿತು. ಆಗ ಶ್ರೀ ಅರವಿಂದರು, "ಆಶ್ರಮದ ನಿವಾಸಿಗಳು, ಮತ್ತು ಇಲ್ಲಿ ದೇಹಾಂತರಾದ ಎಲ್ಲ ಆತ್ಮಗಳು ಅಲ್ಲಿ ಸಂರಕ್ಷಿತವಾಗುವವು. ತಮ್ಮಂತರಾಳದೊಳಗಿರುವಂತೆ ಎಲ್ಲ ತರಹದ ಭೌತಿಕ ಕ್ಲೇಷಗಳಿಂದ ಮುಕ್ತವಾಗಿ ಸುರಕ್ಷಿತವಾಗಿರುವವು" ಎಂದು ತಿಳಿಸಿದರು.

ಅಂದು ಅವರ ದಿವ್ಯಶಕ್ತಿಯ ಪ್ರಭಾವಕ್ಕೊಳಗಾದ ನಾನು ಎಷ್ಟು ಆಶ್ಚರ್ಯಚಕಿತಳಾದೆ ಎಂಬುದನ್ನು ಬರಿ ಮಾತಿನಿಂದ ವಿವರಿಸಲು ಸಾಧ್ಯವಿಲ್ಲ. ಆದರೆ ಅವರು ತಿಳಿಸಿದಂತೆ ನಾನೂ ಕೂಡ ಈ ಆಶ್ರಮ ನಿವಾಸಿಯಾಗಿದ್ದೂ, ನಾನೂ ಸಹ ನನ್ನ ಆಯುವಿನ ನಂತರ ದಿವ್ಯ ಚೇತನದ ರೂಪದಲ್ಲಿದ್ದು ಮೇಲಿನಿಂದಲೇ ನಿಮ್ಮೆಲ್ಲರಿಗೆ ಸಹಾಯಕ ಶಕ್ತಿಯಾಗಿ ನೆಲೆಸುವೆ ಎಂಬುದನ್ನು ನೆನೆದು ಸಂತಸಪಟ್ಟೆ. ಅವರ ದಿವ್ಯಶಕ್ತಿಯ ಮಹಿಮೆಯನ್ನು ಕುರಿತು ಇನ್ನೂ ಹಲವಾರು ನಿದರ್ಶನಗಳಿವೆ. ಈಗ 'ಓ'. ಆ ಅವರ ಉದಾಹರಣೆಯನ್ನೇ ತೆಗೆದುಕೊಳ್ಳಿ. ಅವರು ತಮ್ಮಿಡೀ ಜೀವನವನ್ನು ಶ್ರೀ ಅರವಿಂದರ ಸೇವೆಯಲ್ಲಿಯೇ ಮುಡಿಪಾಗಿರಿಸಿದಂತವರು. ಅವರೊಬ್ಬ ಪವಿತ್ರ, ಪ್ರಜ್ಞಾಯುತ, ಶುದ್ಧ ಸೇವಾ ಮನೋಭಾವವುಳ್ಳ ವ್ಯಕಿತ್ಯಾಗಿದ್ದರು. ಅವರು ನನ್ನ ಭಾವಚಿತ್ರವನ್ನು ಅವರೆದೆಗೆ ಬಿಗಿದಪ್ಪಿಕೊಂಡೇ ದೇಹದಿಂದ ನಿರ್ಗಮಿಸಿದ್ದರು.

ಆದರೆ ಅವರ ದಿವ್ಯಾಂಶವು ಇನ್ನೂ ಸಹ ನಮ್ಮ ಸುತ್ತಲೂ ಅತೀಂದ್ರಿಯ ರೂಪದಲ್ಲಿ ನೆಲೆಸಿದೆ. ಅಂದು ಅವರು ಸಾವಿಗೆ ಸನ್ನಿಹಿತವಾಗಿದ್ದ ದಿನದಂದು ಕಿರಿಯ 'ಓ' ಎನ್ನುವವಳು ಶ್ರೀ ಅರವಿಂದರ ಸಮಾಧಿಯ ಮುಂದೆ ಧ್ಯಾನಸ್ಥಳಾಗಿ ಕುಳಿತಿರುವಾಗ ಧ್ಯಾನದಾಳದಲ್ಲಿ ದರ್ಶನವೊಂದನ್ನು ಕಂಡಳು. ಅದರಲ್ಲಿ, 'ಸಮಾಧಿಯ ಪಕ್ಕದ ಮರವೊಂದರಲ್ಲಿದ್ದ ಹಳದಿ ಬಣ್ಣದ ಹೂವುಗಳು (ಅವುಗಳನ್ನೇ ನಾನು ಸೇವಾ ಪುಷ್ಪಗಳೆಂದು ಕರೆದದ್ದು.) ತಮ್ಮಷ್ಟಕ್ಕೆ ತಾವೇ ಒಂದಕ್ಕೊಂದು ಹೆಣೆಯುತ್ತ–ಒಂದಾಗುತ್ತ ಒಂದು ಪುಷ್ಪಗುಚ್ಛವಾಗಿ ರೂಪುಗೊಂಡವು. ಹಾಗೆ ನೋಡುತ್ತಿದ್ದಂತೆಯೇ ಆ ಪುಷ್ಪಗುಚ್ಛವು ನಿಧಾನವಾಗಿ ಮೇಲೆರುತ್ತ ನೇರವಾಗಿ ಓ!

ಅದು ಅವರ ಭಾವಚಿತ್ರದ ಮೇಲೆ ನೆಲೆಕಂಡಿತು.’ ಕೂಡಲೆ ಧ್ಯಾನದಿಂದ ಎಚ್ಚೆತ್ತ ಅವಳು ಅವಸರದಿಂದಲೇ ತನ್ನ ಮನೆಗೆ ಧಾವಿಸಿದಳು. ಆದರೆ ಅಷ್ಟೊತ್ತಿಗಾಗಲೇ ಅವರ ಶಿವ(ಜೀವ) ಮುಗಿಲಿಗೆ ನೆಗೆದಿತ್ತು; ದೇಹವು ಶವವಾಗಿತ್ತು.

ಅಂದು ಅವಳಿಗಾದ ದರ್ಶನದ ವಿಷಯವು ನನ್ನ ಹೊರತಾಗಿ ಬೇರಾರಿಗೂ ಗೊತ್ತಿರಲಿಲ್ಲ. ಆದರೆ ಅದೇ ಸಮಯಕ್ಕೆ ನನಗೂ ಒಂದು ದರ್ಶನವಾಗಿತ್ತು. ಅದರಲ್ಲಿ ‘ಓ. ಆ ಯವರು ದೇಹವನ್ನು ತೊರೆದ ಕೂಡಲೇ ಅವರ ಒಟ್ಟೂ ದಿವ್ಯಾಂಶವು ಏಕತ್ರವಾಗುತ್ತ, ಚದುರಿಹೋಗದಂತೆ ಏಕರೂಪವಾಗುತ್ತ, ದಿವ್ಯಾಕಾಂಕ್ಷೆಯೊಂದನ್ನು ಹೊತ್ತು ನಿಧಾನವಾಗಿ ಮೇಲೇರತೊಡಗಿತು. ಮೇಲುಮೇಲಕೆ ತೇಲುತ್ತ ಸಾಗಿದ ಆ ಚೇತನಾಂಶವು, ಶ್ರೀ ಅರವಿಂದರು ಯಾವಾಗಲೂ ಹೇಳುತ್ತಿದ್ದ ವಲಯದ ತುತ್ತತುದಿಯನೇರಿ, ಎಲ್ಲಿ ಶ್ರೀ ಅರವಿಂದರು ಇನ್ನೂ ಸಹ ತಮ್ಮ ಅತಿಮಾನಸ ರೂಪದಿಂದ ನೆಲೆಸಿ ಭುವಿಯನ್ನು ಮಾರ್ಗದರ್ಶಿಸುತ್ತಿಹರೋ, ಅಂತಹ ಸೂಕ್ಷ್ಮ ಭೌತಿಕ ಸ್ತರದ ನಿರ್ವಲಯದ ನಿರಾಳದಲ್ಲಿ ಕರಗುತ್ತ, ಶ್ರೀ ಅರವಿಂದರೊಂದಿಗೆ ಒಂದಾಗುತ್ತ, ದಿವ್ಯ ಜ್ಯೋತಿಯಲ್ಲಿ ಲೀನವಾಗುತ್ತ ಮರೆಯಾಯಿತು.’

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 24 ಜೂನ್ 1961**

## ಶ್ರೀ ಅರವಿಂದರು ಮತ್ತು ಶ್ರೀಮಾತೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಅರ್ಧನಾರೀಶ್ವರ: ಸೀರೆಯೊಂದಿಗೆ ಶ್ರೀ ಅರವಿಂದರು**

ಈ ಸಂಗತಿ ನಿಮಗೆ ತಿಳಿದಿರಲಿ; ನಾನು ಶ್ರೀ ಅರವಿಂದರನ್ನು ನಿರಂತರವಾಗಿ ನೋಡುತ್ತೇನೆ ಮತ್ತು ಅವರು ತಮ್ಮ ವಾಸಸ್ಥಾನವನ್ನು ಹೊಂದಿರುವ ಆ ಸೂಕ್ಷ್ಮ ಭೌತಿಕ ಜಗತ್ತಿನಲ್ಲಿ ನಾನು ಹೋಗುತ್ತೇನೆ, ಎಂಥ ಅದ್ಭುತ! ಆ ಸಂಪರ್ಕವು ಬಹುತೇಕ ಶಾಶ್ವತವಾಗಿತ್ತು (ಎಲ್ಲ ರಾತ್ರಿಗಳನ್ನು ನಾನು ಕಳೆಯುತ್ತಿದ್ದದ್ದು ಹಾಗೆಯೆ: ಶ್ರೀ ಅರವಿಂದರು ತಮ್ಮೆಲ್ಲ ಕೆಲಸವನ್ನು, ಎಲ್ಲವನ್ನೂ ತೋರಿಸುತ್ತಿದ್ದರು), ಆದರೂ, ಸಾವಿತ್ರಿಯ ಅನುವಾದದ ಕೆಲಸದ ನಂತರ ಅವರು ನನ್ನೆಡೆ ನೋಡಿ ನಗುತ್ತಿರುವಂತೆ ಮತ್ತು “ಕೊನೆಗೂ ನಿಮಗೆ ಗೊತ್ತಾಗಿಹೋಯಿತು!” ಎಂದು ಹೇಳುತ್ತಿರುವಂತೆ ತೋರುತ್ತಿತ್ತು. ಶ್ರೀಮಾತೆಯವರು ನಕ್ಕು ಹೇಳುತ್ತಾರೆ, “ನನಗೆ ಗೊತ್ತಾಗಲಿಲ್ಲ ಎಂದಲ್ಲ, ಅದು ನನಗೆ ಬೇಕಾಗಿದ್ದಿಲ್ಲ ಎಂದು!” ಸಂಗತಿಗಳು

ಎಂದಿಗೂ ಆ ರೀತಿಯಾಗಿ ಇರುವುದು ನನಗೆ ಬೇಕಾಗಿಲ್ಲ, ಸಾವಿರಾರು ವರ್ಷಗಳಿಂದ ಆ ಸಂಗತಿಗಳು ಬೇರೆ ರೀತಿಯಾಗಿ ಇರಬೇಕೆಂದು ಆಶಿಸುತ್ತಿದ್ದೆ! ಹಿಂದಿನ ರಾತ್ರಿ ಅವರು ನನ್ನ ಸೀರೆಯನ್ನು ಉಟ್ಟುಕೊಂಡಿದ್ದರು. ಅವರು ನಗುತ್ತ, "ಯಾಕೆ ನಾನು ಸೀರೆಯನ್ನು ಉಡಬಾರದೆ" ಅದು ನನಗೆ ಒಪ್ಪುವುದಿಲ್ಲವೆಂದು ಕಾಣುತ್ತದೆಯೆ!" "ಅದು ನಿಮಗೆ ಸುಂದರವಾಗಿ ಒಪ್ಪುತ್ತದೆ!" ಎಂದು ಶ್ರೀಮಾತೆಯವರು ಹೇಳಿದರು. ಆ ಸೀರೆ ಕಂದು ಬಣ್ಣದ ಜಾರ್ಜೆಟ್, ಕಂಚು ಹೊಳಪಿನ, ದೊಡ್ಡ ಚಿನ್ನದ ಹೆಣಿಕೆಯದಾಗಿತ್ತು! ಅದು ಬಹಳ ಸುಂದರವಾದ ಸೀರೆ (ನಾನು ಅದನ್ನು ಉಪಯೋಗಿಸುತ್ತಿದ್ದೆ). ಶ್ರೀ ಅರವಿಂದರು ಆ ಸೀರೆಯನ್ನು ಉಟ್ಟುಕೊಂಡಿದ್ದರು. ನನ್ನ ತಲೆಗೂದಲನ್ನು ಒಪ್ಪಗೊಳಿಸು ಎಂದು ಶ್ರೀ ಅರವಿಂದರು ಶ್ರೀಮಾತೆಯವರಿಗೆ ಕೇಳಿಕೊಂಡರು. ಶ್ರೀ ಅರವಿಂದರ ಕತ್ತಿನ ಹಿಂಬಾಗ ಮತ್ತು ಅವರ ತಲೆಗೂದಲು ಕಾಂತಿಯುತವಾಗಿದ್ದವೆಂದು ನನಗೆ ನೆನಪಿದೆ – ಅವರ ತಲೆಗೂದಲು ಎಂದಿಗೂ ತುಂಬಾ ಬಿಳಿಯಾಗಿರಲಿಲ್ಲ, ಅವುಗಳಿಗೆ ಕೆಂಗಂದು ಬಣ್ಣದ ಹೊಳಪಿತ್ತು, ಹೆಚ್ಚು ಕಡಿಮೆ ಹೊನ್ನಿನಂತೆ ಇದ್ದವು, ಅವು ತುಂಬಾ ಚನ್ನಾಗಿದ್ದವು (ಇಲ್ಲಿರುವ ಇತರ ಜನರಂತೆ ಇರಲಿಲ್ಲ). ಅವರ ತಲೆಗೂದಲು ಥೇಟ ನನ್ನ ಥರವೇ ಇದ್ದವು. ಅವರ ತಲೆಗೂದಲನ್ನು ಒಪ್ಪಗೊಳಿಸುವಾಗ ಅವರ ಕತ್ತಿನ ಹಿಂಬಾಗ ಮತ್ತು ಕೇಶ ಕಾಂತಿಯುತವಾಗಿದ್ದನ್ನು ನಾನು ನೋಡಿದೆ! ಅವರು ನನಗೆ ಹೇಳಿದರು, "ನಾನು ಸೀರೆಯನ್ನು ಯಾಕೆ ಉಟ್ಟುಕೊಳ್ಳಬಾರದು!".

ಅದು ಒಂದು ಹೊಸ ಸಾಧ್ಯತೆಯನ್ನೇ ತೆರೆಯಿತು..... ನಾವು ಯಾವಾಗಲೂ ಬಹಳೇ ಅತ್ಮೀಯರಾಗಿದ್ದೆವು, ನಿಮಗೆ ಗೊತ್ತೆ.

ಈ ದರ್ಶನವನ್ನು ಅಥವಾ ಈ ಕಲ್ಪನೆಯನ್ನು ಖಂಡಿತವಾಗಿಯೂ ಕಾರ್ಯಗತವಾಗಲು ಸಮ್ಮತಿಸಲಾಗುವುದಿಲ್ಲ, ಯಾಕೆಂದರೆ, ನೀವು ಎಲ್ಲವನ್ನೂ ಸ್ವೀಕರಿಸುತ್ತಿದ್ದರೆ, ಪ್ರೀತಿಸುತ್ತಿದ್ದರೆ ಮತ್ತು ಎಲ್ಲೆಡೆಯೂ ವೈಭವವನ್ನು ನೋಡುತ್ತಿದ್ದರೆ – ಬದಲಾವಣೆ ಯಾಕೆ? ಅದಕ್ಕಾಗಿಯೇ ಜಗತ್ತು ಮತ್ತಷ್ಟು ಪ್ರಗತಿ ಹೊಂದಲು ನನ್ನಲ್ಲಿ ಇಷ್ಟು ದಿನ ಇದ್ದ ಶಕ್ತಿಯು, ನಿಮ್ಮನ್ನು ಜೀವನದ ಆಂತರಿಕ ಸಂತೋಷದ ಸಂಪರ್ಕಕ್ಕೆ ಒಳಪಡಿಸುವ ಮೂಲಕ ಕಾನೂನುಬದ್ಧಗೊಳಿಸಿದ ಎಲ್ಲ ವಿಷಯಗಳನ್ನು ನಿಖರವಾಗಿ ತಿರಸ್ಕರಿಸುವಂತೆ ಮಾಡಿತು – ಅವರು ಹೇಳುವಂತೆ, ಆತನ ಆನಂದವು ಎಲ್ಲೆಡೆಯೂ ಇದೆ, ಆದ್ದರಿಂದ ಯಾರೂ ಈ ಪ್ರಪಂಚವನ್ನು ತೊರೆಯಲು ಬಯಸುವುದಿಲ್ಲ...

ಸಂಕ್ಷಿಪ್ತವಾಗಿ ಹೇಳುವುದಾದರೆ, ನಾನು ಮೇಲಿನಿಂದ ಸನ್ನಿವೇಶವನ್ನು ನೋಡಬಲ್ಲವಳಾಗಿದ್ದೆ, ಮತ್ತೊಂದು ಮಗ್ಗುಲಿನಿಂದ ನೋಡಿದರೆ, ಕ್ರಿಯಾತ್ಮಕ ಶಕ್ತಿಗಿಂತ ಕೊಂಚ ಮೇಲಿನದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರುವರಿ 15, 1963**

ಇಂದು ಶ್ರೀ ಅರವಿಂದರ ಶತಮಾನೋತ್ಸವ ವರ್ಷದ ಮೊದಲನೆಯ ದಿನವಾಗಿದೆ. ಅವರು ತಮ್ಮ ದೇಹವನ್ನು ಬಿಟ್ಟಿದ್ದರೂ, ಅವರು ಕ್ರಿಯಾಶೀಲರಾಗಿ ಇನ್ನೂ ನಮ್ಮೊಂದಿಗಿದ್ದಾರೆ.

ಶ್ರೀ ಅರವಿಂದರವರು ಭವಿಷ್ಯತ್ತಿಗೆ ಸೇರಿದವರಾಗಿದ್ದಾರೆ; ಅವರು ಭವಿಷ್ಯತ್ತಿನ ಸಂದೇಶವಾಹಕರಾಗಿದ್ದಾರೆ. ಅವರು ಈಗಲೂ ಸಹ, ದಿವ್ಯ ಇಚ್ಛೆಯ ರೀತಿಯಲ್ಲಿ ಭವ್ಯ ಭವಿಷ್ಯತ್ತಿನ ಸಾಕ್ಷಾತ್ಕಾರವನ್ನು ತ್ವರಿತಗೊಳಿಸಲು ನಾವು ಅನುಸರಿಸಬೇಕಾದ ಮಾರ್ಗವನ್ನು ತೋರಿಸುತ್ತಲಿದ್ದಾರೆ.

ಮಾನವತೆಯ ಪ್ರಗತಿಗಾಗಿ ಮತ್ತು ಭಾರತದ ದೇದಿಪ್ಯಮಾನವಾದ ನಿಯತಿಗಾಗಿ ಕೈ ಜೋಡಿಸಲಿಚ್ಛಿಸುವ ಎಲ್ಲರೂ ಅಸಾಧಾರಣ ಪ್ರಜ್ಞೆಯ ಹಂಬಲದಲ್ಲಿ ಮತ್ತು ಪ್ರಕಾಶಿತ ಕಾರ್ಯದಲ್ಲಿ ಒಂದಾಗಲೇಬೇಕಾಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಆಗಸ್ಟ 4, 1971**

**ಶ್ರೀ ಅರವಿಂದರು ಮತ್ತು ನಿತ್ಯ ಚಾಲಕ (ಅಚ್ಯುತ)**

ಶ್ರೀ ಅರವಿಂದರು ಮತ್ತು ನಾನು ಅತ್ಯಂತ ಆರಾಮದಾಯಕವಾದ ಕಾರಿನಲ್ಲಿದ್ದೆವು, ಮತ್ತು ನಾವಿಬ್ಬರೂ ಶಾಂತಿ ಮತ್ತು ಆನಂದದ ಅನಂತತೆಯಲ್ಲಿ ನಿಶ್ಯಬ್ದವಾಗಿ ವಿಶ್ರಾಂತಿ ಪಡೆಯುತ್ತಿದ್ದೆವು. ಕಾರನ್ನು ನಿತ್ಯ ಚಾಲಕ ಓಡಿಸುತ್ತಿದ್ದ. ಅದು ಅತ್ಯುನ್ನತ ಆನಂದವಾಗಿತ್ತು, ನಿಮಗೆ ಗೊತ್ತೆ. ಇದ್ದಕ್ಕಿದ್ದಂತೆ, ಕಾರಿನ ಹೊರಗೆ (ಹೇಗೆ ಗೊತ್ತಿಲ್ಲ), ಎರಡು ಕಾಗದಗಳು ರಸ್ತೆಗೆ ಎಸೆಯಲ್ಪಟ್ಟವು, ಅದರಲ್ಲಿ ಒಂದು ಕಾಗದವು ಪತ್ರವಾಗಿತ್ತು (ಅದು ಅಂಚೆ ಮೂಲಕ ಬಂದ ಒಂದು ಲಕೋಟೆಯಾಗಿತ್ತು), ಶ್ರೀ ಅರವಿಂದರು ಆ ಪತ್ರಗಳನ್ನು ಎತ್ತಿಕೊಳ್ಳಲೆಂದು ಕಾರಿನಿಂದ ರಸ್ತೆಗೆ ಜಿಗಿಯುತ್ತಾರೆ (ಎಂತಹ ದೈವಿ ಚುರುಕುತನ/ಹಗುರತೆ). “ಅಹ್, ಆನಂದ ಮುಗಿಯಿತು... (ನಗು), ಈಗ ನಾವು ಕೆಲಸಕ್ಕೆ ಮರಳಬೇಕಾಗುತ್ತದೆ!” ಎಂದು

ನನ್ನಷ್ಟಕ್ಕೆ ನಾನು ಹೇಳಿಕೊಂಡೆ ಮತ್ತು ನಾನೂ ಸಹ ಕಾರಿನಿಂದ ಕೆಳಗಿಳಿದೆ (ಕಾರು ಮಾಯವಾಯಿತು). ಶ್ರೀ ಅರವಿಂದರವರು ಆ ಪತ್ರಗಳನ್ನು ಎತ್ತಿಕೊಂಡರು (ಆ ಕ್ಷಣದಲ್ಲಿ ಅವು ಏನನ್ನು ಸೂಚಿಸುತ್ತಿದ್ದವು ಎಂಬುದು ನನಗೆ ನಿಖರವಾಗಿ ತಿಳಿದಿತ್ತು, ಆದರೆ ಅದು ಅಷ್ಟು ಮಹತ್ವದ್ದಲ್ಲ) ನಂತರ ಅವರು ನನ್ನ ಕೈ ಹಿಡಿದು ಕರೆದೊಯ್ದರು (ಅವರ ಬಲಗೈ ನನ್ನ ಎಡಗೈಯನ್ನು ಹಿಡಿದುಕೊಂಡಿತು: ನಾನು ಅವರ ಬಲಗಡೆಗೆ ಇದ್ದೆ), ಮತ್ತು ನಾವು ರಸ್ತೆಯಲ್ಲಿ ನಡೆಯಲಾರಂಭಿಸಿದೆವು. ನಾವು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ (ಅನೇಕ ವಿವರಗಳನ್ನು ಮತ್ತು ವಿಷಯಗಳನ್ನು ನಾನು ಇಲ್ಲಿ ಹೇಳುತ್ತಿಲ್ಲ. ಏಕೆಂದರೆ ಅವು ಪ್ರಾಸಂಗಿಕವಾದವುಗಳು, ಅವುಗಳು ಆ ಸಮಯದಲ್ಲಿ ತಮ್ಮದೇ ಆದ ಅರ್ಥವನ್ನು ಹೊಂದಿವೆ, ಆದರೆ ಅವುಗಳು ಅಷ್ಟು ಮುಖ್ಯವಲ್ಲ) ಅವರು ಇದ್ದಕ್ಕಿದ್ದಂತೆ ನನ್ನ ಕಡೆಗೆ ಬಾಗಿ ನಾನು ಫ್ಲಿಂಟ್ (ಗಡಸು ಕಲ್ಲು) ಮೇಲೆ ನಡೆದುಕೊಂಡು ಹೋಗುತ್ತಿದ್ದೇನೆ ಎಂದು ತೋರಿಸಿದರು. (ನಿಮಗೆ ಗೊತ್ತಾ, ರಸ್ತೆಯನ್ನು ಕಲ್ಲುಗಳ ಚಿಪ್ಪುಗಳಿಂದ ತಯಾರಿಸಲಾಗುತ್ತದೆ ಮತ್ತು ನೀರನ್ನು ದೂರ ಹರಿಯುವಂತೆ ಮಾಡಲು ಸ್ವಲ್ಪಮಟ್ಟಿಗೆ ತಿರುವನ್ನು ಮಾಡಿರುತ್ತಾರೆ? ಬದಿಯಲ್ಲಿ ಸ್ವಲ್ಪ ಭೂಮಿ ಕೊಚ್ಚಿ ಹೋಗಿತ್ತು, ಕೆಲವೊಮ್ಮೆ ಕಲ್ಲುಗಳು ಎದ್ದು ಕಾಣುತ್ತಿದ್ದವು.) ನಾನು ಆ ಕಲ್ಲುಗಳ ಮೇಲೆ ನಡೆಯುತ್ತಿದ್ದೆ – ಇಲ್ಲ, ಅವರು ಅವುಗಳ ಮೇಲೆ ನಡೆಯುತ್ತಿದ್ದರು ಮತ್ತು ಅವರು ಅವುಗಳನ್ನು ನನಗೆ ತೋರಿಸಿದರು, ಆದ್ದರಿಂದ ನಾನು ಅವರನ್ನು ರಸ್ತೆಯ ಮಧ್ಯದಲ್ಲಿ ನಡೆದುಕೊಂಡು ಹೋಗುವಂತೆ ಮಾಡಿದೆ ಮತ್ತು ನಾನು ಕಲ್ಲುಗಳ ಮೇಲೆ ನಡೆಯಲು ಪ್ರಾರಂಭಿಸಿದೆ (ಆದರೆ ಆ ಕಲ್ಲುಗಳ ಅನುಭವ ನನಗೆ ಆಗಲೇ ಇಲ್ಲ). ಆಗ ನಾನು ಶ್ರೀ ಅರವಿಂದರ ತಲೆಯನ್ನು ಗಮನಿಸಿದೆ... ನಿಜವಾಗಿಯೂ ಅದು ಅತಿಮಾನಸ ತಲೆ, ಅದೊಂದು ವಿಸ್ಮಯ! ಅವರ ಸಂಪೂರ್ಣ ದೇಹ, ಅವರ ದೇಹದ ಪ್ರತಿಯೊಂದು ಭಾಗವೂ ಯಾವುದೋ ಒಬ್ಬ ವ್ಯಕ್ತಿಯಲ್ಲಿ ಒಂದು ನಿರ್ದಿಷ್ಟ ಕಾರಣಕ್ಕಾಗಿ ಅಥವಾ ಒಂದು ನಿರ್ದಿಷ್ಟ ಕಾರ್ಯಕ್ಕಾಗಿ ಅಭಿವ್ಯಕ್ತಗೊಳ್ಳುತ್ತಿತ್ತು; ಆ ಘಳಿಗೆಯಲ್ಲಿ ನಾನು ಒಬ್ಬ ವ್ಯಕ್ತಿಯಾಗಿರಲಿಲ್ಲ, ನಾನೊಂದು ಶಕ್ತಿ ಮಾತ್ರವಾಗಿದ್ದೆ (ನಾನು ದೇಹ ಹೊಂದಿಲ್ಲದಿರುವುದನ್ನು ಗಮನಿಸಿದೆ). ಈ ಘಟನೆಯಲ್ಲಿ ಭಾಗವಹಿಸಿದವರೆಲ್ಲರನ್ನೂ ನಾನು ನೋಡಿದೆ (ಅವರ ಭೌತಿಕ ತೋರಿಕೆಯನ್ನಲ್ಲ, ಆದರೆ ಅವರು ಯಾರೆಂದು ತಿಳಿದಿತ್ತು). ನಾನು ಅವರ ಪಾದಗಳನ್ನು ನೋಡಿದೆ: ಅವುಗಳು "ಪಾದರಕ್ಷೆ" (getas) ತೊಟ್ಟ ನನ್ನ ಪಾದಗಳೇ ಆಗಿದ್ದವು. ಪಾದರಕ್ಷೆಗಳನ್ನು ತೊಟ್ಟಿದ್ದ ನನ್ನ

ಪಾದಗಳು ಅವರನ್ನು ರಸ್ತೆಯ ಬದಿಗಿರುವ ಕಲ್ಲುಗಳ ಮೇಲೆ ನಡೆಯಲು ಬಿಡಲಿಲ್ಲ, ಅದಕ್ಕಾಗಿ ಅವರು ಅದನ್ನು ಬಿಟ್ಟರು.... ಅದು ಅದ್ಭುತವಾಗಿ ಸ್ಪಷ್ಟವಾಗಿತ್ತು, ಅರ್ಥವತ್ತಾಗಿತ್ತು! ಆ ಕಾರ್ಯದಲ್ಲಿ ಒಬ್ಬರ ಸ್ಥಾನವನ್ನು ನಾನು ನಿಖರವಾಗಿ ನೋಡಿದ್ದೆ, ತಿಳಿದುಕೊಂಡಿದ್ದೆ; ಆ ಕಾರ್ಯದಲ್ಲಿ, ನನ್ನೊಂದಿಗಿನ ಆ ಸಂಪರ್ಕದಲ್ಲಿ ಅವನು ಶ್ರೀ ಅರವಿಂದರಿಂದ ಬೆಂಬಲಿಸ್ಪಟ್ಟಿದ್ದನು, ನಿರ್ದೇಶಿಸಲ್ಪಟ್ಟಿದ್ದನು.... ಸಂಗತಿಯ ಸಂಪೂರ್ಣ ವಿವರದಲ್ಲಿ.

ಅದೊಂದು ಸಂಪೂರ್ಣ, ಅದ್ಭುತ, ನಿಖರತೆಯಿಂದ ಕೂಡಿದ ದಿವ್ಯ ದರ್ಶನವಾಗಿತ್ತು. ಅದು ನನ್ನಲ್ಲಿ ಮರೆಯಲಾರದ ಒಂದು ಭಾವನೆಯನ್ನು ಬಿಟ್ಟಿತ್ತು, ಯಾಕೆಂದರೆ ಅದೊಂದು ಶಕ್ತಿಗಳ ಲೀಲೆಯ ದಿವ್ಯ ದರ್ಶನವಾಗಿತ್ತು. ಅವರ ತಲೆಯು ದೇದಿಪ್ಯಮಾನವಾಗಿತ್ತು – ಅದು ಎಲ್ಲದರ ಮೇಲೂ ಪ್ರಭಾವ ಬೀರಿತ್ತು – ಅದು ಎಲ್ಲವನ್ನೂ ನಿರ್ದೇಶಿಸುವ ಅವರ ಅತಿಮಾನಸ ಕಲ್ಪನೆಯ ಕಾಂತಿಯಾಗಿತ್ತು.

ನಿಖರವಾದ ಸ್ಥಾನವನ್ನು, ಕಾರ್ಯಮಾಡುವ ಎಲ್ಲರ ಸಂಬಂಧವನ್ನು ನಾನು ಗೊತ್ತುಮಾಡಿಕೊಂಡೆ, ಅದರೆ ಅದನ್ನು ತಿಳಿಯಪಡಿಸಲಾರೆ. ನಾನು ನಿನಗೆ ನಿನ್ನ ಸ್ಥಾನದ ಬಗ್ಗೆ ಮತ್ತು ನಿನ್ನ ಕಾರ್ಯದ ಬಗ್ಗೆ ಹೇಳಿದ್ದು ಸತ್ಯ – ಆ ಕ್ಷಣದಲ್ಲಿ ನಾನು ನೋಡಿದ್ದು ಪೂರ್ಣ ಸತ್ಯ. ಕೆಲವು ಸಂಗತಿಗಳು ಇನ್ನೊಬ್ಬರ ಬಗೆಗಿನ (ಕೆಲವು ಜನರ) ಆದರೆ ಕಾರ್ಯಕ್ಕೋಸ್ಕರ ನನ್ನೊಡನೆ ನಿಜವಾದ ಸಂಪರ್ಕವನ್ನು ಹೊಂದಿದವರ ದಿವ್ಯ ಜ್ಞಾನವಾಗಿತ್ತು. ಆ ಸಂಬಂಧಗಳು, ವಿಭಿನ್ನ ಜಗತ್ತುಗಳಲ್ಲಿ, ವಿಭಿನ್ನ ಸ್ತರಗಳಲ್ಲಿ ಮತ್ತು ವಿಭಿನ್ನ ಚಟುವಟಿಕೆಗಳಿಗಾಗಿ ವಿಭಿನ್ನವಾಗಿದ್ದವು. ಆದರೆ ಅವುಗಳು ಸಾಕಷ್ಟು ಸಂಖ್ಯೆಗಳಲ್ಲಿ ಇರಲಿಲ್ಲ, ಅವು ಬಹಳ ನಿಖರವಾಗಿದ್ದವು...

ಅದೊಂದು ನೈಜ ಸಂಗತಿಗಳಿದ್ದ ಪ್ರಪಂಚವಾಗಿತ್ತು. ಸತ್ಯ ಮತ್ತು ಮಾನವ ಗ್ರಹಿಕೆಯ ಸತ್ಯತೆಗಿಂತ ಬೇರೆಯಾದ ಸತ್ಯತೆಯ ಪ್ರಪಂಚವಾಗಿತ್ತು: ಸರ್ವವೂ ಬರೀ ತೋರಿಕೆಯಾಗುತ್ತದೆ; ತನ್ನ ವಿಭಜನದಲ್ಲಿ ಅಗಾಗ್ಗೆ ಅದೊಂದು ತಪ್ಪು ತೋರಿಕೆಯಾಗುತ್ತದೆ. ಅವರ ಪಾದ ನಾನಾಗಿದ್ದರಿಂದ ಈ ದೇಹವು ಯಾವ ಮಟ್ಟಿಗೆ ಆನಂದವಾಗಿತ್ತು, ಅತ್ಯಾನಂದವಾಗಿತ್ತೆಂದು ನಾನು ಹೇಳಲಾರೆ. ಅದನ್ನು ನಾನು ನೋಡಿದಾಗ, ಅದೊಂದು ಆಶ್ಚರ್ಯಕರ ಸಂಗತಿಯಾಗಿತ್ತು. ಅದೇ ಸಮಯಕ್ಕೆ ಕಾರ್ಯಕ್ಕೆ ಬೇಕಾದ ಎಲ್ಲ ಸಂಬಂಧಗಳ ಅರಿವು, ಸ್ಪಷ್ಟ ಗ್ರಹಿಕೆ ಅಲ್ಲಿತ್ತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮಾರ್ಚ್ 10, 1965**

## ಶ್ರೀಕೃಷ್ಣ ಮತ್ತು ಶ್ರೀ ಅರವಿಂದರೊಡನೆ ವಿಹಾರ

ಈ ಮೊದಲು ಶ್ರೀ ಅರವಿಂದರಿದ್ದಾಗ, ಈಗ ವಿಸ್ತರಿಸಿದ "ಮಲಗುವ ಕೋಣೆ" ಎಂದು ಕರೆಯುವ ಮನೆಯಲ್ಲಿ ನಾನಿದ್ದೆ, ಅಲ್ಲಿ ವಿಶಾಲವಾದ ಪಡಸಾಲೆ ಇತ್ತು. ಆ ಪಡಸಾಲೆಯಲ್ಲಿ ನಾನು ಮೇಲೆ–ಕೆಳಗೆ ವಿಹರಿಸುತ್ತಿದ್ದೆ (ಶ್ರೀ ಅರವಿಂದರು ತಮ್ಮ ಕೆಲಸ ಮಾಡುತ್ತ ಅವರ ಕೋಣೆಯಲ್ಲಿ ಇರುತ್ತಿದ್ದರು), ನಾನು ಒಂಟಿಯಾಗಿ ಅಡ್ಡಾಡುತ್ತಿದ್ದೆ; ಆದರೆ ನಾನು ಎಂದಿಗೂ ಒಂಟಿಯಾಗಿರಲಿಲ್ಲ: ಶ್ರೀಕೃಷ್ಣ ಯಾವಾಗಲೂ ಅಲ್ಲಿರುತ್ತಿದ್ದ – ಎತ್ತರ ನಿಲುವಿನ, ಅತಿ ಸುಂದರ, ನೀಲಿ ಬಣ್ಣದ ದೇವರು ಶ್ರೀಕೃಷ್ಣ. ನಾವೀರ್ವರೂ ಯಾವಾಗಲೂ ಒಟ್ಟಿಗೆ ಪಡಸಾಲೆಯಲ್ಲಿ ವಿಹರಿಸುತ್ತಿದ್ದೆವು. ಶ್ರೀಕೃಷ್ಣನು ಕೊಂಚ ನನ್ನ ಹಿಂದೆ ಇರುತ್ತಿದ್ದ (ಶ್ರೀಮಾತೆಯವರು ತಮ್ಮ ಭುಜಗಳ ಹಿಂದೆ ತಮ್ಮ ಕೈ ಮಾಡಿ ತೋರಿಸುತ್ತಾರೆ); ನನ್ನ ತಲೆ ಅವನ ಭುಜದ ಮೇಲಿದೆ ಎನ್ನುವಂತೆ ನಾನು ಸ್ವಲ್ಪ ಮುಂದೆ ಇದ್ದೆ (ಆ ರೀತಿ ಅನುಭವ ನನ್ನಲ್ಲಿರಲಿಲ್ಲ, ಆದರೆ ಹಾಗೆ ತೋರುತ್ತಿತ್ತು), ನಾವಿಬ್ಬರೂ ವಿಹರಿಸುತ್ತಿದ್ದೆವು, ವಾರ್ತಾಲಾಪ ಮಾಡುತ್ತಿದ್ದೆವು. ಅದು ಸುಮಾರು ಒಂದು ವರ್ಷದವರೆಗೆ ನಡೆಯಿತು, ನಿತ್ಯವೂ. ಆ ಮೇಲೆ ಅದು ನಿಂತು ಹೋಯಿತು. ನಂತರ ನಾನು ಅವನನ್ನು ಆಗಾಗ್ಗೆ ನೋಡುತ್ತಿದ್ದೆ (ನಾನು ಹೊಸ ಮನೆಗೆ ಬಂದಾಗ); ಕೆಲವೊಮ್ಮೆ ರಾತ್ರಿ ನನಗೆ ತೀವ್ರ ಆಯಾಸವಾದಾಗ ಅವನು ಬರುತ್ತಿದ್ದ ಮತ್ತು ನಾನು ಅವನ ಭುಜದ ಮೇಲೆ ಮಲಗುತ್ತಿದ್ದೆ. ಆದರೆ ಶ್ರೀ ಅರವಿಂದರೇ ಹಾಗೆ ತಮ್ಮನ್ನು ತೋರಿಸಿಕೊಳ್ಳುತ್ತಿದ್ದರು ಎಂದು ನನಗೆ ತಿಳಿದಿತ್ತು. ನಂತರ ನಾನು ಇಲ್ಲಿಗೆ ಬಂದಾಗ (ಶ್ರೀಮಾತೆಯವರ ಈಗಿನ ಕೋಣೆ), ನಾನು ನನ್ನ ಮಂತ್ರವನ್ನು ಪಠಿಸುತ್ತ ಮೇಲೆ ಕೆಳಗೆ ಸಂಚರಿಸುತ್ತಿದ್ದೆ. ಶ್ರೀ ಅರವಿಂದರು (ಶ್ರೀಕೃಷ್ಣನ ಸ್ಥಾನದಲ್ಲಿ) ಅವರ ಇರುವಿಕೆಯಲ್ಲಿ ನಾನು ದಿನಾಲೂ ವಿಹಾರಮಾಡುತ್ತಿದ್ದೆ. ಅದು ಎಷ್ಟೊಂದು ಗಟ್ಟಿ, ಎಷ್ಟೊಂದು ವಿಸ್ಮಯವಾಯಿತೆಂದರೆ, ನಾನು ಯೋಚಿಸ ಹತ್ತಿದೆ, "ಜನರತ್ತ, ವಿಷಯಗಳತ್ತ ಯಾಕೆ ನೋಡಬೇಕು, ನಾನು ಎಂದೆಂದಿಗೂ ಹೀಗೆಯೆ ಇರಬಯಸುತ್ತೇನೆ!" ಅವರು ನನ್ನ ಯೋಚನೆಯನ್ನು ಗ್ರಹಿಸಿದರು ಮತ್ತು ಹೇಳಿದರು, "ನಾನು ಇನ್ನು ಮುಂದೆ ಎಂದಿಗೂ ಬರುವುದಿಲ್ಲ." ಅಂತೆಯೆ ಅವರು ಬರುವುದನ್ನು ನಿಲ್ಲಿಸಿಬಿಟ್ಟರು. ನಾನು ಸರಿ ಎಂದು ನನ್ನ ಮಂತ್ರವನ್ನು ಭಗವಂತನಿಗಾಗಿ ಹೇಳಲು ಪ್ರಾರಂಭಿಸಿದೆ. ಅವನು ಬೇರೆ ಯಾವುದೇ ರೂಪದಲ್ಲಿ ಬರದೆ ತನ್ನ ನೈಜ ರೂಪದಲ್ಲಿ ಬರಲು ನಾನು ಬಹಳ ಪ್ರಯತ್ನ ಮಾಡಿದೆ. ಅವನ

ಶಕ್ತಿ, ಇರುವಿಕೆ ಎಲ್ಲವೂ ಅಲ್ಲಿತ್ತು, ನಾನು ಅವನ ಇರವನ್ನು ಸ್ಪಷ್ಟವಾಗಿ ಅನುಭವಿಸತೊಡಗಿದೆ. ಕೆಲವು ದಿನಗಳವರೆಗೆ ಒಂದು ಸಂಗತಿಯ ಹತ್ತಿರವಿರುವ ಅನುಭವ ನನಗಾಗುತ್ತಿತ್ತು; ನಿನ್ನೆ ಅರ್ಧ ಘಂಟೆ ಆ ಅನುಭವವಿತ್ತು: ಒಂದು ಗಟ್ಟಿಯಾದ ಅಸ್ತಿತ್ವದ, ಅಪ್ಪಟ ಗಟ್ಟಿಯಾದ ಅಸ್ತಿತ್ವದ ಅನುಭವ. ಅವನು ನನಗೆ ಹೇಳಿದ, "ಮೊದಲು ಕೃಷ್ಣ, ನಂತರ ಶ್ರೀ ಅರವಿಂದರು, ಆಮೇಲೆ ನಾನು."

ಫಲಿತಾಂಶವು ಒಂದೇ ತೆರನಾಗಿ ಇರಬೇಕೆಂದು ಮಾತ್ರ ಅವನು ಆಶಿಸುವುದಿಲ್ಲ. "ಈಗ ಈ ಜನರೊಂದಿಗೆ ನನಗೆ ಸಾಕಾಗಿದೆ" ಎಂದು ನಾನು ಹೇಳಬೇಕಾಯಿತು (ನಗು).

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜೂನ್ 18, 1965**

ನಿನ್ನೆ, ಬಾನುಲಿ ಕೇಂದ್ರದ ನಿರ್ದೇಶಕರಿಂದ ಪತ್ರವೊಂದು ಬಂದಿತು. ಅದರಲ್ಲಿ ಅವರು, ಫೆಬ್ರವರಿ 21 ರಂದು ಒಂದು "ಅದ್ಭುತ"ವಾದ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಆಶಯ ವ್ಯಕ್ತಪಡಿಸಿದ್ದರು; ಮತ್ತು ಕೊನೆಯಲ್ಲಿ (ಆ ಪತ್ರದಲ್ಲಿ) "ಭಾರತದಲ್ಲಿನ ನನ್ನ ಜೀವನದ ನೆನಪುಗಳು" ಎಂಬ ವಿಷಯದ ಕುರಿತು ಹಂಚಿಕೊಳ್ಳಲು ಹೇಳಿದ್ದರು! ಅದಕ್ಕಾಗಿ ನನ್ನ ಉತ್ತರವನ್ನು ಸಿದ್ಧಪಡಿಸಿದೆ (ನಗು)....

"ನೆನಪುಗಳು ಸಂಕ್ಷಿಪ್ತವಾಗಿರುವವು. ನಾನು ಭಾರತಕ್ಕೆ ಬಂದದ್ದು ಶ್ರೀ ಅರವಿಂದರನ್ನು ಭೇಟಿಯಾಗಲು, ನಾನು ಇಲ್ಲಿ ಉಳಿದುಕೊಂಡಿದ್ದು ಶ್ರೀ ಅರವಿಂದರೊಡನೆ ಇರಲು, ಶ್ರೀ ಅರವಿಂದರು ತಮ್ಮ ದೇಹವನ್ನು ಬಿಟ್ಟ ನಂತರ ಅವರ ಕಾರ್ಯವನ್ನು ಮಾಡುವುದಕ್ಕಾಗಿ ಇಲ್ಲಿ ಇರಲು ನಿರ್ಧರಿಸಿದೆ; ಸತ್ಯದ ಸೇವೆ ಮಾಡುವುದರಿಂದ ಮತ್ತು ಮಾನವ ಕುಲವನ್ನು ಬೆಳಗಿಸುವುದರಿಂದ (ಜ್ಞಾನದಿಂದ) ಭೂಮಿಯ ಮೇಲೆ ದೈವೀ ಪ್ರೇಮದ ಆಳ್ವಿಕೆಯನ್ನು ತ್ವರಿತಗೊಳಿಸುವುದು ಶ್ರೀ ಅರವಿಂದರ ಕಾರ್ಯವಾಗಿತ್ತು."

"ನಿನ್ನೆ ಸಾಯಂಕಾಲ ಆ ನಿರ್ದೇಶಕರ ಪತ್ರವನ್ನು ಪವಿತ್ರ ಓದಿ ಹೇಳಿದ, ಅವನು ಓದುತ್ತಿದ್ದಾಗ ಶ್ರೀ ಅರವಿಂದರು ಬಂದು ನಿಂತು ನಗಲು ಪ್ರಾರಂಭಿಸಿದರು! ಆ ಮನುಷ್ಯ ನನ್ನ ನೆನಪುಗಳ ಬಗ್ಗೆ ಕೇಳಿದ್ದನ್ನು ನೋಡಿ ಅವರು ನಕ್ಕರು – ತಕ್ಷಣವೇ ನಾನು ಉತ್ತರವನ್ನು ಪಡೆದುಕೊಂಡೆ. ಉತ್ತರ ಹಾಗೆಯೇ ಸುಲಭವಾಗಿ ಬಂದಿತು; ಅದರ ಬಗ್ಗೆ ಹೇಳಲು ಹೆಚ್ಚೇನಿಲ್ಲ..." ಆದರೆ ಜನರು ತಿಳಿಯಲೊಲ್ಲರು!

ಶ್ರೀ ಅರವಿಂದರು ನನಗೆ ಹೇಳಿದರು, “ ಅವರು ಎಂದೋ ಕಲಿತುಕೊಳ್ಳಬೇಕಿತ್ತು, ಈಗ ಕಲಿತರು.” ಅದು ಐದು ನಿಮಿಷಗಳಲ್ಲಿ ಮುಗಿದು ಹೋಯಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 27, 1968**

**ನೊಬೆಲ್ ಪಾರಿತೋಷಕ**

ಶ್ರೀಮಾತೆಯವರು ‘ಎಸ್(S)’ ಎನ್ನುವವರಿಗೆ ಹಳೆಯ ಮೇಜಿನ ಮೇಲಿಡುವ ಕ್ಯಾಲೆಂಡರ್ ಒಂದನ್ನು ಕೊಟ್ಟಿದ್ದರು. ಅದರ ಮೇಲೆ ಶ್ರೀಮಾತೆಯವರು ಜುಲೈ 24–25, 1959 ರ ಅನುಭವಗಳನ್ನು ನಮೂದಿಸಿದ್ದರು – ಆ ದಿನಗಳಲ್ಲಿ ಶ್ರೀಮಾತೆಯವರು ಶ್ರೀ ಅರವಿಂದರನ್ನು ಪ್ರಥಮ ಬಾರಿಗೆ ಸೂಕ್ಷ್ಮ ಭೌತಿಕದಲ್ಲಿಯ ಭೇಟಿಯ ಬಗ್ಗೆ ಬರೆದಿದ್ದರು. ಇನ್ನೊಂದು ಹಾಳೆಯಲ್ಲಿ “ಅವರು ಗ್ರಹಿಸಿದ್ದನ್ನು ನಾನು ಅರಿತುಕೊಳ್ಳುತ್ತಿದ್ದೇನೆ. ನಾನು ಅವರ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುವ ಅನುಯಾಯಿ ಮಾತ್ರ,” ಎಂದು ಶ್ರೀಮಾತೆಯವರು ಬರೆದಿದ್ದರು (ಶ್ರೀಮಾತೆಯವರು ಇದನ್ನು ಹೀಗೆ ವಿವರಿಸುತ್ತಾರೆ).

ಕೆಲವು ಜನರು ನನ್ನನ್ನು ನೊಬೆಲ್ ಪಾರಿತೋಷಕಕ್ಕಾಗಿ ನಾಮ ನಿರ್ದೇಶನ ಮಾಡಲು ಬಯಸಿದ್ದರು; ನನ್ನ ಹೇಳಿಕೆಯನ್ನು ಕೊಡಲು ಕೇಳಿದರು, ಅದಕ್ಕೆ ಆ ರೀತಿ ಬರೆದೆ. ಈ ಎಲ್ಲ ಸಂಗತಿಗಳನ್ನು ಮಾಡಿದ ವ್ಯಕ್ತಿ ನಾನಲ್ಲ, ಅದು ಶ್ರೀ ಅರವಿಂದರು ಎಂದು ಹೇಳ ಬಯಸಿದೆ.

ಅವರು ಶ್ರೀ ಅರವಿಂದರಿಗೆ ನೊಬೆಲ್ ಪಾರಿತೋಷಕವನ್ನು ಕೊಡಲು ನಿರ್ಧರಿಸಿದ್ದರು, ಆದರೆ ಈ ನಿರ್ಣಯ ಮಾಡಿದ ಒಂದು ವರ್ಷ ಮುಂಚೆಯೇ ಶ್ರೀ ಅರವಿಂದರು ದೇಹ ತ್ಯಜಿಸಿದ್ದರು. ಅವರು ಮೃತ ವ್ಯಕ್ತಿಗಳಿಗೆ ಪಾರಿತೋಷಕವನ್ನು ಕೊಡುವುದಿಲ್ಲವಾದ್ದರಿಂದ, ಅದನ್ನು ನನಗೆ ವರ್ಗಾಯಿಸಬೇಕೆಂದು ಬಯಸಿದ್ದರು, ಅದಕ್ಕಾಗಿ ನಾನು ಈ ಟಿಪ್ಪಣಿಯನ್ನು ಬರೆಯಬೇಕಾಯಿತು. ಯಾಕೆಂದರೆ ನನಗೆ ಹೆಸರು ಮತ್ತು ಪ್ರಸಿದ್ಧಿ ಬೇಕಾಗಿದ್ದು ಕೊನೆಯಲ್ಲಿ (ಕೊನೆಯ ಆದ್ಯತೆ). ಆ ವರ್ಷ ನೊಬೆಲ್ ಪಾರಿತೋಷಕವನ್ನು ಕೊಡಲಿಲ್ಲ.

ಈ ಘಟನೆಯು ಸಂಪೂರ್ಣ ಮರೆತುಹೋಗಿದೆ ಎಂದು ನಂಬಿದ್ದೇನೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 15, 1962**

## 1965 ಆಗಸ್ಟ 15 ರ ದರ್ಶನ

15ನೇ ದಿನಾಂಕದಂದು ಶ್ರೀ ಅರವಿಂದರು ಬಾಲ್ಕನಿಯಲ್ಲಿದ್ದರು. ಅವರು ಬಾಲ್ಕನಿಯಲ್ಲಿ ನನ್ನೊಡನೆ ಬಂದು ಹೊರಟುಹೋದರು. ನಾನು ಯಾರಿಗೂ ಏನನ್ನೂ ಹೇಳಲಿಲ್ಲ. ಸುಮಾರು 15 ವರ್ಷ ವಯಸ್ಸಿನ ಅತಿ ಅಶಿಸ್ತಿನ ವಿದ್ಯಾರ್ಥಿ, ವಿಕ್ಷಿಪ್ತ ಹಾಗೂ ಚಪಲಚಿತ್ತ ಮನಸ್ಸಿನ ಹುಡುಗಿಯೊಬ್ಬಳಿದ್ದಳು (ಅವಳನ್ನು ಹೊರಗಡೆ ಕಳಿಸಬೇಕೆಂದು ಮಾತನಾಡುತ್ತಿದ್ದರು), ಆದರೆ ಅವಳ ಜನ್ಮದಿನದಂದು ನನ್ನ ಬಳಿಗೆ ಒಮ್ಮೆ ಬರಲು ಹೇಳಿದೆ, ಆಗ ನನಗನಿಸಿದ್ದು, ಅವಳು ಉತ್ತಮ ಹುಡುಗಿ ಎಂದು(!) 15ನೇ ದಿನಾಂಕದಂದು ದರ್ಶನದ ಸಮಯದಲ್ಲಿ ನನ್ನ ಬಲಗಡೆಗೆ ಶ್ರೀ ಅರವಿಂದರನ್ನು ನೋಡಿದೆ ಎಂದು ಎರಡು–ಮೂರು ದಿನಗಳ ಹಿಂದೆ ಅವಳು ನನಗೆ ಬರೆದಿದ್ದಳು. ಅವಳು ನಗುತ್ತ, “ಇದು ನೀಜವೇ?” ಎಂದು ಕೇಳಿದಳು.

ಅದು ನನಗೆ ಬಹಳೇ ವಿನೋದವೆನಿಸಿತ್ತು. “ಇಲ್ಲಿನ ಶಿಷ್ಯರ ಮೇಲೆ ಅವರಿಗಿರುವ ನೈತಿಕ ತೀರ್ಪುಗಳಿಗೆ ಎಷ್ಟೊಂದು ಬೆಲೆ” ಎಂದು ನನ್ನಷ್ಟಕ್ಕೆ ನಾನು ಹೇಳಿಕೊಂಡೆ! ಅದಿರುವುದೇ ಹಾಗೆ!”

ಆದರೆ ಈಗಿನ ದಿನಗಳಲ್ಲಿ ನಾನು ಮಕ್ಕಳನ್ನೇ ನೋಡುತ್ತಿಲ್ಲ. ಮೊದಲು ಅವರನ್ನು ದಿನಾಲೂ ನೋಡುತ್ತಿದ್ದೆ, ಅಥವಾ ತಿಂಗಳಿಗೊಮ್ಮೆಯಾದರೂ ನೋಡುತ್ತಿದ್ದೆ. ನಾನು ಆಟದ ಮೈದಾನಕ್ಕೆ ಹೋದಾಗ ಅವರನ್ನು ದಿನಾಲೂ ನೋಡುತ್ತಿದ್ದೆ.

ಈಗ, ಅವರ ಜನ್ಮದಿನಗಳಂದು ಕೆಲವರನ್ನು ನೋಡುತ್ತೇನೆ. ಆದರೆ ಇದು ನನಗೆ ಆಸಕ್ತಿದಾಯಕವೆನಿಸಿತು. ಬೇರೆಯವರೂ ಅವರನ್ನು (ಶ್ರೀ ಅರವಿಂದರನ್ನು) ನೋಡಿರಬಹುದು, ಆದರೆ ಅವರಾರೂ ಅದರ ಬಗ್ಗೆ ನನಗೆ ಹೇಳಲಿಲ್ಲ. ಆದರೆ ಅವಳು ಅದನ್ನು ಬರೆದು ನನಗೆ ತಿಳಿಸಿದ್ದಳು, “ನಿಮ್ಮ ಬದಿಗೆ ಶ್ರೀ ಅರವಿಂದರು ನಿಂತಿದ್ದನ್ನು ನಾನು ನೋಡಿದೆ, ಅದು ನಿಜವೇ?”

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಆಗಸ್ಟ್ 21, 1965**

ಶ್ರೀ ಅರವಿಂದರು ನಮಗೆ ಹೇಳಿದ್ದಾರೆ (ಅವರೇ ಹೇಳಿದ್ದು), ಮನಸ್ಸಿನ ಮೇಲೊಂದು ಮಾನಸಿಕ ಪ್ರಜ್ಞೆಗಿಂತ ಹೆಚ್ಚು ವಿವೇಕವುಳ್ಳ ಪ್ರಜ್ಞೆಯೊಂದಿದೆ ಮತ್ತು ಮಾನವ

ಸಂಕಲ್ಪಕ್ಕಿಂತ ಹೆಚ್ಚು ಪ್ರಭಾವಶಾಲಿಯಾದ ಸಂಕಲ್ಪವು ವಸ್ತುವಿನ ಆಳದಲ್ಲಿದೆ ಎನ್ನುವುದು ಅನುಭವದಿಂದ ನಮಗೆ ಮನದಟ್ಟಾಗಿದೆ.

ನಮ್ಮೆಲ್ಲ ಪ್ರಯತ್ನವು ಈ ಪ್ರಜ್ಞೆಯನ್ನು ಹಾಗೂ ಈ ಸಂಕಲ್ಪವನ್ನು ನಮ್ಮ ಜೀವನಗಳನ್ನು ಹಾಗೂ ಕ್ರಿಯೆಗಳನ್ನು ನಿಯಂತ್ರಿಸುವಂತೆ, ನಮ್ಮೆಲ್ಲ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸುವಂತೆ ಮಾಡುವುದಾಗಿದೆ. ಈ ರೀತಿಯಾಗಿ ಈ ಆಶ್ರಮವು ನಿರ್ಮಿಸಲ್ಪಟ್ಟಿದೆ. ಶ್ರೀ ಅರವಿಂದರು ಈ ಆಶ್ರಮದ (ಆಗ ಆಶ್ರಮವು ಬಾಡಿಗೆಯ ಎರಡು ಮನೆಗಳಲ್ಲಿತ್ತು ಮತ್ತು ಕೆಲವೇ ಅನುಯಾಯಿಗಳಿದ್ದರು) ಜವಾಬ್ದಾರಿಯನ್ನು ನನಗೆ 1926ರಲ್ಲಿ ಕೊಟ್ಟ ದಿನದಿಂದ, ಎಲ್ಲವೂ (ಆಶ್ರಮದ ಎಲ್ಲವೂ) ಬೆಳವಣಿಗೆಯನ್ನು ಹಾಗೂ ಅಭಿವೃದ್ಧಿಯನ್ನು ಕಂಡಿವೆ ಮತ್ತು ಪ್ರತಿಯೊಂದು ಸೇವೆಯನ್ನು ಕೃತ್ರಿಮವಾಗಿ ಯೋಜನೆಯಿಂದ ರಚಿಸಲ್ಪಟ್ಟಿಲ್ಲ, ಆದರೆ ಅದು ಜೀವಂತಿಕೆಯ ಮತ್ತು ಕ್ರಿಯಾತ್ಮಕ ಬೇಡಿಕೆಯಿಂದ ರಚನೆಯಾಗಿದೆ. ಇದು ನಿರಂತರ ಬೆಳವಣಿಗೆಯ ಮತ್ತು ಅಂತ್ಯವಿಲ್ಲದ ಪ್ರಗತಿಯ ರಹಸ್ಯವಾಗಿದೆ. ಈಗಿರುವ ತೊಂದರೆಗಳು, ಮುಖ್ಯವಾಗಿ ಸಾಧನೆಯ ತೀವ್ರ ಗತಿಯನ್ನು ಅನುಸರಿಸಲಾರದ ಮಾನಸಿಕ ಪದ್ಧತಿಗಳ ಮಧ್ಯ ಪ್ರವೇಶಕ್ಕೆ ಸೋಲೊಪ್ಪುವ ಸಾಧಕರಲ್ಲಿಯ ಮಾನಸಿಕ ಪ್ರತಿರೋಧಗಳಿಂದ ಬಂದವುಗಳಾಗಿವೆ. ಇದಕ್ಕೆ, ಪ್ರಜ್ಞೆಯ ಬೆಳವಣಿಗೆ ಮತ್ತು ಪರಿಶುದ್ಧತೆ ಮಾತ್ರವೇ ಪರಿಹಾರ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮಾರ್ಚ್ 11, 1964**

## ಸಿದ್ಧತೆಯ ಹಂತಗಳು

ಶ್ರೀ ಅರವಿಂದರು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಅಲ್ಲಿರುತ್ತಿದ್ದರು.

ಹೊಸ ಅಥವಾ ಅತಿಮಾನಸ ಸೃಷ್ಟಿಗೆ ಸಂಬಂಧಿಸಿದಂತೆ, ಮಾನವ ಕುಲದ ಪರಿಸ್ಥಿತಿಯ, ಮಾನವ ಕುಲದ ವಿವಿಧ ಸ್ಥರಗಳ ಗಟ್ಟಿ ಹಾಗೂ ಜೀವಂತ ದರ್ಶನಗಳಲ್ಲಿದ್ದಂತೆ ನನ್ನನ್ನು ಒಂದು ಘಂಟೆಗೂ ಹೆಚ್ಚು ಕಾಲ ಇರುವಂತೆ ಮಾಡಿದರು. ಅದು ಅತ್ಯಂತ ಸ್ಪಷ್ಟವಾಗಿತ್ತು, ಗಟ್ಟಿಯಾಗಿತ್ತು ಮತ್ತು ಜೀವಂತಿಕೆಯಿಂದ ತುಂಬಿತ್ತು.... ಮಾನಸಿಕ ಬೆಳವಣಿಗೆಯಿಂದ ಲಾಭ ಪಡೆದುಕೊಂಡ ಮತ್ತು ತನ್ನ ಜೀವನದಲ್ಲಿ ಬಹುಜನರು ಸಂತುಷ್ಟರಾಗಿ ಇರುವ ಒಂದು ರೀತಿಯ ಸಾಮರಸ್ಯವನ್ನು (ಪ್ರಾಣಿಕ, ಕಲಾತ್ಮಕ ಮತ್ತು ಸಾಹಿತ್ಯಕ ಸಾಮರಸ್ಯ) ಸೃಷ್ಟಿಸಿಕೊಂಡ, ಪಶುತ್ವವಿರದ ಮಾನವ ಕುಲವೊಂದು ಅಲ್ಲಿತ್ತು – ಅವರೊಂದು ಸಾಮರಸ್ಯದೆಡೆಗೆ ಸೆಳೆಯಲ್ಪಟ್ಟಿದ್ದರು,

ಅವರು ಅದರೊಳಗಡೆ ಸಂಸ್ಕಾರಯುತ ಪರಿಸರದಲ್ಲಿ ಜೀವಿಸುತ್ತಿದ್ದರು, ಅಂದರೆ ಶುದ್ಧೀಕರಿಸಲ್ಪಟ್ಟ ಅಭಿರುಚಿಗಳೊಂದಿಗೆ ಮತ್ತು ಅಭ್ಯಾಸಗಳೊಂದಿಗೆ ಜೀವನ ನಡೆಸುತ್ತಿದ್ದರು. ಈ ಎಲ್ಲ ಜೀವನವು ಒಂದು ವಿಶಿಷ್ಟವಾದ ಸೌಂದರ್ಯವನ್ನು ಹೊಂದಿತ್ತು, ಇಲ್ಲಿ ಅವರು ನೆಮ್ಮದಿಯಿಂದ ಇದ್ದರು. ಯಾವುದೇ ಅನಾಹುತ ಸಂಭವಿಸದ ಹೊರತು ಅವರು ಆನಂದದಿಂದ, ಸಂತುಷ್ಟರಾಗಿ ಮತ್ತು ತೃಪ್ತರಾಗಿದ್ದಾರೆ. ಈ ಜನರನ್ನು ಹೊಸ ಬಲಗಳಿಂದ, ಹೊಸ ಸಂಗತಿಯಿಂದ ಭವಿಷ್ಯದ ಜೀವನದಿಂದ ಆಕರ್ಷಿಸಬಹುದು (ಯಾಕೆಂದರೆ, ಅವರಲ್ಲಿ ಅಭಿರುಚಿ ಇದೆ, ಅವರು ಬೌದ್ಧಿಕವಾಗಿ ಬೆಳವಣಿಗೆ ಹೊಂದಿದ್ದಾರೆ); ಉದಾಹರಣೆಗೆ, ಅವರು ಮಾನಸಿಕವಾಗಿ, ಬೌದ್ಧಿಕವಾಗಿ ಶ್ರೀ ಅರವಿಂದರ ಶಿಷ್ಯರಾಗಬಹುದು. ಆದರೆ, ಪ್ರಾಪಂಚಿಕವಾಗಿ ಬದಲಾವಣೆ ಹೊಂದಲು ಎಂದಿಗೂ ಬಯಸುವುದಿಲ್ಲ; ಒಂದು ವೇಳೆ ಅವರನ್ನು ಹಾಗೆ ಮಾಡಲು ಒತ್ತಾಯಿಸಿದರೆ, ಅದು ಅಕಾಲಿಕ ಮತ್ತು ನ್ಯಾಯಸಮ್ಮತವಲ್ಲದ ಸಂಗತಿಯಾಗುತ್ತದೆ, ಸುಮ್ಮನೆ ಒಂದು ದೊಡ್ಡ ಅವ್ಯವಸ್ಥೆಯನ್ನು ನಿರ್ಮಿಸಿದಂತೆ ಮತ್ತು ಅವರ ಜೀವನವನ್ನು ತೊಂದರೆಗೀಡು ಮಾಡಿದಂತೆ ಅಗುತ್ತದೆ.

ಇದು ಅತ್ಯಂತ ಸ್ಪಷ್ಟವಾಗಿತ್ತು.

ಕೆಲವು ಅಪರೂಪದ ವ್ಯಕ್ತಿಗಳು, ಪರಿವರ್ತನೆಗಾಗಿ ಮತ್ತು ಹೊಸ ಶಕ್ತಿಗಳನ್ನು ಸೆಳೆಯಲು ಸಾಧ್ಯವಾದ ಪ್ರಯತ್ನ ಮಾಡಲು, ವಿಷಯಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸಲು, ಅಭಿವ್ಯಕ್ತಿಗಾಗಿ ಸಾಧನವನ್ನು ಹುಡುಕಲು ಸಿದ್ಧರಾಗಿದ್ದರು. ಇವರುಗಳು ಶ್ರೀ ಅರವಿಂದರ ಯೋಗಕ್ಕಾಗಿ ಸಿದ್ಧರಾಗಿದ್ದರು (ಅಂಥವರು ಕೆಲವು ಜನ ಮಾತ್ರ ಇದ್ದರು). ಸಮರ್ಪಣೆಯ ಭಾವ ಹೊಂದಿದ್ದವರು ಮತ್ತು ಕಠಿಣವಾದ, ಯಾತನಾಮಯ ಜೀವನಕ್ಕಾಗಿ ಸಿದ್ಧರಾಗಿದ್ದವರೂ ಸಹ ಇದ್ದರು (ಒಂದು ವೇಳೆ ಅದು ಭವಿಷ್ಯದ ಪರಿವರ್ತನೆಗೆ ಸಹಾಯಕವಾಗಿದ್ದರೆ). ಆದರೆ ಅವರು ಯಾವುದೇ ರೀತಿಯಲ್ಲಿ ಬೇರೆಯವರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಬಾರದು ಮತ್ತು ಅವರ ಸ್ವಂತ ಪ್ರಯತ್ನವನ್ನು ಹಂಚಿಕೊಳ್ಳುವಂತೆ ಮಾಡಬಾರದು; ಅದು ನ್ಯಾಯಸಮ್ಮತವಲ್ಲದ್ದಾಗಬಹುದು, ಅತ್ಯಂತ ವಿಕಾರವಾದದ್ದೂ ಆಗಬಹುದು. ಯಾಕೆಂದರೆ ಅದು ವಿಶ್ವದ ಲಯವನ್ನು ಮತ್ತು ಚಲನೆಯನ್ನು ಬದಲಾಯಿಸಬಹುದು, ಅದು ಸಹಾಯಕವಾಗುವ ಬದಲು ಗೊಂದಲವನ್ನು ಸೃಷ್ಟಿಸಬಹುದು.

ಅದು ಎಷ್ಟು ಜೀವಂತಿಕೆಯಿಂದ, ಎಷ್ಟು ನೈಜತೆಯಿಂದ ಕೂಡಿತ್ತೆಂದರೆ ನನ್ನ ಮನೋಭಾವವು ಪೂರ್ಣವಾಗಿ ಬದಲಾಗಿ ಹೋಯಿತು. ಅದು ಶಾಂತಿಯನ್ನು, ಸ್ತಬ್ಧತೆಯನ್ನು ಮತ್ತು ಒಂದು ನಿರ್ಣಾಯಕ ಭರವಸೆಯನ್ನು ತಂದಿತು. ಈ ಮೊದಲಿದ್ದ ಹಠಮಾರಿತನ, ಒರಟುತನ, ಅಜಾಗರೂಕತೆ ಮತ್ತು ಎಲ್ಲ ರೀತಿಯ ಶೋಚನೀಯ ಸಂಗತಿಗಳು ಮಾಯವಾದವು. ಇದು ಮಹಾನ್ ವಿಶ್ವ ಲಯದಲ್ಲಿ ಪ್ರತಿ ವಿಷಯವು ಅದರ ಸ್ಥಾನವನ್ನು ತೆಗೆದುಕೊಳ್ಳುವ ಒಂದು ದರ್ಶನದಂತೆ ಇತ್ತು. ಪರಿವರ್ತನೆಗೆ ಮಾಡಿದ ಪ್ರಯತ್ನವು, ಒಂದು ಸಣ್ಣ ಸಂಖ್ಯೆಗೆ ಇಳಿಯಿತು (ಚಿಕ್ಕದಾಯಿತು), ಸಾಕ್ಷಾತ್ಕಾರಕ್ಕೆ ಹೆಚ್ಚು ಅಮೂಲ್ಯ ಮತ್ತು ಹೆಚ್ಚು ಶಕ್ತಿಯುತ ವಿಷಯವಾಯಿತು. ಇದು ಹೊಸ ಸೃಷ್ಟಿಯ ಪ್ರವರ್ತಕರಾಗಿರುವವರಿಗೆ ಒಂದು ಆಯ್ಕೆಯನ್ನು ಮಾಡಿದಂತಾಯಿತು. "ಹರಡುತ್ತಿರುವ", "ತಯಾರಿಸುತ್ತಿರುವ" ಅಥವಾ "ಮಥಿಸುತ್ತಿರುವ ವಿಷಯದ" ಎಲ್ಲ ಕಲ್ಪನೆಗಳು... ಬಾಲಿಶತನದ ಸಂಗತಿಗಳು. ಇದು ಮಾನವನ ಅಸಹನೆಯಾಗಿದೆ.

ಆ ನೋಟವು ಒಂದು ಸೌಂದರ್ಯದ್ದಾಗಿತ್ತು – ಅಂತೆಯೆ ಭವ್ಯವಾಗಿತ್ತು, ಶಾಂತವಾಗಿತ್ತು, ಮಂದಸ್ಮಿತವಾಗಿತ್ತು. ಓಹ್! ಅದು ಪೂರ್ಣವಾಗಿತ್ತು, ನಿಜವಾಗಿಯೂ ದೈವಿಕ ಪ್ರೀತಿಯಿಂದ ತುಂಬಿತ್ತು. ಅದು "ಕ್ಷಮಿಸುವಂಥ" ದೈವಿಕ ಪ್ರೀತಿ ಅಲ್ಲ. ಪ್ರತಿಯೊಂದು ವಿಷಯವೂ ಅದರ ಸ್ಥಾನದಲ್ಲಿ, ತನ್ನ ಆಂತರಿಕ ಲಯವನ್ನು ಸಾಧ್ಯವಾದಷ್ಟು ಪೂರ್ಣವಾಗಿ ಸಿದ್ಧಿಸಿಕೊಳ್ಳುವುದು. ಅದೊಂದು ಬಹಳ ಸುಂದರ ಉಡುಗೊರೆಯಾಗಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/24–25**

## ಶ್ರೀ ಅರವಿಂದರು ಅವರು ಪುನರಾವರ್ತನೆಯಾಗುವುದನ್ನು ನಿಲ್ಲಿಸಲಿಲ್ಲ

ನಾನು ಮಾಡುತ್ತಿರುವುದೆಲ್ಲವೂ, ಈ ದೇಹವು ಮಾಡುತ್ತಿರುವುದೆಲ್ಲವೂ, ಇತರರಿಗೆ ರವಾನಿಸುವ ಶಕ್ತಿಯನ್ನು ಹೊಂದಿದೆ – ಅದನ್ನೀಗ ನಾನು ನಿಖರವಾಗಿ ಅಧ್ಯಯನ ಮಾಡುತ್ತಿದ್ದೇನೆ. ಪ್ರಜ್ಞೆಯ ಕಂಪನದೊಂದಿಗೆ (ತಲೆಯ ಸುತ್ತ ಹೊರಸೂಸುವ ಸನ್ನೆ) ಜನರನ್ನು ಸಂಪರ್ಕಿಸಲು ಇದು ಒಂದು ರೀತಿಯ ಶಕ್ತಿಯಾಗಿದೆ, ಇದು ಹಲವಾರು ಜನರು ಮತ್ತು ವಸ್ತುಗಳ ಮೇಲೆ ಕೇಂದ್ರೀಕೃತ–ವಾಗಿರುತ್ತದೆ (ಭೂಮಿಯಾದ್ಯಂತ, ನೈಸರ್ಗಿಕವಾಗಿ), ಆದರೆ ಕೆಲವು ಅಂಶಗಳ

ಮೇಲೆಯೂ ಸಹ. ಮಿದುಳಿನಲ್ಲಿ ಆ ಇಳಿಯುವಿಕೆಯು ಇದ್ದಂಥ ರಾತ್ರಿಯಲ್ಲಿ ಬಂದ ಶಕ್ತಿ ಅದು: ಯಾವುದೇ ಕ್ಷಣದಲ್ಲಿ ನಾನು ಇಲ್ಲೊಂದು ಕಿರಣವನ್ನು, ಅಲ್ಲೊಂದು ಕಿರಣವನ್ನು ಹರಿಸಲು ಸಾಧ್ಯವಾಯಿತು, ಇಲ್ಲೊಂದು ಬಿಂದುವನ್ನು, ಅಲ್ಲೊಂದು ಬಿಂದುವನ್ನು ಸ್ಪರ್ಶಿಸಲು ಸಾಧ್ಯವಾಯಿತು.... (ದಾರಿ ದೀಪದಂತೆ ಸನ್ನೆ).

ಅದನ್ನೇ ಶ್ರೀ ಅರವಿಂದರು ಎಂದಿಗೂ ಪುನರಾವರ್ತಿಸುವುದನ್ನು ನಿಲ್ಲಿಸಲಿಲ್ಲ: "ಎಲ್ಲವನ್ನೂ ನೀವೇ ಮಾಡಲು ಪ್ರಯತ್ನಿಸಬೇಡಿ, ನೀವು ಅವಳನ್ನು ನಂಬಿದರೆ, ಶ್ರೀಮಾತೆಯವರು ನಿಮಗಾಗಿ ಅದನ್ನು ಮಾಡುತ್ತಾರೆ."

ಇದನ್ನು ನಾನು ಯಾರಿಗೂ ಹೇಳಲಿಲ್ಲ. ಆದರೆ ಇದು ಸತ್ಯ. ನಾನು ಅದನ್ನು ಎಂದಿಗೂ ಹೇಳುವುದಿಲ್ಲ. ನಾನೀಗ ನಿಮಗೆ ಹೇಳುತ್ತಿದ್ದೇನೆ. ಆದರೆ ಇದು ಸಂಪೂರ್ಣ ಸತ್ಯ. ಇದನ್ನು ಒಂದು ದೇಹಕ್ಕಾಗಿ ಮಾಡಲಾಗಿಲ್ಲ: ಇದನ್ನು ಭೂಮಿಗಾಗಿ ಮಾಡಲಾಗಿದೆ.

ಆದರೆ ಪ್ರತ್ಯೇಕತೆಯ ಪ್ರಯೋಜನವೆಂದರೆ ನೀವು ನಿಖರವಾದ ಬಿಂದುಗಳಲ್ಲಿ ಕಿರಣವನ್ನು ಗುರಿಯಾಗಿಸಬಹುದು (ಕಿರಣದಂತಹ ಅದೇ ಸನ್ನೆ) ಮತ್ತು ಫಲಿತಾಂಶವನ್ನು ಪಡೆಯಬಹುದು. ಜನರನ್ನು ದಿಗ್ಭ್ರಮೆಗೊಳಿಸುವ ಮತ್ತು ಮೂರ್ಖರನ್ನಾಗಿ ಮಾಡುವ ಅದ್ಭುತ ರೀತಿಯಲ್ಲಿ ಅಲ್ಲ, ಅದಲ್ಲ; ಆದರೆ ನಿಮಗೆ ಗೊತ್ತೆ, ಆಕಾಂಕ್ಷೆಯು ಪ್ರಾಮಾಣಿಕವಾಗಿದ್ದಾಗ, ಇಚ್ಛೆಯು ಪ್ರಾಮಾಣಿಕವಾಗಿದ್ದಾಗ ನಾನು ನಿರಂತರವಾಗಿ ಮಾಡುವುದೇನೆಂದರೆ.... "ಪ್ರಭು, ನಾನು ಅದನ್ನು ಮಾಡಲಾರೆ, ನನಗಾಗಿ ಮಾಡು. ಸ್ವಾಮಿ, ನಾನು ಅದನ್ನು ಮಾಡಲಾರೆ, ನನಗಾಗಿ ಮಾಡು.... (ಸಮರ್ಪಣೆಯ ಸನ್ನೆ):" ಸರಿ, ಶ್ರೀ ಅರವಿಂದರು ಹೇಳಿದ್ದು ಹೀಗೆ: ನನ್ನ ಸುತ್ತಮುತ್ತಲಿನ ಜನರು ಭಗವಂತನೊಂದಿಗೆ ನೇರ ಸಂಪರ್ಕವನ್ನು ಹೊಂದಿಲ್ಲದಿದ್ದರೆ (ನನ್ನ ಜನ್ಮದೊಂದಿಗೆ ನಾನು ತಂದ ಸಂಪರ್ಕ, ಅದರಲ್ಲಿ ನಾನು ಹೆಚ್ಚು ಹೆಚ್ಚು ಜಾಗೃತನಾಗಿದ್ದೇನೆ, ಆದರೆ ಇದು ಈ ಐಹಿಕ ಅಸ್ತಿತ್ವದ ಮೂಲವಾಗಿದೆ) ಅವರು ಆ ಸಂಪರ್ಕವನ್ನು ಹೊಂದಿಲ್ಲದಿದ್ದರೆ, ಅವರು ನನ್ನೊಂದಿಗೆ ಪ್ರಜ್ಞಾಪೂರ್ವಕ ಸಂಪರ್ಕವನ್ನು ಹೊಂದಬಹುದು; ಅದು ಸುಲಭ, ಏಕೆಂದರೆ, ಇದು ಗೋಚರಿಸುವ ಸಂಗತಿಯಾಗಿದೆ, ಸ್ಪಷ್ಟವಾದ ಸಂಗತಿಯಾಗಿದೆ, ನಿಜವಾದ ಅಸ್ತಿತ್ವದೊಂದಿಗಿದೆ. ಆದ್ದರಿಂದ ನಾವು ಆ ಅರ್ಪಣೆಯ ಸ್ಥಿತಿಯಲ್ಲಿರಬಹುದಾದರೆ (ಪದಗಳು ಅಥವಾ ವಾಕ್ಯಗಳೊಂದಿಗೆ ಅಲ್ಲ, ಆದರೆ

ನಿಜವಾದ ಪ್ರಾಮಾಣಿಕ ಭಾವನೆಯೊಂದಿಗೆ): "ಇಲ್ಲ, ನಾನು ಎಲ್ಲವನ್ನೂ ನನ್ನಷ್ಟಕ್ಕೆ ನಾನು ಹೇಗೆ ಮಾಡಬಹುದೆಂದು ನನಗೆ ತಿಳಿದಿಲ್ಲ, ನಾನು ಹೇಗೆ ಮಾಡಬಹುದು? ಇದು ತುಂಬಾ ಅಸಾಧಾರಣ ಕೆಲಸ, ನಾನು ಹೇಗೆ ಮಾಡಬಹುದು?... ನಿಜವಾದ ಚಲನೆ ಮತ್ತು ಅಸತ್ಯದ ನಡುವೆ ಅಥವಾ ಸತ್ಯಕ್ಕೆ ಕಾರಣವಾಗುವ ಚಲನೆಯ ನಡುವೆ ನಾನು ಹೇಗೆ ನಿಖರವಾಗಿ ಗುರುತಿಸಬಲ್ಲೆ... ಇಲ್ಲ, ನನಗೆ ಗೊತ್ತಿಲ್ಲ – ನಾನು ಎಲ್ಲವನ್ನೂ ನಿಮಗೆ ನೀಡುತ್ತೇನೆ, ನನಗಾಗಿ ಮಾಡಿ."

ಮತ್ತು ಇದು ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲ ಸ್ವಯಂಪ್ರೇರಿತವಾಗಿ, ಪ್ರಾಮಾಣಿಕವಾಗಿ, ಸಂಪೂರ್ಣವಾಗಿ (ಅರ್ಪಣೆಯ ಸನ್ನೆ) ಮುಂದುವರಿಯುತ್ತದೆ, ಒಂದು ದಿನದಲ್ಲಿ ಎಷ್ಟು ಸಾವಿರ ಸೆಕೆಂಡುಗಳು ಇವೆಯೊ ಅಷ್ಟು ಎಂದು ನಾನು ಹೇಳಬಲ್ಲೆ: "ಇಗೋ, ನಾನು ಅದನ್ನು ನಿಮಗೆ ಕೊಡುತ್ತೇನೆ." ಓಹ್, ಇಲ್ಲಿ ಒಂದು ಕಷ್ಟ ಬರುತ್ತದೆ; ಓಹ್, ಇವರಿಗೆ ಮತ್ತು ಅವರಿಗೆ ಕಷ್ಟವಿದೆ; ಓಹ್, ಈ ಸಂದರ್ಭಗಳು ಕೆಟ್ಟವು, ಓಹ್... "ಇಲ್ಲಿ, ಇಲ್ಲಿ, ಇಲ್ಲಿ, ನನ್ನಲ್ಲಿರುವ ಜ್ಞಾನದಿಂದ ನಾನು ಅದನ್ನು ಪರಿಹರಿಸಲು ಸಾಧ್ಯವಿಲ್ಲ – ಏನನ್ನು ಮಾಡಬೇಕೋ ಅದನ್ನು ಮಾಡಿ; ಏನನ್ನು ಮಾಡಬೇಕೋ ಅದನ್ನು ಮಾಡು, ನಾನು ನಿಮಗೆ ಕೊಡುತ್ತೇನೆ. ಇದು ಪ್ರತಿ ನಿಮಿಷ, ಪ್ರತಿ ಸೆಕೆಂಡಿನ ಸೂಚನೆ. ನಂತರ, ಸ್ವಲ್ಪ ಸಮಯದ ನಂತರ, ನೀವು ಅಂತಹ ಸ್ಪಷ್ಟವಾದ ಪ್ರತಿಕ್ರಿಯೆಯನ್ನು ನೋಡುತ್ತೀರಿ, ನಿಮಗೆ ತಿಳಿದಿರುವಂತೆ, ಅನುಮಾನಗಳನ್ನು ಹೊಂದಿರುವ ಅಥವಾ ತಿಳುವಳಿಕೆ ಕೊರತೆಯಿರುವ ಎಲ್ಲವನ್ನೂ ಮೊದಲು ಸುಮ್ಮನಿರಲು ಮತ್ತು ನಂತರ ಬಿಟ್ಟುಕೊಡಲು ಒತ್ತಾಯಿಸಲಾಗುತ್ತದೆ.

ಕೇವಲ, ನಾನು ಜನರನ್ನು ಸಕ್ರಿಯವಾಗಿ ನೋಡಿಕೊಳ್ಳಲು ಸಾಧ್ಯವಾಗದ ಪರಿವರ್ತನೆಯ ಅವಧಿಯಲ್ಲಿ ಇದ್ದೇನೆ, ಅಂದರೆ, ಅವರನ್ನು ನೋಡಲು, ಅವರೊಂದಿಗೆ ಮಾತನಾಡಲು, ಅವರನ್ನು ಸ್ವೀಕರಿಸಲು, ಅವರಿಗೆ ಧ್ಯಾನವನ್ನು ನೀಡಲು – ನನಗೆ ಸಾಧ್ಯವಿಲ್ಲ, ಅದು ಅಸಾಧ್ಯ, ದೇಹವು ಎರಡೂ ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಹತ್ತು ಅಥವಾ ನೂರು ಜನರಿಗೆ ಪ್ರಗತಿ ಹೊಂದಲು ಸಹಾಯ ಮಾಡುವುದಕ್ಕಿಂತ ಹೆಚ್ಚು ಸತ್ಯವು – ಬಲವನ್ನು ಆಕರ್ಷಿಸಲು ಮತ್ತು ಮೌನವಾಗಿ (ಬೆಳಗುವ ಸನ್ನೆ) ಕೆಲಸ ಮಾಡುವುದು ಸ್ಪಷ್ಟವಾಗಿ ಹೆಚ್ಚು ಮುಖ್ಯವಾಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮಾರ್ಚ್ 28, 1964**

## ಅಭೇದ್ಯವಾದ ಮಂದಹಾಸ

**– ಅನು: ಡಾ॥ ಬಿ.ಆರ್. ಭೀಡ್, ರಾಯಚೂರು**

ಮೊದಲ ಸಲ ಅತಿಮಾನಸವು ನನ್ನ ಶರೀರದ ಅಣುಗಳಲ್ಲಿ ಪ್ರವೇಶ ಮಾಡಿದ್ದು ಮಿದುಳು ಮಿದುಳಿನವರೆಗೂ ಅದರ ಪ್ರವಾಹ ಏರಿ ಹೋಯಿತು. ಮಿದುಳು ಎಂಥದೋ ಒಂದರ ಸಾನಿಧ್ಯದಲ್ಲಿರುವುದರ ಅನುಭವ ಪಡೆಯಿತು. (ನಗುತ್ತ) ಅದು ತುಂಬ ಪ್ರಬಲವಾದ ಸಾನಿಧ್ಯ, ಒಂದಾಗಿನಕಿಂತ ಹೆಚ್ಚು ಬಲಶಾಲಿಯಾದ ಸಾನಿಧ್ಯ ಅದು. ಮೆದುಳಿಗೇನೂ ಅದು ಸಾಮಾನ್ಯ, ಮೂರ್ಖರಂತೆ ಅದು ಆತಂಕಕ್ಕೊಳಗಾಯಿತು. ನನ್ನ ಮಟ್ಟಿಗೇ (ತಲೆಯ ಮೇಲೆ ಕೈ ಮಾಡಿ ಹೇಳುತ್ತಾರೆ) ನಾನದನ್ನು ಪ್ರತ್ಯಕ್ಷಿ ನೋಡಿದೆ, ಮಿದುಳಿಗೆ ಸ್ವಲ್ಪ ಆತಂಕವಾಗಿತ್ತು, ನಾನದಕ್ಕೆ ಸಮಧಾನ ಹೇಳುವ ಅದನ್ನು ಶಾಂತಪಡಿಸುವ ಪ್ರಯತ್ನ ಮಾಡಿದೆ. ಅದು ತುಸು ಸಮಾಧಾನ ಹೊಂದಿತು, ನಿಶ್ಚಲವಾಗಿ ಕುಳಿತಿತು – ಆದರೆ ಅಸಮಾಧಾನದಿಂದ ಕುದಿಯುತ್ತಿತ್ತು. ಯಾವಾಗ ಲಾವಾರಸ ಉಕ್ಕಿ ಹೊರಬರುವುದೋ ಅನ್ನುವ ಹಾಗಿತ್ತು. ಅಂತೆಯೇ ನಾನು ಮತ್ತೆ ಹೇಳಿದೆ; ಹೀಗೆ ಮಾಡೋಣ, ನಾವೀಗ ಶ್ರೀ ಅರವಿಂದರ ಬಳಿ ಹೋಗೋಣ, ಅವರೇನು ಹೇಳುತ್ತಾರೋ ಹಾಗೆ ಮಾಡೋಣ" ತಕ್ಷಣ ಅನೂಹ್ಯವಾದ ರೀತಿಯಲ್ಲಿ ಎಲ್ಲವೂ ಶಾಂತವಾಗಿಬಿಟ್ಟಿತು. ನಾನು ಶ್ರೀ ಅರವಿಂದರ ಕೋಣೆಯಲ್ಲಿ ಎಚ್ಚೆತ್ತೆ, ಅದು ಸೂಕ್ಷ್ಮ ಭೌತಿಕದಲ್ಲಿದೆ, ಇದು ಭೌತಿಕದಲ್ಲಿರುವಷ್ಟೇ ನಿಜವಾಗಿದೆ, ಅಷ್ಟೇ ಹಟ್ಟಿಯಾಗಿದೆ, ದೃಢವಾಗಿದೆ. ನಾನಿಲ್ಲಿಗೆ ಹೋದೆ, ಹೋದೆ ಅಂದರೆ ನಾನೇ ಅಂತಲ್ಲ, ನನ್ನ ಭೌತಿಕ ಪ್ರಜ್ಞೆ ಅಲ್ಲಿ ಹೋಯಿತು. ಶ್ರೀ ಅರವಿಂದರಿಗೆ ಎಲ್ಲವನ್ನೂ ವಿವರಿಸಿ ಹೇಳಿದೆ. ನನ್ನ ಮಿದುಳು ತುಂಬ ಆನಂದಿತವಾಗಿತ್ತು, ಹೇಳುತ್ತಲೇ ವಿವರಿಸುತ್ತಲೇ ಇತ್ತು. ಪ್ರತಿಯಾಗಿ ಶ್ರೀ ಅರವಿಂದರು ನಸುನಕ್ಕರು. ಅದು ಅಭೇದ್ಯವಾದ ನಗು ಆಯಿತು. ಅಲ್ಲಿಗೆ ಎಲ್ಲ ಉತ್ತೇಜನ, ಉದ್ವೇಗ, ಆವೇಶ, ಎಲ್ಲ ಮಾಯವಾಯಿತು, ಎಲ್ಲ ಶಾಂತವಾಯಿತು. ಶ್ರೀ ಅರವಿಂದರು ಸುಮ್ಮನೇ ನಸುನಗುತ್ತ ನೋಡಿದರು, ಅದು ಶಾಶ್ವತತೆಯ ಮುಖದ ಮೇಲಿನ ನಗು. ಎಲ್ಲ ಉದ್ವೇಗ ಮಾಯವಾಗಿ ಬಿಟ್ಟಿತು. ಅಲ್ಲಿಗೆ ಶ್ರೀ ಅರವಿಂದರ ಮಧ್ಯಾಹ್ನದ ಊಟದ ಸಮಯವಾಯಿತು. ಅವರಿಗೆ ತೊಂದರೆ ಮಾಡಬಾರದೆಂದು ನಾನು ಬೇರೊಂದು ಕೋಣೆಗೆ ಹೋದೆ. ತುಸು ಹೊತ್ತಿನ ನಂತರ ನನ್ನೆದುರು ಬಂದು ಅವರು ನಿಂತುಕೊಂಡರು. (ನನ್ನ ದೈಹಿಕ ಸತ್ತೆ ಅಥವಾ ದೈಹಿಕ ಪ್ರಜ್ಞೆ ಎಂದುಕೊಳ್ಳಿ, ಅದು ಶಾಂತವಾಗಿತ್ತು, ಅದಕ್ಕೆ ಸಾಕಷ್ಟು ಕಾಲಾವಕಾಶ

ಸಿಕ್ಕಿತ್ತಲ್ಲವೇ) ನಾನು ಮೊಳಕಾಲೂರಿ ಕುಳಿತು ಅವರ ಕೈಯನ್ನು ತೆಗೆದುಕೊಂಡು (ಇದು ನಿಜವಾಗಿಯೂ ಇರಬಹುದಾದ ದೈಹಿಕ ಅಥವಾ ಭೌತಿಕಕ್ಕಿಂತ ಹೆಚ್ಚು ಸ್ಪಷ್ಟವಾದ ಅನುಭವ!) ನಾನವರ ಕೈಗೆ ಮುತ್ತು ಕೊಟ್ಟೆ. ಅವರು ಇಷ್ಟೇ ಹೇಳಿದರು "ಓಹ್ ಇದೊಳ್ಳೆಯದಾಯಿತು!" (ಶ್ರೀಮಾತೆ ನಗುತ್ತಾರೆ)

ನಾನೆಷ್ಟೋ ವಿವರಗಳನ್ನು ಬಿಟ್ಟಿದ್ದೇನೆ, ಹೇಳಲು ಹೋಗಿಲ್ಲ. (ಇದೆಲ್ಲ ಬಹುಶಃ ದೀರ್ಘಕಾಲ, ಸುಮಾರು ಒಂದು ಗಂಟೆಯವರೆಗೆ ಆದ ಅನುಭವ) ಅವರು ಕೋಣೆಯಿಂದ ಹೊರಹೋದವರು, ನಾನೊಬ್ಬಳೇ ಉಳಿದೆ (ತಮಗೇನು ಹೇಳಬೇಕಾಗಿತ್ತೋ ಅದೆಲ್ಲವನ್ನು ಒಂದೇ ನೋಟದಲ್ಲಿ ನನಗೆ ಹೇಳಿ ಹೋಗಿಬಿಟ್ಟರು; ಮತ್ತು ನಾನದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡೆ ಕೂಡ). ನಾನು ನಿಧಾನವಾಗಿ ಹೆಜ್ಜೆ ಹಾಕಿದೆ (ಹೊಸ್ತಿಲು ದಾಟಿ ಬರುವ ಸನ್ನೆ ಮಾಡುತ್ತಾರೆ). ನಾನು ನನ್ನ ಹಾಸಿಗೆಯ ಮೇಲಿದ್ದೆ. ನನ್ನಷ್ಟಕ್ಕೆ ನಾನೇ ನನಗೆ ಹೇಳಿಕೊಂಡೆ, "ನಿಜ, ನಾವೇ ಎಲ್ಲ ಸಂಗತಿಗಳನ್ನು ಕ್ಲಿಷ್ಟವಾಗಿ ಮಾಡಿಕೊಳ್ಳೇವೆ. ನಿಜವಾಗಿ ತುಂಬಾ ಸರಳವಾಗಿದೆ. ನೀವು ಇಷ್ಟು ಮಾಡಿದರೆ ಸಾಕು (ಅದೇ ಕೈ ಸನ್ನೇ) ಅಲ್ಲಿಗೆ ಮುಗಿಯಿತು. ನೀವು ಗೆದ್ದು ಬಿಡುವಿರಿ (ಅದೇ ಕೂ ಸನ್ನೇ, ಆದರೆ ವಿರುದ್ಧ ದಿಕ್ಕಿನಲ್ಲಿ) ನಿಮ್ಮ ಕೆಲಸ ಆಯಿತು".

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 2, 1962**

**ಸುವರ್ಣ ಶಾಂತಿ**

*ದರ್ಶನದ ಸಮಯದಲ್ಲಿ ನಿನಗೆ ಹೇಗೆನ್ನಿಸಿತು? ದರ್ಶನ ಅಂದರೆ ದರ್ಶನ ಅಲ್ಲ ಧ್ಯಾನದ ಸಮಯದಲ್ಲಿ? ಏನೂ ವಿಶೇಷ ಅನ್ನಿಸಲಿಲ್ಲವೇ?*

ಹಾಗೆಲ್ಲ, ಮಾತಾಜಿ, ಅದು ತುಂಬ ಚೆನ್ನಾಗಿತ್ತು. ಆದರೆ ಹೇಗೆ ಹೇಳಬೇಕೋ ನನಗೆ ತಿಳಿಯದು.

*ಓಹ್.. (ತುಸು ನಿರಾಶೆಯ ಧ್ವನಿಯಲ್ಲಿ) ನೀನು ಮನೆಯಲ್ಲಿದ್ದೆಯಾ?*

ಇಲ್ಲ ಮಾತಾಜಿ, ನಾನು ಶ್ರೀ ಅರವಿಂದರ ಕೋಣೆಯಲ್ಲಿದ್ದೆ.

*ಓಹ್.*

ನಿನಗೆ ಗೊತ್ತಿದೆಯಾ, ಸಮಯವಾದ ತಕ್ಷಣ (ಆಗ ಧ್ಯಾನದ ಸಮಯ) ನಾನು ಕುಳಿತುಬಿಟ್ಟೆ. ಒಂದು ಕ್ಷಣ ಮೊದಲು ಇರಬಹುದು. ಆದರೆ ತಕ್ಷಣ ಹಿಂದೆ,

ಮುಂದೆ ಏನೂ ತಿಳಿಯದಂತೆ, ದೊಡ್ಡ ಆಘಾತದ ತರಹ, ಒಂದು ಅತಿ ಸಾಮರ್ಥ್ಯ–ಶಾಲಿಯಾದ ಅವತರಣ ಸಂಭವಿಸಿತು. (ನಾನು ಪೂರ್ಣತಾ ಅಚಲಳಾಗಿ ಕುಳಿತಿದ್ದೆ). ಆ ಸಮಯದಲ್ಲಿ ಶ್ರೀ ಅರವಿಂದರೇ ನನಗೆ ಹೇಳುತ್ತಿರುವಂತೆ ಭಾಸವಾಯಿತು (ಏಕೆಂದರೆ ಅವರ ವಿವರಣೆ ಆ ಅವತರಣದ ಜೊತೆ ಜೊತೆಗೇ ಆಯಿತು; ಅದೊಂದು ದರ್ಶನವಲ್ಲ, ಕೇವಲ ದರ್ಶನ ಅಲ್ಲ, ಅದು ತುಂಬಾ, ಅತ್ಯಂತ ಘನಿಷ್ಠವಾಗಿತ್ತು. ಆ ವಾಣಿ, ಆ ಶಬ್ದವೆಂದರೆ ಬಂಗಾರದ ಶಾಂತಿಯೇ ಸರಿ. ಅದೆಷ್ಟು ಶಕ್ತಿಶಾಲಿಯಾಗಿತ್ತೇಂದರೆ ಅದು ತುಸು ಕೂಡ ಅಲ್ಲಾಡುತ್ತಿರಲಿಲ್ಲ, ಅರ್ಧ ತಾಸಿನವರೆಗೆ ಅಲ್ಲಿ ಏನೇನೂ ಚಲನೆಯೇ ಇರಲಿಲ್ಲ.

ಇದು ತುಂಬ ಹೊಸದು. ನನಗಿದು ಮೊದಲ ಬಾರಿ, ಹಿಂದೆಂದೂ ಹೀಗೆ ಆಗಿರಲಿಲ್ಲ. ಅದನ್ನು ನಾನು ನೋಡಿದೆ, ದರ್ಶಿಸಿದೆ ಎಂದು ಹೇಳಲಾರೆ. ಅದು ನೋಡುವ ತಿಳಿಯುವ ಕ್ರಿಯೆ ಅಲ್ಲ. ನನ್ನ ಬಳಿ ಇದ್ದ ಕೆಲ ಜನರು ತಾವಾಗಿಯೇ ಹೇಳಿದರು, ನನ್ನ ಜೊತೆ ಧ್ಯಾನಕ್ಕೆ ಕುಳಿತುಕೊಳ್ಳತ್ತಲೇ (ಅತಿ ಬೃಹತ್ ಮಹಾಶಕ್ತಿ ಬಂದು ಇಳಿಯಿತು. ಅವತರಣ ಹೊಂದಿತು, ಎಲ್ಲವೂ ಶಾಂತವಾಗಿತ್ತು, ಅಂಥ ಶಾಂತಿಯನ್ನು, ಮೌನವನ್ನು ಅವರು ಹಿಂದೆಂದೂ ಅನುಭವಿಸಿರುತ್ತಿಲ್ಲಲವೆಂದು ಹೇಳಿದರು.

ಓಹ್ ಸ್ವರ್ಣಿ ಶಾಂತಿ...

ನಿಜವಾಗಿ ಅದೊಂದು ರೀತಿಯ ಅತಿಮಾನಸದ ಸ್ವರ್ಣಿಮ ಪ್ರಕಾಶ. ಆದರೆ ಅದು.. ಓಹ್ ಬಹು ಪ್ರಬಲ ಶಾಂತಿ. ಘನವಾದ ಶಾಂತಿ, ಅಲ್ಲೇನೂ ಅಸ್ಪಷ್ಟತೆಯ ಅಥವಾ ಕ್ರಿಯೆಯ ನಿಷೇಧವಿರಲಿಲ್ಲ.. ಹೌದು ಅದು ಭೌತಿಕದಷ್ಟು ಅತೀವ ಘನವಾಗಿತ್ತು. ಅತಿ ಘನನಿಷ್ಠವಾದ ಶಾಂತಿ ಅದು. ನಾನಲ್ಲಿಗೇ ನಿಂತುಬಿಡಲು ಇಚ್ಛಿಸಿಲ್ಲ. ಅದೇನೋ ಒಂದು ರೀತಿಯ ಗಂಟೆ ಬಾರಿಸಿದಂತಾಯಿತು. ಆದರೆ ನಾನಲ್ಲಿ ಮೂರ್ನಾಲ್ಕು ನಿಮಿಷ ಹಾಗೆಯೇ ನಿಂತುಕೊಂಡೆ. ನಾನು ನಿಲ್ಲುತ್ತಲೇ ಅದು ಮಾಯವಾಯಿತು. ನನ್ನ ಭೌತಿಕ ಶರೀರದ ಮೇಲೆ ಅದರ ಪರಿಣಾಮ ಗಟ್ಟಿಯಾಗಿಯೇ ಆಯಿತು, ಶರೀರದ ಬದಲಾವಣೆ ಆಯಿತು, ಶರೀರವೇ ಬದಲಾಯಿತು. ಎಷ್ಟು ಬದಲಾವಣೆ ಅಂದರೆ, ಆ ಅನುಭವ ಮುಗಿಯುತ್ತಲೇ ನನಗೆ ತುಂಬ ಅಸಮಾಧಾನವಾಯಿತು, ನನ್ನ ಸಮತೋಲನ ಕಂಡುಕೊಳ್ಳ–ಬೇಕಾದರೆ ನನಗೆ ಮತ್ತೆ ಅರ್ಧ ನಿಮಿಷ ಬೇಕಾಯಿತು.

ಅದು ಬಂದಿತು, ಹೋಯಿತು, ಅದು ಧ್ಯಾನಕ್ಕಾಗಿ ಬಂದಿತ್ತು, ಅದಾದ ನಂತರ ಹೊರಟು ಹೋಯಿತು. ಅದು ಸುಮಾರು ಅರ್ಧ ಗಂಟೆಗೂ ಹೆಚ್ಚು, ಮೂವತ್ತೈದು ನಿಮಿಷಗಳಾಗಿರಬಹುದು.

ಸ್ವರ್ಣಿಮಾ ಶಾಂತಿ.

ಸಂಜೆಗೆ (ಬಾಲ್ಕನಿಯಲ್ಲಿ) ಜನರ ಗುಂಪು ದೊಡ್ಡಗಿತ್ತು (ನನಗನಿಸುವ ಮಟ್ಟಿಗೆ ಎಂದಿಗಿಂತಲೂ ನಾನಿರುವವರೆಗೆ ನೋಡಿದುದೆಲ್ಲಕ್ಕಿಂತ ಹೆಚ್ಚು ಜನ ನೆರೆದಿದ್ದರೆಂದು ತೋರುತ್ತದೆ. ಎಲ್ಲ ಓಣಿಗಳೂ ತುಂಬಿ ಹೋಗಿದ್ದವು. ಜನ ಎಲ್ಲೆಡೆ ಕಿಕ್ಕಿರಿದು ನೆರೆದಿದ್ದರು) ನಾನು ಹೊರಗೆ ಬಂದೆ. ನಾನು ಹೊರ ಬಂದ ತಕ್ಷಣ ನೆರೆದ ಜನ ಸ್ತೋಮದಿಂದ ಒಂದು ರೀತಿಯ ಪ್ರಾರ್ಥನೆ, ಸ್ತೋತ್ರ, ವಿರೋಧ ಅಥವಾ ಪ್ರತಿಭಟನೆಯ ತರಹ, ಅಂದರೆ ಜಗದ ಸದ್ಯದ ಪರಿಸ್ಥಿತಿಯ ವಿರುದ್ಧ, ವಿಶೇಷವಾಗಿ ನಮ್ಮ ಭಾರತ ದೇಶದ ಸ್ಥಿತಿಯನ್ನು ಕುರಿತು ಧ್ವನಿ ಕೇಳಿ ಬಂದಿತು. ಅದು ಅಲೆ ಅಲೆಯಾಗಿ ತೇಲಿ ಬಂದಿತು. ನಾನದರ ಕಡೆಗೆ ನೋಡಿದೆ. (ಅದು ವಿಶಿಷ್ಟವಾಗಿ ಪ್ರಬಲವೂ, ತೀಕ್ಷ್ಣವೂ ಆಗಿತ್ತು). ನನಗೆ ನಾನೇ ಹೇಳಿಕೊಂಡೆ. "ಈ ದಿನ , ಇದು ನನ್ನದಲ್ಲ, ಇದು ಶ್ರೀ ಅರವಿಂದರ ದಿನ" ನಾನು ಈ ರೀತಿ ಮಾಡಿದೆ (ಹಿಂದಕ್ಕೆ ತೆಗೆದುಕೊಳ್ಳುವ ತರಹ ಭಾವ ಪ್ರದರ್ಶಿಸುತ್ತಾರೆ) ನಾನು ಹಿಂದೆ ಸರಿದು, ಶ್ರೀ ಅರವಿಂದರೇ ಮುಂದೆ ನಿಲ್ಲುವ ಹಾಗೆ ಮಾಡಿದೆ. ಅವರು ಮುಂದೆ ಬಂದ ತಕ್ಷಣ ಬಹು ಸರಳವಾಗಿ, ಅತಿ ಸರಳ ಶಬ್ದಗಳಲ್ಲಿ ಹೀಗೆ ಹೇಳಿದರು. "ಆ ಪರಮ ಪ್ರಭುವಿಗೆ ಎಲ್ಲ ಗೊತ್ತು, ತಾನೇನು ಮಾಡುತ್ತಿರುವೆನೆಂಬುದು ಆತನಿಗೆ ಚೆನ್ನಾಗಿ ಗೊತ್ತು" (ಶ್ರೀಮಾತೆ ನಗುತ್ತಾರೆ) ನಾನೂ ಸಹ ನಗಲಾರಂಭಿಸಿದೆ, ಮೆಲ್ಲಗೆ, (ಜೋರಾಗಿ ಅಲ್ಲ, ನಸು ನಗು ಅದು) ತಕ್ಷಣ ಮುಂಜಾವಿನಲ್ಲಿ ಹೇಗಿತ್ತೋ ಅಂಥನೇ ಅದೇ ಶಾಂತಿ ಪ್ರಕಟವಾಗಿ ಬಿಟ್ಟಿತು.

ಅಷ್ಟೇ.

ಪರಮಾತ್ಮನಿಗೆ ಎಲ್ಲ ಗೊತ್ತು, ತಾನೇನು ಮಾಡುತ್ತಿರುವೆನೆಂಬುದು ಚೆನ್ನಾಗಿ ಗೊತ್ತು. ಅದು ಅವರ (ಶ್ರೀ ಅರವಿಂದರ) ಪರಿಪೂರ್ಣ ಹಾಸ್ಯ ಪ್ರಜ್ಞೆಯ ಸೂಚಕ. ಎಲ್ಲವೂ ಅದೇ ಕ್ಷಣದಲ್ಲಿ ಶಾಂತವಾಗಿ ಬಿಟ್ಟಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಆಗಸ್ಟ್ 16, 1967**

## ಭೌತಿಕ ಶರೀರದ ಮೂಲಕ ಕಾರ್ಯ

ಭೌತಿಕ ಶರೀರದ ಮೂಲಕ ನಡೆಯಬೇಕಾದ ಕಾರ್ಯ ತೀವ್ರಗತಿಯಲ್ಲೇ ನಡೆದಿದೆ. ಆದರೆ ಅದೇನೂ ಅಷ್ಟು ಸುಲಭವಲ್ಲ. ಆದರೆ ಅತಿ ಕರಾರುವಕ್ಕಾಗಿ, ಅತಿ ಸರಿಯಾಗಿ, ನಾನಾಗಲೇ ಹೇಳಿದಂತೆ, ಇದೇ ರಾತ್ರಿ ನಾನು ಶ್ರೀ ಅರವಿಂದರ ಜೊತೆಗೆ ಇದ್ದೆ. ಭೌತಿಕ ಶರೀರದ ಸಲುವಾಗಿ, ಅದರ ಪರಿವರ್ತನೆಯ ಸಲುವಾಗಿ ಏನೆಲ್ಲ ಕೆಲಸ ನಡೆದಿದೆ ಎಂಬುದನ್ನು ನನಗೆ ವಿವರವಾಗಿ ತಿಳಿಸಿ ಹೇಳಿದರು.

ಅದು ಕಠಿಣ..

ಈಗೇನು ಸಹಜವೆಂದು ತೋರುತ್ತದೋ ಅದು ನಿಜವಾಗಿ ಪೆದ್ದುತನದ ಸ್ಥಿತಿಯೇ.. ಆದ್ದರಿಂದ ಯಾವುದರ ಮೇಲೆ ವ್ಯಕ್ತಿಯು ಅವಲಂಬಿಸಲು ಯತ್ನಿಸುತ್ತಾನೋ ಅದು ನಿಜವಾಗಿ ಪೊಳ್ಳು, ಏನೇನೂ ಇಲ್ಲ. ಅಂತೇಯೇ.. ಅದು ತುಂಬ ಕಠಿಣ.

ಇದು ನಿಜವಾಗಿ ಆಸಕ್ತಿಕರ ವಿಷಯ. ಕೆಲವೊಂದು ಸಂಗತಿಗಳು ತುಂಬ ಅಪಾಯಕಾರಿ ಎಂದು ನಾವು ಭಾವಿಸುತ್ತೇವೆ (ಕೆಲ ರೋಗಗಳು, ಕೆಲ ವಿಕೃತಿಗಳು ಇತ್ಯಾದಿ) ಕೆಲವೊಂದನ್ನು ನಗಣ್ಯವೆಂದು ತಿಳಿಯುತ್ತೇವೆ, ಅದನ್ನು ಅವಿವಾದಾತ್ಮಕವಾಗಿ ಸಿದ್ಧಮಾಡಲು ಪ್ರಯತ್ನಸುತ್ತೇವೆ, ಇದೆಲ್ಲ ಯಾವುದರ ಮೇಲೂ ಕೇವಲ ಪರಮಾತ್ಮನನ್ನೇ ಆಧರಿಸಿದೆ, ಅವನೇನು ನಿರ್ಧರಿಸುತ್ತಾನೋ ಹಾಗೆಯೇ ಆಗುತ್ತದೆ ಎಂದು ಹೇಳುತ್ತೇವೆ, ಏನಾದರೂ ಸ್ವಲ್ಪ ಏರುಪೇರಾಗಲಿ, ತೀರ ಸಣ್ಣ ಕ್ಷುಲ್ಲಕ ಸಂಗತಿಯೇ ಆಗಿರಬಹುದು, ಅವನು ಶರೀರದ ಕಾರ್ಯ ಸ್ಥಗಿತಗೊಳಿಸಿಬಿಡಬಹುದು, ಯಾವುದು ಗೊತ್ತುಪಡಿಸಲು ಅಸಾಧ್ಯವೆಂದು ಮನ್ನಿಸಲ್ಪಟ್ಟಿದೆಯೋ ಅದು ತೀರ ಗೊತ್ತೇ ಆಗಿ ಹೋಗಿಬಿಡಬಹುದು. ಅದಕ್ಕೆ ಯಾವ ಮಹತ್ವವೂ ಇರದು. ಇದನ್ನು ನಾವು ಪ್ರಾಯೋಗಿಕವಾಗಿ ಮಾಡಿ ತೋರಿಸಿರುವುದನ್ನು ನೋಡಿದ್ದೇವೆ.

ಕೆಲ ತೊಂದರೆದಾಯಕ ಕ್ಷಣಗಳು ಇರುತ್ತವೆ. ಏಕೆಂದರೆ ಮಾನಸಿಕ ಪ್ರಯೋಗಗಳು, ಮಾನಸಿಕ ಆಲೋಚನೆಗಳು, ಸಂಗತಿಗಳು ದೇಹಕ್ಕೆ ಸಾಕಷ್ಟು ಸಹಾಯ ಮಾಡುತ್ತವೆ. ಆದರೆ ಇಂಥ ಸಂದರ್ಭಗಳಲ್ಲಿ ಅದು ತಪ್ಪಿ ಹೋಗುತ್ತವೆ. ಆ ರೀತಿಯ ಸುವಿಧಾ ಇರುವುದಿಲ್ಲ. ಉದಾಹರಣೆಗೆ, ನಿಮಗೊಂದು ಮಾನಸಿಕವಾಗಿ ತೀರ ವಿಶ್ವಸ್ಥ, ನಂಬಿಕೆಯ ಸಂಗತಿ ಇದೆ. ಅದು ನಿಮಗೆ ಬೇಕಾದಷ್ಟು ಸಹಾಯ ಮಾಡುತ್ತದೆ. ಎಂಥ ಸಂದರ್ಭಗಳಲ್ಲೂ ಅದು ದೃಢವಾಗಿ ನಿಲ್ಲಬಲ್ಲದು, ಅದು

ಹಿಂದೆ ಸರಿಯುವುದಿಲ್ಲ. ಆದರೆ ಅಂಥ ಸಹಾಯ ಈಗ ಇಲ್ಲ. ಈಗ ಇರುವುದು ಪ್ರಜ್ಞೆ ಮಾತ್ರ, ಕೇವಲ ಪ್ರಜ್ಞೆ ಅಷ್ಟೇ. ಈ ಪ್ರಜ್ಞೇ ನಗುತ್ತ ಹೇಳುತ್ತಾರೆ. ಎಂದಿಗೂ, ಗಲಿಬಲಿಗೊಳ್ಳುವುದಿಲ್ಲ, ತಪ್ಪು ಹೆಜ್ಜೆ ಇಡುವುದಿಲ್ಲ. ಪ್ರಜ್ಞೆಯು ಹುಚ್ಚಾಟ ಮಾಡುವುದಿಲ್ಲ. ಅದು ನಮಗೆ ಕಥೆ ಹೇಳುತ್ತ ಕೂರುವುದಿಲ್ಲ. ನಿಮಗೆ ಯಾವ ಸಮಯದಲ್ಲಿ ಸಹಾಯ ಮಾಡಬೇಕಾಗಿದೆಯೋ ಅದರಲ್ಲಿ ವಿಳಂಬ ಮಾಡುವುದಿಲ್ಲ. ಅದು ಹೀಗೇ (ಅವಶ್ಯವಾಗಿ ಇದ್ದೇ ಇರುವ ಸಂಕೇತ ಮಾಡುತ್ತಾರೆ) ಅತ್ಯಂತ ಸರಳವಾಗಿರುತ್ತದೆ. ತುಂಬ ಪ್ರಾಮಾಣಿಕವಾಗಿರುತ್ತದೆ. ನಿನಗದು ಚೆನ್ನಾಗಿ ಗೊತ್ತಾಗುತ್ತದೆ.

ಶರೀರಕ್ಕೆ ಎಲ್ಲ ಚೆನ್ನಾಗಿ ಗೊತ್ತಾಗುತ್ತದೆ, ಅದು ಸಂವೇದನೆಗಳನ್ನು ಅರ್ಥಮಾಡಿಕೊಳ್ಳುತ್ತದೆ. ಭೌತಿಕ ಶರೀರದ ಕಣಗಳು ಬೇಗನೇ ಸ್ಪಂದಿಸುವುದಿಲ್ಲ, ಸತ್ಯಕ್ಕೆ ಪ್ರತಿಕ್ರಿಯಿಸುವುದಿಲ್ಲ (ನಗುತ್ತ) ಅದರಿಂದೇನೂ ಅವುಗಳಿಗೆ ಲಾಭ ಇಲ್ಲ. ಅಂಥ ಸಂದರ್ಭಗಳಲ್ಲದು ತುಸು ಅನಾರೋಗ್ಯಕ್ಕೆ ತುತ್ತಾಗುತ್ತದೆ.

ಅದಕ್ಕೆ (ಶರೀರಕ್ಕೆ, ತನ್ನ ಪೆದ್ದುತನದ ಅರಿವಿದೆ, ಮೊದ ಮೊದಲು ಅದು ಹೀಗೆಯೇ ಹೇಳುತ್ತದೆ, “ಇದೆಲ್ಲ ನಿರುಪಯುಕ್ತ, ಇದು ಹೋಗಬೇಕು, ಬೇರೆ ಏನಾದರೂ ಉಪಯುಕ್ತವಾಗಿರುವುದು ಬೇಕು”) ಆಗ ಅಲ್ಲಿ ಯಾವಾಗಲೂ ಆ ದಿವ್ಯ ನಸು ನಗು ಇರುತ್ತದೆ, ಅದಾದ ಯಾವ ಗೋಜಲೂ ಇಲ್ಲ, ಅದು ಸುಮ್ಮನಿರಲು ಪ್ರಯತ್ನಿಸುತ್ತದೆ.

ಅದು ಕೆಲ ಸಲ ಪೆದ್ದುತನದ ಅಥವಾ ನಿರ್ಲಜ್ಜತನದ ಎಲ್ಲೆ ಮೀರಿ ಹೋಗುತ್ತದೆ. ಆಗ ನೀವೇ ಕೇಳುವಿರಿ “ಇದು ಹೀಗೇಕೆ? ಹೀಗಿರಲು ಏನು ಕಾರಣ? ಎಂದು” ಅದಕ್ಕೆ ಚೆನ್ನಾಗಿ ಗೊತ್ತು. ಇದೆಲ್ಲ ಹೀಗೇರೆದೆ ಎಂಬುದು ಚೆನ್ನಾಗಿ ಗೊತ್ತು. ಆದರೆ ಇವೆಲ್ಲ ತುಂಬ ವಿಶಾಲವಾಗಿ ಬೆಳೆದಿವೆ, ಸಾಮಾನ್ಯೀಕರಣಗೊಂಡಿವೆ.. ಶರೀರವು ತನ್ನ ವಿಶ್ವಾತ್ಮಕ ಭಾವದಲ್ಲಿ ಅಥವಾ ಸ್ತರದಲ್ಲಿ ಉಳಿಯಲು ಸಾಧ್ಯವಾಗದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 28, 1970**

## ಶ್ರೀ ಅರವಿಂದರ ಪ್ರಕಾಶ ವಲಯ

(ಸಾವಿತ್ರಿಯನ್ನು ತಾವು ಅನುವಾದ ಮಾಡಿದ ಬಿಳಿ ಹಾಳೆಗಳ ದಪ್ಪನಾದ ನೋಟ್‌ಬುಕ್‌ನಿಂದ ಕೆಲ ಸಾಲುಗಳನ್ನು ಆಯ್ದು ಹೇಳುತ್ತಾರೆ.)

ನನ್ನ ಲೇಖನಿಯ ಬಳಿಯಲ್ಲೇ ಶ್ರೀ ಅರವಿಂದರ ಪ್ರಕಾಶದ ವಲಯ ಇದೆ. ಅದು ಸದಾ ಹೊಳೆಯುತ್ತಿರುತ್ತದೆ. ನನ್ನ ಕೈಬರಹಕ್ಕಿಂತ ಅದೇ ಹೆಚ್ಚಾಗಿ ಕಾಣಿಸುತ್ತದೆ. ಅದು (ಎರಡು ಇಂಚಿಗಿಂತ) ಹೆಚ್ಚಿಲ್ಲ, ಅದು ಹೊಳೆಯುತ್ತದೆ, ಬಹು ಪ್ರಕಾಶಮಾನವಾಗಿ ಹೊಳೆಯುತ್ತದೆ. ತುಸು ನೀಲ ಬಣ್ಣದ ಬೆಳಕು ಇಲ್ಲಿರುತ್ತದೆ. ನಾಣು ಮಾತನಾಡುವಾಗ, ಈ ಸಂಗತಿಗಳ ಕುರಿತು ಹೇಳುವಾಗ ಎರಡು ಬೆಳಕಿನ ವಲಯಗಳಿರುತ್ತವೆ, ಏಕೆ ಎಂಬುದು ನನಗೆ ಗೊತ್ತಿಲ್ಲ. ಒಂದಲ್ಲ, ಎರಡು ಇರುತ್ತವೆ, ಅವು ತುಸು ದೊಡ್ಡದಿರುತ್ತವೆ, (ಸುಮಾರು ನಾಲ್ಕು ಇಂಚು) ಒಂದರ ಮೇಲೆ ಇನ್ನೊಂದು ಹೀಗೆ. ನಾನು ನನ್ನ ಅನುಭವದ ಬಗ್ಗೆ ಹೇಳುತ್ತಿರುವಾಗ, ಅಥವಾ ಯಾವುದೋ ಪ್ರಶ್ನೆಗೆ ಉತ್ತರಿಸುತ್ತಿದ್ದಾಗ, ಅವು ಎರಡೇ ಇರುತ್ತವೆ, ತುಸು ದೊಡ್ಡದಿರುತ್ತವೆ.

ನಾನು ಏಕಾಗ್ರತೆ ಸಾಧಿಸಿದಾಗ, ಪರಮಾತ್ಮನನ್ನು ಪ್ರಾರ್ಥಿಸುತ್ತಿರುವಾಗ ನನ್ನ ಭುಜದ ಹತ್ತಿರ (ಭುಜ ಮತ್ತು ತಲೆಯ ಮಧ್ಯ ಭಾಗವನ್ನು ಸೂಚಿಸುತ್ತ) ಬಹು ಪ್ರಕಾಶಮಾನವಾದ ಸ್ವರ್ಣಿಮ ಪ್ರಕಾಶವಿರುತ್ತದೆ. ಅದೂ ಸಹ ಹೊಳೆಯುತ್ತಿರುತ್ತದೆ. ಬೆಳಗುತ್ತಿರುತ್ತದೆ, ಅತಿ ಪ್ರಕಾಶಮಾನವಾಗಿರತ್ತದೆ. ಆ ಬೆಳಕು ಹಿಂದೆ ಸರಿದಾಗ ನನ್ನ ಏಕಾಗ್ರತೆಯೂ ಭಂಗವಾಗುತ್ತದೆ. ಸದ್ಯ, ಇದೀಗ, ಇದು ತುಂಬ ಆಶ್ಚರ್ಯಕರ, ತುಂಬ ಚಿಕ್ಕದಿತ್ತು. ನನ್ನ ಲೇಖನಿಯ ಜೊತೆಜೊತೆ ಚಲಿಸುತ್ತಿತ್ತು. ಈಗ ಅದಿಲ್ಲ, ಅದು ಸುಪ್ತವಾಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 19, 1966**

(ಶ್ರೀಮಾತೆಯವರು ಸಾವಿತ್ರಿಯ ಅನುವಾದ ಮಾಡಲು ಅನುವಾಗುತ್ತಾರೆ,
ಥಟ್ಟನೇ ಸುಮ್ಮನಾಗಿ ಬಿಡುತ್ತಾರೆ, ತಮ್ಮ ಕಣ್ಣಿಂದ ಏನನ್ನೋ
ನೋಡುತ್ತಿರುವಂತೆ, ಅದರ ಚಲನೆಯನ್ನು ವೀಕ್ಷಿಸುತ್ತಿರುವಂತೆ ತೋರುತ್ತದೆ)

ಅದು ದೊಡ್ಡದು, ಸೂರ್ಯನಷ್ಟು ದೊಡ್ಡದು. ಶ್ರೀ ಅರವಿಂದರ ಬೆಳಕು ಅದು. ನಾನು ಬರೆಯುತ್ತಿದ್ದಾಗ, ನನ್ನ ಹಾಗೂ ನೋಟಬುಕ್ಕಿನ ಮಧ್ಯೆ ಲೇಖನಿಯ ಜೊತೆಜೊತೆ ಅದೂ ಚಲಿಸುತ್ತಿತ್ತು. ಅದು ಇಷ್ಟು ದೊಡ್ಡದು (ಕಿತ್ತಳೆ ಹಣ್ಣಿನಷ್ಟು) ಅದು ಶ್ರೀ ಅರವಿಂದರ ಬೆಳಕು, ವಿಶಿಷ್ಟ ನೀಲ ಬಣ್ಣದ ಬೆಳಕು, ಹೊಳೆಯುವಂಥದು, ಈ ನೋಟಬುಕ್ಕಿನಲ್ಲಿ ಬರೆಯುವಾಗಲೆಲ್ಲ ಅದು

ಚಲಿಸುತ್ತಲಿರುತ್ತದೆ. (ನಗುತ್ತ) ಅಂತೆಯೇ ನಾನು ನೋಡಲಾಗುತ್ತಿಲ್ಲ ಅದು ಲೇಖನಿಯ ಜೊತೆ ಚಲಿಸುತ್ತಿರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 6, 1965**

## ಭೌತಿಕದಲ್ಲಿ ಯೋಗ

ನಾನಿನ್ನು ಫ್ರಾನ್ಸಿನಲ್ಲಿರುವಾಗಲೇ ಶ್ರೀ ಅರವಿಂದರು ನನಗೆ ಮನದಟ್ಟು ಮಾಡಿಕೊಟ್ಟಿದ್ದರು, ಭೌತಿಕದಲ್ಲಿನ ಯೋಗ ಸಾಧನೆಯು ತುಂಬ ಕಠಿಣವೆಂದು. ಅದು ಎಲ್ಲಕ್ಕಿಂತ ನಿಜವಾಗಿ ತುಂಬ ಕಠಿಣ. ಬೇರೆ ಬೇರೆ ಯೋಗ ಸಾಧನೆಗಳೇನಿವೆಯೋ ಅವೆಲ್ಲ ಸಿದ್ಧವಾದವುಗಳು; ದಾರಿ, ಪ್ರಕ್ರಿಯೆ ಎಲ್ಲ ಗೊತ್ತಿದೆ. ನೀವು ಹೇಗೆ ಹೋಗಬೇಕು, ಹೇಗೆ ಮುಂದುವರಿಯಬೇಕು? ಇಂಥಿಂಥ ನಿರ್ದಿಷ್ಟ ಸಂದರ್ಭಗಳಲ್ಲಿ ಏನು ಮಾಡಬೇಕು? ಎಲ್ಲ ಗೊತ್ತಿದೆ. ಆದರೆ ಭೌತಿಕದಲ್ಲಿ ಯೋಗ.. ಇದು ಹಿಂದೆ ಯಾರೂ ಮಾಡದಿರುವಂಥದು, ಎಲ್ಲವನ್ನೂ ಹೊಸದಾಗಿಯೇ ಮಾಡಬೇಕು, ಸಂಶೋಧನೆ ಮಾಡಿಯೇ ಮಾಡಬೇಕು.

ಈಗಾದರೋ ಎಲ್ಲ ಸರಿಯಾಗಿದೆ, ವಿಶೇಷವಾಗಿ ಶ್ರೀ ಅರವಿಂದರು ಸೂಕ್ಷ್ಮ ಭೌತಿಕದಲ್ಲಿ, ವ್ಯವಹಾರಿಕವಾಗಿ ಸೂಕ್ಷ್ಮ ಭೌತಿಕದಲ್ಲಿ ಸ್ಥಾಪಿತರಾದ ಮೇಲೆ ಎಲ್ಲವೂ ಸುಲಭವಾಗಿದೆ. ಆದರೂ ಅನೇಕ ಪ್ರಶ್ನೆಗಳು ಉಳಿದೇ ಇವೆ. ಏಕೆಂದರೆ ಭೌತಿಕ ಶರೀರವು ವಿಷಯ ಏನ್ನೇನೋ ತಿಳಿದುಕೊಳ್ಳುತ್ತದೆ, ಆದರೆ ಬೇಗನೇ ಮರೆತುಬಿಡುತ್ತದೆ. ಶತ್ರುಗಳ ವಿರೋಧ ಇತ್ಯಾದಿ ಏನಿಲ್ಲ; ಏಕೆಂದರೆ ಅದು ಹೊರಗಿನಿಂದ ಬರುವಂಥದು, ನಾನನ್ನು ಗುರುತಿಸಬಲ್ಲೆ, ಅದು ಬಾಹ್ಯ ವಿರೋಧಿ ಶಕ್ತಿ, ಆಗ ಏನು ಅವಶ್ಯವಿದೆಯೋ ಅದನ್ನು ನಾವು ಮಾಡಿಬಿಡುತ್ತೇವೆ. ಆದರೆ ತೊಂದರೆ ಎಲ್ಲಿದೆ ಅಂದರೆ, ಸಾಮಾನ್ಯ ದೈನಂದಿನ ಜೀವನದ ಸಣ್ಣ ಸಣ್ಣ ವಿಷಯಗಳಲ್ಲಿದೆ – ಈ ಭೌತಿಕ ಶರೀರ ಥಟ್ಟನೇ ಎಲ್ಲವನ್ನೂ ತಿಳಿದುಕೊಳ್ಳುವುದಿಲ್ಲ, ತಿಳಿದಿರುವುದನ್ನು ಕೂಡ ಬೇಗ ಮರೆತು ಬಿಡುತ್ತದೆ.

ಆದರೂ ಸಹ, ಇದು ಸಂತೋಷಕರವಾಗೇ ಇದೆ. ಕೆಲಸ ಮಾಡುವುದು ಅದಕ್ಕೂ ಪ್ರಿಯವೇ. ಅದು ಜೀವದಿಂದಿರುವುದು ಕೂಡ ಕೆಲಸ ಮಾಡಲೆಂದೇ – ಪರಿವರ್ತನೆ ಹೊಂದಲೆಂದು, ರೂಪಾಂತರ ಹೊಂದಲೆಂದು ಅದು ಪ್ರಯತ್ನ ಮಾಡುತ್ತದೆ. ಮತ್ತು ಅದು ಒಳ್ಳೆಯ ಉಪಕರಣ ಕೂಡ ಹೌದು, ಅದರಲ್ಲಿ

ಒಳ್ಳೇಯ ಮನಸ್ಸು, ಸಂಕಲ್ಪ ಇದೆ. ಒಂದು ಸಲ ಅದು ಮಗುವಿನ ತರಹ ಅಲವತ್ತುಕೊಂಡಿತ್ತು. "ಪ್ರಭು, ನನಗೊಂದಿಷ್ಟು ಕಾಲಾವಕಾಶ ಕೊಡು, ಪರಿವರ್ತನೆ ಹೊಂದಲು ಸಮಯ ಕೊಡಿ.." ಅದಕ್ಕೆ ಕೆಲಸ ಮಾಡುವುದರ ಬಗ್ಗೆ ತೀವ್ರ ಉತ್ಸಾಹ, ಆದರೆ ಸಮಯ ಬೇಕು. ಅಷ್ಟೇ. ಅದು ಯಾವಾಗಲೂ ಪರಮಾತ್ಮನಿಗಾಗಿ ವಿಜಯವನ್ನೇ ಬಯಸುತ್ತದೆ, ಗೆಲ್ಲಲೆಂದೇ ಬದುಕಲು ಇಚ್ಛಿಸುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 28, 1960**

ಶ್ರೀ ಅರವಿಂದರು ತಮ್ಮ ಭೌತಿಕ ದೇಹ ಬಿಟ್ಟುಹೋಗುವಾಗ, ನಮ್ಮನ್ನು ಕೈ ಬಿಡುವುದಿಲ್ಲವೆಂದು ಗಟ್ಟಿಯಾಗಿ ವಚನ ನೀಡಿದರು. ಮತ್ತು ಸತ್ಯವೇನೆಂದರೆ, ಈ 21 ವರ್ಷಗಳ ಕಾಲಾವಧಿಯಲ್ಲಿ ಅವರು ಒಂದೇ ಒಂದು ದಿನ ಕೂಡ ನಮ್ಮಿಂದ ದೂರ ಹೋಗಿಲ್ಲ. ನಮ್ಮ ಜೊತೆಗೇ ಇದ್ದಾರೆ. ಯಾರೆಲ್ಲ ಉನ್ಮುಖವಾಗಿದ್ದಾರೋ ಅವರಿಗೆ, ಯಾರು ಅವರ ಪ್ರಭಾವವನ್ನು ಸ್ವೀಕರಿಸಲು ಸಿದ್ಧರಾಗಿದ್ದಾರೋ ಅವರಿಗೆ ಸದಾ ಸಹಾಯ ಮಾಡುತ್ತಲಿದ್ದಾರೆ.

ಈ ಶತಮಾನೋತ್ಸವದ ಸುದಿನಗಳಲ್ಲಂತೂ ಅವರ ಸಹಾಯ ಎಷ್ಟೋ ಪಟ್ಟು ಹೆಚ್ಚಾಗಿದೆ. ನಾವು ಅದನ್ನು ಹೆಚ್ಚು ಹೆಚ್ಚಾಗಿ ಪಡೆಯಲು ಸಜ್ಜಾಗಬೇಕು, ಹಾಗೂ ಅದನ್ನು ಹೇಗೆ ಸ್ವೀಕರಿಸಬೇಕೆಂಬುದನ್ನು ಸ್ಪಷ್ಟವಾಗಿ ಅರಿಯಬೇಕು. ಯಾರು ನಾಯಕನ ಆತ್ಮ ಸತ್ತೆ ಹೊಂದಿದ್ದಾರೋ ಭವಿಷ್ಯ ಇರುವುದೇ ಅವರಿಗಾಗಿ. ನಮ್ಮ ವಿಶ್ವಾಸ ದೃಢವಾಗಿದ್ದಷ್ಟು ಬಲವಂತವಾಗಿರುವಷ್ಟು ಪ್ರಮಾಣದಲ್ಲಿ ನಮಗೆ ಸಹಾಯ ನೀಡುವುದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 2, 1972**

ಕೆಲ ದಿನಗಳ ಹಿಂದೆ ಒಂದು ರಾತ್ರಿ ನಾನವರಿಗೆ ಹೇಳಿದೆ [ಸಾಮಾನ್ಯವಾಗಿ ನಾನು ಪ್ರತಿ ದಿನ ರಾತ್ರಿ ಅವರನ್ನು ಭೇಟಿಯಾಗುತ್ತೇನೆ, ಆದರೆ ಕೆಲ ದಿನಗಳ ಹಿಂದೆ ನನಗವರನ್ನು ಸಂಧಿಸುವ ಅವಕಾಶ ಸಿಕ್ಕಿರಲಿಲ್ಲ. ಆ ರಾತ್ರಿ ನಾನು ಅವರನ್ನು ಭೇಟಿಯಾದೆ.. ಅವರು ಯಾವಾಗಲೂ ಎಲ್ಲೆಡೆಯೂ ಇರುತ್ತಾರೆ (ತಮ್ಮನ್ನು ಸುತ್ತವರಿದಿರುವಂತೆ ಸನ್ನೆ ಮಾಡುತ್ತಾರೆ), ಆದರೆ ರಾತ್ರಿ ಸೂಕ್ಷ್ಮ ಭೌತಿಕ ಸ್ತರದಲ್ಲಿ ಅವರನ್ನು ಸಾಮಾನ್ಯ ವ್ಯಕ್ತಿಯಂತೆ ವಸ್ತುನಿಷ್ಠವಾಗಿಯೇ ನೋಡುತ್ತೇನೆ, ಅವರನ್ನು

ಪ್ರತ್ಯಕ್ಷ ಭೇಟಿಯಾದಂತೆಯೇ ಅನುಭವವಾಗುತ್ತದೆ] ನಾನವರಿಗೆ ಹೇಳಿದೆ "ನಾನು ಈ ಕೆಲ ದಿನಗಳಿಂದ ತಮ್ಮನ್ನು ಭೆಟಿಯಾಗಲು ಸಾಧ್ಯವಾಗಲಿಲ್ಲ. ಅವರು ಒಮ್ಮೆಲೇ ಗಂಭೀರರಾದರು. ಆದರೆ ತುಸು ವ್ಯಂಗ್ಯವೆನ್ನುವ ರೀತಿಯಲ್ಲಿ (ನಗುತ್ತ) "ಒಹ್ ನಾನಿತ್ತ ತುಂಬ ಬಿಜಿಯಾಗಿದ್ದೇನೆ. ಮರುದಿನವೇ ನನಗೆ ತಿಳಿದು ಬಂದದ್ದೇನೆಂದರೆ ಶ್ರೀ ಅರವಿಂದರ ಜೀವನಾಧಾರಿತ ಚಿತ್ರ ಮಾಡಲು ಕೆಲವರು ಆರಂಭ ಮಾಡಿದ್ದರು. (ಅದು ಶ್ರೀ ಅರವಿಂದರ ರಾಜಕೀಯ ಜೀವನದ ಮೇಲಿನ ಬಂಗಾಲಿ ಭಾಷೆಯ ಸಾಕ್ಷ್ಯಚಿತ್ರ) ನನಗಾಗ ಅರ್ಥವಾಯಿತು, ಶ್ರೀ ಅರವಿಂದರು ಬಹುಶ; ಅವರಿಗೆ ಸರಿಯಾದ ಸೂಚನೆಗಳನ್ನು ಕಳಿಸುವಲ್ಲಿ ಬಿಜಿಯಾಗಿದ್ದರೇನೋ! ಆದರೆ ಸರಿಯಾದ ತುಂಬ ಹಾಸ್ಯಮಯ! ನೇರವಾದ ಗಂಭೀರ ಭಾವದಲ್ಲಿನ ಅತಿ ರಸಮಯ ಹಾಸ್ಯ ಚಟಾಕಿ!"

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 25, 1967**

### ಅಸಾಧಾರಣವಾದ ಕೆಲಸ

ಅತಿಮಾನಸದ ಶಕ್ತಿಯ ಮೂಲಕ ಶ್ರೀ ಅರವಿಂದರು ತಮ್ಮ ಶರೀರವನ್ನು ಎಷ್ಟರ ಮಟ್ಟಿಗೆ ರೂಪಾಂತರಗೊಳಿಸಿದ್ದಾರೆ, ರೂಪಾಂತರಗೊಳಿಸಲು ಶಕ್ತರಾಗಿದ್ದಾರೆ ಎಂದು ಅನೇಕ ಜನ, ಅನೇಕ ಸಲ ನನ್ನನ್ನು ಪ್ರಶ್ನಿಸಿದ್ದುಂಟು.

ಹೌದು, ಮಾತಾಜಿ, ನಮಗದು ನಿಜವಾಗಿ ಆಶ್ಚರ್ಯಕರ. ನಮಗದರ ಬಗ್ಗೆ ಬಹಳ ಗೊತ್ತಿಲ್ಲ.

ಆದರೆ ನಿಮ್ಮ ಈ ಸಣ್ಣ ಅಥವಾ ಸಂಕುಚಿತ ಮನಸ್ಸಿನ ಮೂಲಕ ಅದನ್ನು ಹೇಗೆ ತಿಳಿದಕೊಳ್ಳಲು ಸಾಧ್ಯ? ಯಾರಿಗೂ ಅದನ್ನು ಗ್ರಹಿಸುವ ಶಕ್ತಿ ಇಲ್ಲ. ಸ್ವಲ್ಪಾದರೂ ಅನುಭವವಾಗದ ಹೊರತು ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ನಾನು ಅದರ ಬಗ್ಗೆ ಸ್ವಲ್ಪ ತಿಳಿಸಿ ಹೇಳಬಲ್ಲೆ ತಮ್ಮ ಶರೀರದಲ್ಲಿ ಅವರು ಊಹೆಗೆ ನಿಲುಕದಷ್ಟು ಅತಿಮಾನಸ ಶಕ್ತಿಯನ್ನು ಸಂಗ್ರಹಿಸಿಟ್ಟುಕೊಂಡಿದ್ದರು. ಎಂಥ ಅಸಾಧಾರಣ ಕೆಲಸ..

ನಿಮಗೆ ನೆನಪಿರಬಹುದು, ಅವರು ತಮ್ಮ ದೇಹ ತ್ಯಾಗ ಮಾಡಿದಾಗಲು ಅವರ ಭೌತಿಕ ಶರೀರ ಸುಮಾರು ಐದು ದಿನಗಳವರೆಗೆ ಅತಿ ಪ್ರಕಾಶಮಾನವಾಗಿ, ವೈಭವ ಪೂರ್ಣವಾಗಿತ್ತು. ತಮ್ಮೆಲ್ಲ ಅತಿಮಾನಸ ಶಕ್ತಿಯನ್ನು ನನಗೆ ಧಾರೆ ಎರೆದ ಮೇಲೂ ಅವರ ಶರೀರವು ಅತ್ಯಂತ ಪ್ರಕಾಶಮಾನವಾಗಿಯೇ ಇತ್ತು. ಎಲ್ಲವನ್ನೂ

ನನಗೆ ಕೊಟ್ಟರು, ತಮ್ಮ ಶರೀರ ತ್ಯಾಗದ ಮೊದಲು ಎಲ್ಲವನ್ನೂ ನನಗೆ ಕೊಟ್ಟು ಬಿಟ್ಟರು. ಅಷ್ಟಾಗಿಯೂ ಅವರ ಶರೀರದಿಂದ ಅತಿಮಾನಸ ಪ್ರಭೆ ಹೊರಸೂಸುತ್ತಲೇ ಇತ್ತು.. ಅವರು ಶರೀರ ತ್ಯಾಗ ಮಾಡುವ ಕೆಲ ಕ್ಷಣಗಳ ಮೊದಲು, ನಾನು ಅವರ ಮಂಚದ ಸಮೀಪ ನಿಂತುಕೊಂಡಿದ್ದೆ. ಅವರ ಶರೀರದಿಂದ ಹೊರಟ ಅತಿಮಾನಸ ಪ್ರಕಾಶವು ನನ್ನಲ್ಲಿ ಪ್ರವೇಶ ಮಾಡುವುದನ್ನು ನಾನು ಪ್ರತ್ಯಕ್ಷ ನೋಡಿ ಅನುಭವಿಸಿದೆ. ಮಾನಸಿಕವಾಗಿ ಹೇಳಬೇಕೆಂದರೆ ಸ್ವಲ್ಪ ವಿರೋಧದ ಸಂಘರ್ಷ ಎದುರಿಸಿ, ಕಣಕಣಗಳಲ್ಲಿ ಪ್ರವೇಶಿಸಿ, ಪಸರಿಸಿತು. ಅದು ಹೀಗೆ ಪ್ರವೇಶ ಮಾಡುತ್ತಿತ್ತು (ಕೈ ಸನ್ನೆಯ ಮೂಲಕ).

ಮೊದಲ ಬಾರಿಗೆ ನನಗರ್ಥವಾಯಿತು, ದೈವೀ ಕೃಪೆಯಲ್ಲಿ ಯಾರೇ ಆಗಲಿ ಹೇಗೆ ವಿಶ್ವಾಸ, ಶ್ರದ್ಧೆಗಳನ್ನು ಹೊಂದಿರಬೇಕು, ನಿಶ್ಚಲವಾದ ನಂಬಿಕೆ, ಯಾವುದೇ ರೀತಿಯ ತಿಲ ಮಾತ್ರವೂ ನಂಬಿಕೆ, ಅನುಮಾನಗಳಿಲ್ಲದ, ಆತಂಕವೇ ಇರದ ನಂಬಿಕೆ, ಶ್ರೀ ಅರವಿಂದರು ಏನೆಲ್ಲ ಸಾಧಿಸಿದ್ದಾರೆಯೋ, ಸಿದ್ಧಿಸಿಕೊಂಡಿದ್ದಾರೆಯೋ ಅದರ ಬಗ್ಗೆ ಅಲ್ಪ ಮಾತ್ರವೂ ಅಪನಂಬಿಕೆ ಇಲ್ಲ ಅನನ್ಯ ವಿಶ್ವಾಸ ಹೇಗಿರಬೇಕು ಎಂಬುದು ನನಗೆ ಸ್ಪಷ್ಟವಾಗಿ ತಿಳಿಯಿತು. ತಮ್ಮೊಳಗೆ ಅವರು ಸಿದ್ಧಿಸಿಕೊಂಡಿದ್ದ ಪ್ರಜ್ಞೆ ಅಥವಾ ಚೈತನ್ಯ ಅಸಾಧಾರಣ ಅಸಾಮಾನ್ಯ! ಅದು ಅನನ್ಯ, ಇನ್ನಾರಿಂದಲೂ ಸಾಧಿಸಲಾಗದು ಅನನ್ಯ ಸಿದ್ಧಿ. ಅವರಿಗೆ ವಿವಿಧ ಬಗೆಯ ಅನೇಕ, ಅಜ್ಞಾತ ಅಂದರೆ ಮತ್ತನ್ನಾರಿಗೂ ಅರಿಯದ ಸಾಕ್ಷಾತ್ಕಾರಗಳು ಆಗಿದ್ದವು. ಅವರ ನಿರ್ಧಾರವನ್ನು ನೋಡಿ, ಅಸಾಧಾರಣ ಹಾಗೂ ಏಕೈಕ ನಿರ್ಧಾರ! ಅತಿಮಾನಸ ಲೋಕವನ್ನು ಬಹು ವೇಗವಾಗಿ ಇಳಿಸಿ ತಂದು ಇಲ್ಲಿ ಸ್ಥಾಪಿಸಿಬೇಕೆನ್ನುವ ತಮ್ಮ ಕಾರ್ಯಕ್ಕೆ ಬದ್ಧರಾಗಿ ತಮ್ಮದೇ ದೇಹವನ್ನು ತ್ಯಾಗ ಮಾಡುವ ನಿರ್ಧಾರ! ಹಾಗೆ ಮಾಡುವುದರ ಮೂಲಕವೇ ಸೂಕ್ಷ್ಮ ಭೌತಿಕದಲ್ಲಿ ಅತಿಮಾನಸದ ಅವತರಣವನ್ನು ತೀವ್ರವಾಗಿ ಸಾಧಿಸಲು ಸಾಧ್ಯವೆಂದರಿತೇ ತಮ್ಮ ದೇಹವನ್ನು ತ್ಯಾಗ ಮಾಡಿದರು. ತಮ್ಮ ಶರೀರವನ್ನು ತಮ್ಮ ನಿರ್ಧಾರದ ಬೆನ್ನಲ್ಲೇ ತ್ಯಾಗ ಮಾಡಿ, ಸೂಕ್ಷ್ಮ ಭೌತಿಕದಲ್ಲಿ ಅತಿಮಾನಸವನ್ನು ಇಳಿಸಿ ತಂದು ಪ್ರತಿಷ್ಠಾಪಿಸಿ ಬಿಟ್ಟರು. ಅದನ್ನು ಬಿಟ್ಟುಬಿಟ್ಟರು. ಏಕೆಂದರೆ ಅದನ್ನೂ ತುಸು ಪ್ರತಿಭಟನೆ ತೋರಿಸುತ್ತಿತ್ತು. ಅದನ್ನು ಅವರು ಗೆದ್ದುಕೊಂಡುಬಿಟ್ಟರು. ಈ ಜಗತ್ತು ಏನು ಭಾವಿಸಿದೆಯೋ, ಯಾವ ದೃಷ್ಟಿಕೋನದಿಂದ ನೋಡುತ್ತದೆಯೋ, ಅದೆಲ್ಲ ನಿಜವಾದ ಕಾರಣ; ತಮ್ಮ ಶರೀರವನ್ನು ತ್ಯಾಗ ಮಾಡಿದ್ದು ತಮ್ಮ ಕೆಲಸದ ಮೇಲಿದ್ದ ಅವರಿಗಿದ್ದ ಅನನ್ಯ

ಶ್ರದ್ಧೆಯಿಂದಾಗಿ, ಅತಿಮಾನಸದ ಅವತರಣಕ್ಕಾಗಿ ಅವರೊಂದು ಸಮರ್ಥ, ಯೋಗ್ಯ ವಾತಾವರಣವನ್ನು ಆಧಾರವನ್ನು ನಿರ್ಮಿಸ–ಬೇಕಾಗಿತ್ತು, ಭೂಮಿಯ ಮೇಲೆ ದಿವ್ಯ ಸತ್ಯವನ್ನು ಇಳಿಸಿ ತಂದು, ಸಾಮಾನ್ಯ ಭೌತಿಕ ಜೀವನವನ್ನು ಅತಿಮಾನಸ ಜೀವನವನ್ನಾಗಿ ಪರಿವರ್ತಿಸಿಬೇಕೆಂದು ತಮ್ಮ ಭೌತಿಕ ಶರೀರವನ್ನು ತ್ಯಾಗ ಮಾಡಿ ವಿಜಯವನ್ನು ಸಾಧಿಸಿದರು. ಮೇಲಿನಿಂದ ಒಂದೇ ಶಬ್ದದ ಆದೇಶ, ಅಷ್ಟು ಸಾಕು, ನಿರ್ಧಾರ ಮಾಡಿ ಆಯಿತು. ಈ ಭೂಮಿಯ ಇತಿಹಾಸದಲ್ಲಿ ಅವರು ಮಾಡಿದ ತ್ಯಾಗ ಅನುಪಮ, ಮತ್ತಿನ್ನಾರು ಹಿಂದೆ ಮಾಡಿರದ ಅನುಪಮ ತ್ಯಾಗ ಹಾಗೂ ವಿಜಯ ಅದು.

ಅಸಾಧಾರಣ, ಅಸಾಮಾನ್ಯ! ಎಂಥ ಮಹಾಶಕ್ತಿ, ದೈವೀ ಪ್ರಜ್ಞೆ, ದೈವೀ ಜ್ಞಾನ, ಎಂಥ ಅನನ್ಯ ದಿವ್ಯ ಕರುಣೆ, ಎಂಥ ಅನನ್ಯ ದೈವೀ ಬೆಳಕು ಅವರಲ್ಲಿತ್ತು..! ಶಬ್ದಾತೀತ.

ಅವರು ನನಗೆ ಆದೇಶ ನೀಡಿದರು. "ನೀನು ಪೃಥ್ವಿಯ ರೂಪಾಂತರಣದ ನನ್ನ ಕಾರ್ಯವನ್ನು ಮುಂದುವರಿಸಬೇಕು, ಮಾಡಿ ಮುಗಿಸಬೇಕು. ನನ್ನ ಸಹಾಯ ಸದಾ ಇರುತ್ತದೆ." (ಶ್ರೀಮಾತೆ ಇಂಗ್ಲೀಷನಲ್ಲಿ ಹೇಳುತ್ತಾರೆ) ಅಂತೆಯೇ ನಾನು ಒಂದು ಕ್ಷಣ ಕೂಡ ವಿಚಾರ ಮಾಡಲಿಲ್ಲ. ಏನು ಮಾಡಬೇಕು! ಹೇಗೆ ಮಾಡಬೇಕು? ಏನೂ ವಿಚಾರಲಿಲ್ಲ. ನೇರವಾಗಿ ಪೂರ್ಣ ವಿಶ್ವಾಸದಿಂದ ಕೆಲಸ ಆರಂಭಿಸಿಬಿಟ್ಟೆ ಆ ಕಾರ್ಯದಲ್ಲಿ ತೊಡಗಿಕೊಂಡುಬಿಟ್ಟೆ. ಜೀವನ ಪೂರ್ತಿ ಅತಿ ಪ್ರಯಾಸದಿಂದ ರೂಪಾಂತರಣದ ಕಾರ್ಯದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ಆ ಕೆಲಸವನ್ನೂ ನನಗೆ ಒಪ್ಪಿಸಿ, ಸಂಪೂರ್ಣವಾಗಿ ಮಾಡಿ ಮುಗಿಸಲೇಬೇಕು, ಅಲ್ಲಿಯವರೆಗೆ ವಿಶ್ರಾಂತಿ ತೆಗೆದುಕೊಳ್ಳಕೂಡದೆಂದು ನನಗೆ ಆದೇಶ ನೀಡಿದರು. ನಾನು ಪ್ರಶ್ನೆ ಮಾಡುವ ಪ್ರಮೇಯವೇ ಇಲ್ಲ. ಅವರು ಹೇಳಿದ್ದನ್ನು ನಾನು ಮಾಡಲೇಬೇಕು, ಮಾಡಿ ಮುಗಿಸಲೇಬೇಕು. ಮತ್ತು ಅವರಿಲ್ಲದೇ ನಾನೇನೂ ಮಾಡಲಾರೆ. ಅಂತೆಯೇ ಪ್ರತಿ ಹೆಜ್ಜೆಯಲ್ಲೂ ನನ್ನ ಕೆಲಸಕ್ಕೆ ಅವರ ಸಹಾಯ ಇದ್ದೇ ಇದೆ. ನನಗೆ ಮಾರ್ಗದರ್ಶನ ನೀಡುತ್ತಾರೆ, ಶಕ್ತಿ ನೀಡಿ ಮುಂದೆ ಕರೆದೊಯ್ಯುತ್ತಾರೆ, ನಾನು ಅನುಮಾನಿಸಿದರೆ ನನಗೆ ಸ್ಪಷ್ಟತೆ ನೀಡಿ, ಬೆಳಕು ನೀಡಿ ಮುಂದೆ ಕರೆದೊಯ್ಯುತ್ತಾರೆ. ನಾವಿಬ್ಬರೂ ಸೇರಿ ಎಂಥ ಅಸಾಮಾನ್ಯ ಕೆಲಸ ಮಾಡಿದ್ದೇವೆ!

ಏನನ್ನೂ ಮಾಡಬೇಕೆಂದು ಆಲೋಚಿಸಲಾಗಿತ್ತೋ, ಯಾವ ಭರವಸೆ ನೀಡಲಾಗಿತ್ತೋ ಅದೀಗ ಪೂರ್ತಿಯಾಗಿದೆ, ಸಂಪೂರ್ಣ ಸಿದ್ಧಿಸಿದೆ.

ಶರೀರದ ಪರಿವರ್ತನೆ ಅನ್ನುವುದು ಈಗ ಮೃಗಜಲದಂಥ ನಿರಾರ್ಥಕ ಕೆಲಸವಲ್ಲ.. ಅದೀಗ ವಾಸ್ತವಿಕತೆ, ಅದರ ಕೆಲಸ ಆರಂಭವಾಗಿದೆ, ಅದು ಬೆಳೆಯುತ್ತದೆ, ಭವ್ಯ ಬೆಳಕಿನ ಭವಿಷ್ಯದತ್ತ ಅತಿ ವೇಗವಾಗಿ ಬೆಳೆಯುತ್ತಲಿದೆ. ಈ ಶರೀರ ಹೊಸ ಬೆಳಕಿಗೆ ತುಂಬ ಅದ್ಭುತವಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ. ಭೌತಿಕ ಶರೀರಕ್ಕೆ ತಾನು ದೈವೀ ವಿಶ್ವಾಸವನ್ನೇ ಮಿಡಿಯುತ್ತಿದೆ ಎಂಬ ಅರಿವಾಗುತ್ತಲಿದೆ. ನನಗೆ ಸಂದೇಹವಿಲ್ಲ. ಯಾವುದೂ ಅಸಾಧ್ಯವಲ್ಲ ಎಂಬ ಮನವರಿಕೆ ಆಗಿದೆ. ಅದರ (ಭೌತಿಕ) ಸಾಮರ್ಥ್ಯ ಅಪಾರವಾಗಿ, ಅನೂಹ್ಯವಾದ ರೀತಿ ಅಧಿಕವಾಗಿದೆ, ಅದರ ಶಕ್ತಿ ನಿಸ್ಸೀಮವಾಗಿ ಬೆಳೆದಿದೆ. ಭೌತಿಕವೀಗ ಬೃಹತ್ತಾಗಿ ಮಾರ್ಪಾಡಾಗುತ್ತಿದೆ, ವಿಶ್ವದಂತೆ ವೇಗವಾಗಿ ಹಿಗ್ಗುತ್ತದೆ, ಅದೀಗಾಗಲೇ ಪರಿವರ್ತನೆ ಹೊಂದುತ್ತಲಿದೆ, ಕಣಕಣದಲ್ಲಿ ಅದರ ಅನುಭವ ಆಗುತ್ತಿದೆ. ಮಾನವತೆಗೆ ಶಾಶ್ವತ ಸೌಂದರ್ಯದ ಬಗ್ಗೆ ಯಾವ ಪರಿಕಲ್ಪನೆ ಇದೆಯೋ ಅದೀಗ ಶಾಶ್ವತವಾಗಿ ಸಿದ್ಧಿಸಲಿದೆ.

ಮಾನವನ ಕಲ್ಪನೆಗಿಂತ ಅದೆಲ್ಲ ತುಂಬ ಸುಂದರವಾಗಿದೆ, ಅದರ ಬಗ್ಗೆ ಮಾನವನಿಗೆ ಅಂದಾಜಿಲ್ಲ. ಅದಕ್ಕೆ ಕಾಲದಲ್ಲಿ ಲಯವಾಗುವ ಪ್ರಶ್ನೆಯೇ ಇಲ್ಲ..

ನನ್ನ ಶರೀರ ಈಗ ಪ್ರಕಾಶಮಾನವಾಗಿದೆ, ಪಾರದರ್ಶಕವಾಗಿದೆ, ನಮನಶೀಲ–ವಾಗಿದೆ, ಅವಶ್ಯಕತೆ ಬಿದ್ದರೆ ಯಾವ ಆಕಾರ ತಾಳಲೂ ಸಿದ್ಧವಾಗಿದೆ. ಅದರ ಪ್ರಜ್ಞೆಯ ಗುಣಮಟ್ಟ ಕೂಡ ಬದಲಾಗಿದೆ. ಅದಕ್ಕೀಗ ಭೂತ ಕಾಲವೆಂಬುದೇ ಇಲ್ಲ, ಇನ್ನೂ ಅನೇಕ ಸಂಗತಿಗಲಿವೆ, ಅವನ್ನೆಲ್ಲ ಮಾತಿನಲ್ಲಿ ಹೇಳಲಾಗದು. ಅದು ಅದ್ಭುತ, ಅಸಾಧಾರಣ, ನಂಬುವುದಕ್ಕೆ ಕಠಿಣ. ಎಲ್ಲವನ್ನೂ ಮೀರಿದ್ದು ಅದು.

ಆದರೆ, ಅದನ್ನೂ ಯಾರಿಗೂ ತಿಳಿಯದು, ಅದನ್ನರಿಯುವ ಸಾಮರ್ಥ್ಯ ಯಾರಲ್ಲೂ ಇಲ್ಲ. ನನ್ನೊಳಗೆ ಏನಾಗುತ್ತಿದೆ ಅನ್ನುವುದನ್ನು ನೂರಲ್ಲಿ ಒಂದಂಶದಷ್ಟಾದರೂ ತಿಳಿಯುವ ಶಕ್ತಿ ಯಾರಲ್ಲೂ ಇಲ್ಲ. ಇದು ಎಲ್ಲ ಪರಿಕಲ್ಪನೆಗಳಿಗೆ ಮೀರಿದ್ದು. ಅಗ್ರಾಹ್ಯವಾದ ಸತ್ಯ ಇದು. (ಸಮಾಧಿ)

**– ದಿ ಸುಪ್ರೀಮ್, ಪುಟ 38–40**

**ಎಲ್ಲವನ್ನೂ ನನಗೆ ಬಿಟ್ಟುಬಿಡು**

"ಎಲ್ಲವನ್ನೂ ನನಗೆ ಬಿಟ್ಟುಬಿಡು ಮತ್ತು ನಿನ್ನತನವನ್ನು ವರ್ತಮಾನಕ್ಕೆ ಒಪ್ಪಿಸಿಬಿಡು ಆಗ ಮಾತ್ರ ನಿನಗೆ ನಿನ್ನ ಮುಂದಿನ ದಾರಿಯು ಸ್ಪಷ್ಟವಾಗುವುದು" ಎಂಬ ನುಡಿಯು ಈ ಮರ್ತ್ಯದ ಮೇಲೆ ನನ್ನ ಅವರೋಹಣಕ್ಕಿರುವ ಮಹತ್ತರವಾದ ಕಾರಣವನ್ನು ಸ್ಪಷ್ಟಪಡಿಸಿದೆ. ನನ್ನನ್ನು ನಾನು ಪರಿವರ್ತಿಸಿಕೊಳ್ಳುತ್ತ ಕೊನೆಗೊಮ್ಮೆ ಈ ಮರ್ತ್ಯ ಲೋಕವನ್ನೇ ಪುನರುಜ್ಜೀವನಗೊಳಿಸುವ ಮಹಾಯೋಜನೆಗೆಂದೇ ನಾನಿಲ್ಲಿಗೆ ಬಂದಿದ್ದೇನೆ. ಆ ಸುಪ್ರಮಾನಸವನ್ನು ಇಳೆಗೆ ಅವರೋಹಿಸಿ ಮರ್ತ್ಯವನ್ನು ಪುನರುತ್ಥಾನಗೊಳಿಸಬೇಕಿದೆ. ಒಂದೊಮ್ಮೆ ಆ ಅತಿಮಾನಸದ ಪ್ರಜ್ಞಾಬೀಜವನ್ನು ತಂದು ಮಾನವ ಜನಾಂಗದಲ್ಲಿ ಬಿತ್ತಿದರೆ ಸಾಕು. ಅದು ಯುಗಮಾನಗಳವರೆಗೆ ಈ ಭೂಮಿಯನ್ನು ಆ ಸುಪ್ರಮಾನಸದೊಂದಿಗೆ ಸಂಪರ್ಕವನ್ನೇರ್ಪಡಿಸುತ್ತದೆ. ಆ ದಿವ್ಯ ಲೋಕದಿಂದ ತಂದ ಚೇತನಾಂಶವು ಸಾವಿರದಲ್ಲಿ ಒಂದಂಶವಾಗಿದ್ದರೂ ಸಾಕು! ಆ ಮಹಾಯೋಜನೆಯು ಸಂಪನ್ನಗೊಳ್ಳುವುದು.

ಒಂದು ವೇಳೆ ಆ ಮಹಾಸಂಪರ್ಕವು ಏರ್ಪಡದೇ ಇದ್ದಲ್ಲಿ ಮರ್ತ್ಯರು ಮತ್ತು ಮರ್ತ್ಯ ಲೋಕವು ಆ ದಿವ್ಯ ಜ್ಯೋತಿ, ದಿವ್ಯ ಜ್ಞಾನ ಮತ್ತು ದಿವ್ಯಾನಂದಗಳನ್ನು ಅನುಭವಿಸಲು ಇನ್ನೂ ಸಿದ್ಧರಾಗಿಲ್ಲವೆಂದೂ; ಚಿರಂತನ ಮತ್ತು ಋತಧಾಮವನ್ನು ಗ್ರಹಿಸಲು ತಮ್ಮ ಪ್ರಜ್ಞೆಯನ್ನಿನ್ನು ಜಾಗೃತಗೊಳಿಸಿಲ್ಲವೆಂದೂ ಹೇಳಬಹುದು. ನಾನಿನ್ನು ಹೆಚ್ಚಿಗೆ ಏನನ್ನೂ ಹೇಳುವದಿಲ್ಲ. ಹೇಳುವದೆಲ್ಲವನ್ನು ಈಗಾಗಲೇ ಹೇಳಿಯಾಗಿದೆ. ಬಹಳಷ್ಟನ್ನು ಬಹಿರಂಗಗೊಳಿಸಿದ್ದೇನೆ. ಸಿದ್ಧರಾಗಿ ಈಗಾಗಲೇ ಬಹಳಷ್ಟು ತಡವಾಗಿದೆ.

**– ದಿ ಸುಪ್ರೀಮ್, ಪುಟ 41**

**ಶ್ರೀ ಅರವಿಂದರು ಎಲ್ಲಾ ವ್ಯವಸ್ಥೆಯನ್ನು ಸಂಪನ್ನಗೊಳಿಸಿದ್ದಾರೆ**

ಶ್ರೀ ಅರವಿಂದರು ಈಗಾಗಲೇ ಎಲ್ಲಾ ವ್ಯವಸ್ಥೆಗಳನ್ನೂ ಸಂಪನ್ನಗೊಳಿಸಿರುವ–ದರಿಂದ ನನ್ನ ಕೆಲಸವು ಇನ್ನೂ ಸುಲಭವಾಯಿತು. ಶ್ರೀ ಅರವಿಂದರಲ್ಲಿ ಅಪ್ರಜ್ಞೆಯ ಲೋಕವನ್ನು ತೆರೆಯುವ ಬೀಗದ ಕೈ ಇದೆ. ಅವರು ಆ ಅಪ್ರಜ್ಞೆಯ ತಳಕ್ಕೆ ಸಾಗುವ ದ್ವಾರವನ್ನು ತೆರೆದ ಕೂಡಲೇ ನಾನು ನಿಧಾನವಾಗಿ ನಡೆದು ಆ ಅಪ್ರಜ್ಞೆಯಲ್ಲಿ ಶಕ್ತಿ, ಜ್ಯೋತಿ ಮತ್ತು ದಿವ್ಯಾನಂದಗಳನ್ನು ತುಂಬುತ್ತಾ ಸಾಗಿದೆ. ನನ್ನಿಂದ ಹೊರಟ ಜ್ಯೋತಿಯು ಅಪ್ರಜ್ಞೆಯ ಕಣಗಳನ್ನು ಸ್ಪರ್ಶಿಸಿದೊಡನೆಯೇ, ಅಲ್ಲಿರುವ ಜಡ

ಚೇತನಗಳೆಲ್ಲವೂ ತಮ್ಮನ್ನು ತಾವು ನೂತನವಾದ ಪ್ರಜ್ಞೆಗೆ ತೆರೆದುಕೊಳ್ಳಲಾರಂಭಿಸಿದವು. ಮತ್ತು ಈ ಪರಿವರ್ತನೆಯು ಸುತ್ತೆಲ್ಲ ಹರಡುತ್ತ ಇಡೀ ಸ್ತರವನ್ನೇ ಪ್ರಜ್ಞೆಯೆಡೆಗೆ ಕೊಂಡೊಯ್ದಿತು. ನಿಮಗಿದು ತಿಳಿದಿರಲಿ, ಶ್ರೀ ಅರವಿಂದರು ಈ ಜಡ ಲೋಕದಲ್ಲಿರುವ ಒಂದು ದಿವ್ಯಾತ್ಮ, ಇಡೀ ಮಾನವ ಜನಾಂಗದ ಆಶಾಕಿರಣ, ಜಡ ಲೋಕದಲ್ಲಿನ ಪ್ರಜ್ಞಾಜ್ಯೋತಿ, ಜಡ ಲೋಕದಲ್ಲಿ ಅವತರಿಸಿದ ದಿವ್ಯ ಚೇತನ. ಸ್ವತಃ ಸುಪ್ರಮಾನಸದ ಸ್ಥಾನಿಕ ಚೇತನವಾದ ಅವರು ಆ ದಿವ್ಯ ಲೋಕವನ್ನು ಬಿಟ್ಟು, ಈ ಮರ್ತ್ಯ ಲೋಕಕ್ಕವತರಿಸಿ, ಇಲ್ಲಿನ ಅಪ್ರಜ್ಞೆಯ ಭಾರವನ್ನು ಹೊತ್ತು, ಮಾನವ ದೇಹದೊಂದಿಗೆ ನಮ್ಮೊಡನೆ ನೆಲೆಸುತ್ತ, ತಮ್ಮ ಸ್ವಯಂ ಉನ್ನತಿಯನ್ನು ತೊರೆದು, ಮನುಕುಲವನ್ನು ದಿವ್ಯ ಜೀವನಕ್ಕೆರಿಸುವ ಮಹೋನ್ನತ ಕಾರ್ಯವನ್ನು ಕೈಗೊಂಡರು. ಒಮ್ಮೆ ಮಾತನಾಡುತ್ತ ಶ್ರೀ ಅರವಿಂದರು, 'ಮರ್ತ್ಯದ ಉದ್ಧರಣಕ್ಕೆಂದು ನಾನು ಸುಪ್ರಮಾನಸದಿಂದಿಳಿದು ಈ ಭೌತಿಕ ಶರೀರವನ್ನು ಧರಿಸಿ ಸಾವು ಮತ್ತು ದುಃಖದಿಂದ ಕೂಡಿದ ಈ ಭುವಿಗೆ ಬಂದಿದ್ದೇನೆ. ಮತ್ತು ನಮ್ಮಿಬ್ಬರ ನೇತೃತ್ವದಲ್ಲಿ ಈ ಜಗತ್ತು ಬರಲಿರುವ ದಿವ್ಯ ಜೀವನದ ಪವಾಡಕ್ಕೆ ಸಾಕ್ಷಿಯಾಗಲಿದೆ' ಎಂಬುದನು ತಿಳಿಸಿದ್ದರು. ಇಲ್ಲಿ ನನ್ನ ಅವತರಣಕ್ಕೂ ಅವರೇ ನೇರ ಕಾರಣರು. ಈ ಜಡ ಲೋಕವು ನನ್ನ ಅವತರಣದ ತೀವ್ರ ಆಕಾಂಕ್ಷೆಯಲ್ಲಿದ್ದಾಗ ಅದನ್ನರಿತ ಶ್ರೀ ಅರವಿಂದರು ಇಳೆಯಿಂದ ಊರ್ಧ್ವದೆಡೆಗೆ ಈ ಭುವಿಯ ಹಂಬಲಿಕೆಯ ಸಂದೇಶವನ್ನು ರವಾನಿಸಿದರು. ಒಬ್ಬ ಅವತಾರಿಯ ಸಂದೇಶಕ್ಕೆ ಪ್ರತಿಕ್ರಯಿಸಿದ ಪರಮ ಪುರುಷನು ನನ್ನನ್ನಿಲ್ಲಿಗೆ ಕಳುಹಿಸಿದರು. ಅದೊಂದು ಅದ್ಭುತ ಕ್ಷಣ! ಇಡೀ ವಿಶ್ವವು ಬಹು ಉತ್ಸುಕತೆಯಿಂದ ತನ್ನ ಗುರಿಯ ಅಸ್ತಿತ್ವದೆಡೆಗೆ ಮುನ್ನುಗ್ಗುವ ಮಹಾಸಂದರ್ಭಕ್ಕೆ ಅದು ಸಾಕ್ಷಿಯಾಗಲಿಕ್ಕಿತ್ತು.

ನಿಮಗೆ ಗೊತ್ತೆ? ನಮ್ಮಿಂದ ಹೊರಹೊಮ್ಮುವ ಪ್ರತಿಯೊಂದು ಕಂಪನಗಳು, ನಮ್ಮಿಂದ ಹೊರಸೂಸುವ ಪ್ರತಿಯೊಂದು ಬೆಳಕಿನ ಕಿರಣಗಳು, ದಾರಿದೀಪಗಳಾಗುತ್ತ, ಅಪ್ರಜ್ಞಾ ಲೋಕದ ಮಾರ್ಗಗಳನ್ನು ಬೆಳಗಿಸುತ್ತ ನಮ್ಮನ್ನು ಋತಮೂಲದೆಡೆಗೆ ಕೊಂಡೊಯ್ಯಲು ಸಹಕರಿಸುತ್ತವೆ. ನನ್ನ ಎಲ್ಲಾ ಸಾಧನೆಗಳಿಗೂ ಶ್ರೀ ಅರವಿಂದರೇ ಮೂಲಕಾರಣರು. ಆ ಮಹಾಯೋಜನೆಯ ಬಹುಪಾಲು ಕೆಲಸವನ್ನು ಅವರೇ ಪೂರೈಸಿದ್ದಾರೆ. ಅವರೇ ನನ್ನನ್ನಿಲ್ಲಿಗೆ ಆಮಂತ್ರಿಸಿದರು, ಅವರು ತೆರೆದ ದ್ವಾರದ ಮುಖಾಂತರ ಸಾಗಿದ ನಾನು ಅಪ್ರಜ್ಞಾ ಲೋಕದಾಳಕ್ಕಿಳಿದು ಪ್ರಕಾಶವನ್ನು ಹರಿಸುತ್ತ ಸುಪ್ತವಾಗಿದ್ದ ಕಣಗಳನ್ನೆಲ್ಲ ಜಾಗೃತಗೊಳಿಸಿದೆನು. ನಾನು ಪ್ರಯೋಗಿಸಿದ

ಚೂರೇ ಚೂರು ಶಕ್ತಿಯಿಂದ ಆ ಕಣಗಳೆಲ್ಲವೂ ಎಚ್ಚೆತ್ತವು. ನಾನಿತ್ತ ದಿವ್ಯ ಪ್ರೇಮವು ಅವುಗಳ ಉನ್ನತಿಗೆ ಕಾರಣವಾಯ್ತು. ಈ ರೀತಿಯಾಗಿ ನಾನು ಆ ಅಪ್ರಜ್ಞಾ ಕಣಗಳಲ್ಲಿ ಜೀವನಾಂಶವನ್ನು ತುಂಬಿದೆ.

ನಾವು ಪ್ರತಿಯೊಂದು ಹೆಜ್ಜೆಯನಿಟ್ಟು ಸಾಗುತ್ತಿರಲು ನಮ್ಮ ಹಿಂದೆ ಜೀವಕಳೆಯನ್ನು ತುಂಬಿಕೊಂಡು ಎದ್ದು ನಿಂತ ಕಣಗಳೆಲ್ಲವೂ ತಮ್ಮ ಸುತ್ತಲಿರುವ ಕಣಗಳ ಮೇಲೆ ತಮ್ಮ ಪ್ರಭಾವವನ್ನು ಬಿರುತ್ತ ಅವನ್ನೂ ಜಾಗೃತಗೊಳಿಸುತ್ತ ಇಡೀ ವಲಯವನ್ನೇ ಕಾಂತಿಯುತವಾಗಿ ಬೆಳಗಿಸಿದವು.

**– ಸರ್ವೋಚ್ಚತೆ, ಪುಟ 52–53**

## ಪುರುಷ ಮತ್ತು ಶಕ್ತಿ

ಪ್ರತಿಯೋರ್ವರ ಆಂತರ್ಯದಲ್ಲಿ ಅಸಂಖ್ಯ ಪ್ರಜ್ಞಾ ಗುಹೆಗಳಿವೆ. ಪ್ರತಿ–ಯೋರ್ವರೂ ತಮ್ಮ ಅಂತರಾಳಕ್ಕಿಳಿದು, ಆಂತರಿಕ ಬೆಂಬಲಕ್ಕಾಗಿ ಶೋಧಿಸಬೇಕು. ತಮ್ಮ ಆಂತರ್ಯಕ್ಕಿಳಿದು, ಒಂದಾದ ನಂತರ ಒಂದರಂತೆ ಆಂತರಿಕ ಸ್ತರಗಳನ್ನು ಹಿಂದಿಕ್ಕುತಾ, ಪ್ರತಿಯೊಂದು ಪ್ರಜ್ಞಾ ಪಾತಳಿಗಳನ್ನು ಹಿಮ್ಮೆಟ್ಟುತಾ, ತಾವು ಇಳಿದು ಬಂದ ಮಾರ್ಗದಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಅಚ್ಚಳಿಯದಂತೆ ಮುದ್ರಿಸುತ್ತ ಮುಂಬರಿಯಬೇಕು. ಕೊನೆಗೊಮ್ಮೆ ಸುರಂಗ ಮಾರ್ಗದ ನೆನೆಕೊನೆಗಳನ್ನು ದಾಟಿ ಅತ್ಯಂತ ಆಳದಲ್ಲಿ ನೆಲೆಕಂಡಿರುವ ಪರಮ ಶಾಂತಿಯನ್ನು ತಮ್ಮದಾಗಿಸಿಕೊಳ್ಳಬೇಕು. ಬಾಹ್ಯ ಜಗತ್ತಿನ ಗಲಭೆ–ಗೊಂದಲಗಳಿಂದ ದೂರವಾಗಿ, ಭೌತಿಕ ಲೋಕದ ನೋವು–ವೇದನೆಗಳಿಂದ ಮುಕ್ತವಾಗಿ, ವಿಚಾರರಹಿತವೂ–ಕಲ್ಪನಾರಹಿತವೂ ಆಗಿ, ಸಂವೇದನಾ ಅಲೆಗಳಿಂದ ತಪ್ಪಿಸಿಕೊಂಡು, ಜಾಗರೂಕತೆಯಿಂದ ಆ ಶಾಂತಿಧಾಮಕ್ಕಿಳಿಯಬೇಕು. ಅಲ್ಲಿ ಅಹಮಿಕೆಗೆ ಬೆಲೆಯಿಲ್ಲ, ವರ್ತಮಾನಕ್ಕೆ ನೆಲೆಯಿಲ್ಲ. ಆದರೆ ಶೋಧಕನು ತನ್ನ ಶೋಧನೆಯನ್ನು ಅಲ್ಲಿಗೇ ನಿಲ್ಲಿಸಬಾರದು ಇನ್ನೂ ಆಳಕ್ಕಿಳಿದು ಪರಿಶೋಧಿಸಬೇಕು. ತನ್ನ ಆಂತರಿಕ ಪ್ರಜ್ಞೆಯ ಬೆಳಕಿನಲ್ಲಿ ಮುಂಬರಿಯಬೇಕು. ಸರ್ವಸಾಧಕವಾದ ಶಕ್ತಿ ಸ್ಥಾವರವನ್ನು ಹುಡುಕುತ್ತ ಮತ್ತೂ ಆಳಕ್ಕಿಳಿಯಬೇಕು. ಕೊನೆಗೊಮ್ಮೆ ಕ್ರಿಯೆ, ಪ್ರಭಾವ, ಅಹಮಿಕೆ ಮತ್ತು ಪರಕೀಯ ಭಾವನೆಗಳಿಂದ ಮುಕ್ತವಾದ ಸಂತಸದ ಪರಮಾವಧಿಯ ನೆಲೆಯನ್ನು ತಲುಪಬಹುದು. ಅಲ್ಲಿ ಸಂತಸವು ತನ್ನ ಮೂಲರೂಪದಲ್ಲಿಯೇ ಸರ್ವವ್ಯಾಪಿಯಾಗಿ, ಸಮಾನ ಮೊತ್ತದಲಿ, ಸಮಚಿತ್ತದಲ್ಲಿ

ನೆಲೆಸಿರುತ್ತದೆ. ಅದೇ ನಿರ್ವಿಕಾರ–ನಿರ್ವಿಕಲ್ಪ ಶಾಂತಿ. ಅಲ್ಲಿಯಿಂದ ಮತ್ತೇ ಆಳಕ್ಕಿಳಿದಾಗ ನಿರ್ಮಲವಾದ ಸೌಂದರ್ಯಧಾಮವೊಂದು ನಮ್ಮೆದುರಿಗೆ ತೆರೆದುಕೊಳ್ಳುತ್ತದೆ. ಅದು ಪ್ರಜ್ಞಾಕೇಂದ್ರಿಕೃತ ತಾಣವಾಗಿದ್ದು, ಅಸ್ತಿತ್ವ ಮತ್ತು ದ್ವಂದ್ವಗಳಿಂದ ಮುಕ್ತವಾಗಿದೆ. ಆ ಸ್ತರದೊಳಗೆ ಕಾಲಿಟ್ಟೊಡನೆಯೇ ಸಾಧಕನು ಅಲ್ಲಿನ ಚಿರಂತನ ನಂದಾದೀಪ, ಆಂತರಿಕ ದಿವ್ಯತೆ, ಮತ್ತು ತನ್ನದೇ ಆದ ದಿವ್ಯಾತ್ಮದೊಡನೆ ಒಂದಾಗುತ್ತಾನೆ.

ಆ ಸ್ತರವನ್ನೂ ಹಿಂದಿಕ್ಕಿ ಮತ್ತೂ ಆಳಕ್ಕಿಳಿದಾಗ ಅಲ್ಲಿ ನಮಗೆದುರಾಗುವ ಪವಿತ್ರ ಜ್ವಾಲೆಯಲ್ಲಿ ಶ್ರೀ ಅರವಿಂದರು ನೆಲೆಸಿರುತ್ತಾರೆ. ಅವರೊಬ್ಬ ಪಾರವಿರದ ಆನಂದಸಾಗರ, ಸರ್ವಶಕ್ತ ಒಡೆಯ, ಅಜೇಯ ಚೇತನ, ನಮ್ಮ ಅಸ್ತಿತ್ವದ ಪರಮ ಪ್ರಭು, ಮನುಕುಲದ ಅಸ್ತಿತ್ವದಲ್ಲಿ ಸರ್ವವ್ಯಾಪಿಯಾದ ಅಭಿವ್ಯಕ್ತಿ, ಮಾನವ ಜನಾಂಗದಲ್ಲೇ ಸರ್ವಶಕ್ತವಾದ ಚೇತನ, ಪರಮ ಶಕ್ತಿಗಳೆಲ್ಲವನ್ನು ಅರಿತ ಸರ್ವಜ್ಞ ಪುರುಷ, ಇಡೀ ಮರ್ತ್ಯಕ್ಕೆ ಗುರುವೂ–ಗುರಿಯೂ ಆಗಿ ನಮ್ಮನ್ನು ನಡೆಸುವ ಪರಮ ಪ್ರಭು.

ಸಾಧಕರು ತಮ್ಮ ಹೃದಯಾಂತರಾಳದಿಂದ ಅವರನ್ನು ಕರೆದ ಕೂಡಲೇ (ಶ್ರೀಮಾತೆಯವರು ತಮ್ಮ ಹೃದಯದ ಮೇಲೆ ಕೈಯಿಟ್ಟು ನುಡಿದರು) ಶ್ರೀ ಅರವಿಂದರು ಪ್ರಕಟಗೊಂಡು ಅವರ ಸಮಸ್ಯೆಗಳಿಗೆ ಖಂಡಿತವಾಗಿಯೂ ಸ್ಪಂದಿಸುತ್ತಾರೆ. ಆಗ ನಮ್ಮ ಹೃದಯಗಳು ಅವರ ಪ್ರಜ್ಞೆ ಮತ್ತು ನಾಮಮಾತ್ರ–ಗಳಿಂದ ಬಡಿದುಕೊಳ್ಳಲಾರಂಭಿಸುತ್ತವೆ. ಏಕೆಂದರೆ ಅಲ್ಲಿ ಅಚ್ಚೊತ್ತಿರುವ ಅವರ ನಾಮವು ಮೇಲಿನಿಂದಲೇ ಪ್ರತಿಧ್ವನಿಸುವುದು ನಮ್ಮನುಭವಕ್ಕೆ ಬಂದಿರುತ್ತದೆ.

ಆ ಆಳನಿರಾಳದಲಿ ನೆಲೆಸಿರುವ ಆ ಪರಮಪ್ರಭುವಿನ ಅಂಕೆಯಿಂದಲೇ ಲೋಕದ ಸರ್ವ ಚೇತನಾಚೇತನಗಳೆಲ್ಲವೂ ಉಸಿರಾಡುತ್ತಿವೆ.

ಸಕಲ ಚರಾಚರಗಳಲ್ಲಿ ನೆಲೆಸಿರುವ ಅವರ ದಿವ್ಯಚೇತನದಿಂದಲೇ ಇಡೀ ವಿಶ್ವವು ಕಂಪಿಸುತ್ತಿದೆ. ಅವರ ಸನ್ನಿಧಿಯಲ್ಲಿಯೇ ಉಸಿರಾಡುತ್ತಿದೆ.

ಅವರ ಹೆಸರಿನಲ್ಲಿರುವ ಆನಂದದ ಚಿಲುಮೆಯು ಸಕಲದ್ರವ್ಯಗಳ ಒಳಹೊಕ್ಕು ಅವುಗಳನ್ನು ಪವಿತ್ರೀಕೃತಗೊಳಿಸುತ್ತದೆ, ಅವರ ಹೆಸರನ್ನು ಸರ್ವಾನಂದಗಳಲ್ಲಿ ಪ್ರತಿಧ್ವನಿಸುವಂತೆ ಮಾಡುತ್ತದೆ. ನಿತ್ಯವೂ–ಸತ್ಯವೂ ಆಗಿರುವ ಅವರ ಹೆಸರೊಂದೇ ಈ ಜಗತ್ತಿದೆ ಅರ್ಥವನ್ನು ಕಲ್ಪಿಸಿದೆ.

ಅವರ ಹೆಸರಿಗೆಷ್ಟು ಸಾಮರ್ಥ್ಯವಿದೆಯೆಂದರೇ, ಆ ನಾಮವೊಂದರಿಂದಲೇ ಈ ವಿಶ್ವದಲ್ಲಿನ ಪ್ರತಿಯೊಂದು ಕಣಗಳಲ್ಲಿ ಅಂತರ್ಗತವಾದ ದಿವ್ಯತೆಯನ್ನು ಒಳಹೊಕ್ಕು ದರ್ಶಿಸಬಹುದು, ನಿತ್ಯತೆಯಲ್ಲಿ ಅವರನ್ನು ಶೋಧಿಸಬಹುದು, ಪವಿತ್ರೀಕೃತವಾದ ನಿರ್ವಿಕಲ್ಪ ಶಾಂತಿಯಲ್ಲಿ ಅವರೊಡನೆ ಅನುಸಂಧಾನ–ಗೊಳ್ಳಬಹುದು, ಆನಂದದ ಅನಂತಸಾಗರದಲ್ಲಿ ಮಿಂದೇಳಬಹುದು, ಅನಂತದ ದ್ವಾರಗಳನ್ನು ತೆರೆವ ಬೀಗದ ಕೈಗಳನ್ನು ಅವರಿಂದಲೇ ಪಡೆಯಬಹುದು.

ಅವರ ದಿವ್ಯ ಸನ್ನಿಧಿಯು ನಮ್ಮ ಬದುಕಿನಲ್ಲಿ ಅದ್ಭುತ ಸಂವೇದನೆಗಳನ್ನು ತುಂಬಿ ನಮ್ಮ ಜೀವನದಲ್ಲಿ ಸಂತಸದ ಚಿಲುಮೆಯನ್ನೇ ಹರಿಸಿದೆ. ಅದಕ್ಕಾಗಿ ನಾವವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಲೇಬೇಕು. ಬನ್ನಿ ಶಾಂತಿಯುತವಾಗಿ ಕುಳಿತು ಆ ಪರಮ ಪ್ರಭುವಿಗೆ ಆರಾಧನೆಯ ಮೂಲಕ ಕೃತಜ್ಞತೆಯನ್ನು ಸಲ್ಲಿಸೋಣ.

ನಾನು ಆ ಚಿರಂತನ ಜ್ಯೋತಿಯ ಸಹಭಾಗಿ, ಕ್ರಿಯಾವಿಧಿಗಳನ್ನು ಆರಂಭಿಸುವ ಮತ್ತು ಅವುಗಳನ್ನು ಜೀವಂತವಾಗಿಡುವ ಶಕ್ತಿಯ ಸೂನು, ಪರಮ ಶಾಂತಿಧಾಮದ ನಿರ್ವಾಹಕಳು, ಉದ್ಬುದ್ಧವೂ–ಉತ್ಕೃಷ್ಟವೂ ಆದ ಸಂತಸದ ಚಿಲುಮೆ, ಮತ್ತು ಪವಿತ್ರೀಕೃತವಾದ ದಿವ್ಯ ಪ್ರಕಾಶ.

ಶ್ರೀ ಅರವಿಂದರು ಮೊದಲನೇ ಶಕ್ತಿಸ್ಥಾವರವಾದರೆ, ನಾನು ಎರಡನೇ ಸ್ಥಾವರ. ನಮ್ಮಿಬ್ಬರಲ್ಲಿ ಒಬ್ಬರು ಶಕ್ತಿಯ ಮೂಲಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತರಾದರೆ, ಇನ್ನೊಬ್ಬರು ಆ ಕ್ರೂಢಿಕೃತ ಶಕ್ತಿಯನ್ನು ಮರ್ತ್ಯ ಲೋಕದಲ್ಲಿ ಪಸರಿಸುವ ಕಾರ್ಯದಲ್ಲಿ ನಿರತರಾಗಿರುತ್ತೇವೆ.

ಹೌದು ಮಗು, ನಾವಿಬ್ಬರೂ ಒಂದೇ ನಾಣ್ಯದೆರಡು ಮುಖಗಳಿದ್ದಂತೆ. ಅವರ ಮಹಾಯೋಜನೆಯಲ್ಲಿ ಮಾರ್ಗಪ್ರತಿಬಂಧಕಗಳಾದ ಅಡಚಣೆಗಳು, ಅಡ್ಡಿ–ಆತಂಕಗಳು, ಕಷ್ಟಗಳು ಹೇಳಹೆಸರಿಲ್ಲದಂತೆ ಮಾಯವಾಗಿದ್ದು, ಅವರ ಇಡೀ ಜೀವಿತಾವಧಿಯಲ್ಲಿಯೂ, ಅವರ ಮರಣಾನಂತರದಲ್ಲಿಯೂ ಅವುಗಳು ಮತ್ತೆಂದು ಅವರ ಹತ್ತಿರಕ್ಕೂ ಸುಳಿಯಲಿಲ್ಲ. ಹಾಗೂ ಅನಂತಕಾಲದವರೆಗೂ ಅವರು ಈ ದೋಷಗಳಿಂದ ಮುಕ್ತರಾಗಿಯೇ ಇರುತ್ತಾರೆ.

**– ಸರ್ವೋಚ್ಚತೆ, ಪುಟ 63–64**

# ಶ್ರೀ ಅರವಿಂದರ
# ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**13**

## ಅಧ್ಯಾಯ – 12 (13)

## ಯಜ್ಞದ ಭೋಕ್ತೃ

ಇಲ್ಲಿಯವರೆಗೆ ಏನೆಲ್ಲ ವಿವೇಚನೆ ಮಾಡಿದ್ದಾಗಿದೆಯೋ, ಅದರ ತತ್ವಭೂತ ಭಾಗವನ್ನು ಸಂಕ್ಷಿಪ್ತವಾಗಿ ನೋಡಿಕೊಂಡು ಮುಂದೆ ಹೋಗುವುದು ಯೋಗ್ಯವೆನಿಸುತ್ತದೆ. ಗೀತೆಯ ಕರ್ಮವಿಷಯಕ ಶಾಸ್ತ್ರವು ಸರ್ವಥಾ ಅದರ ಯಜ್ಞದ ಪರಿಕಲ್ಪನೆಯ ಮೇಲೆಯೇ ಆಧಾರಿತವಾಗಿದೆ. ಈಶ್ವರ, ವಿಶ್ವ ಮತ್ತು ವಿಶ್ವ ವ್ಯಾಪಾರ ಇವೆಲ್ಲವನ್ನು ಒಂದು ತರ್ಕಸಮ್ಮತ ಸರಪಣಿಯಲ್ಲಿ ಪೋಣಿಸುವ ಕೆಲಸವನ್ನು ಗೀತೆಯ ಕರ್ಮ ಶಾಸ್ತ್ರವು ಬಹು ಸಮರ್ಪಕವಾಗಿ ಮಾಡುತ್ತದೆ. ವಾಸ್ತವವಾಗಿ ಅಸ್ತಿತ್ವದ ಈ ಸನಾತನ ಸತ್ಯವು ಅನೇಕ ಆಯಾಮಗಳನ್ನು ಹೊಂದಿದೆ; ಆದರೆ ಈ ಆಯಾಮಗಳ ಪೈಕಿ ಒಂದನ್ನೋ, ಎರಡನ್ನೋ ಹೀಗೆ ಅಲ್ಪ ಸ್ವಲ್ಪ ಕಲ್ಪನೆ, ದೃಷ್ಟಿಕೋನ, ದರ್ಶನ ಇಷ್ಟನ್ನೇ ಮಾನವನ ಮನಸ್ಸು ಆತ್ಮಸಾತಗೊಳಿಸಿಕೊಳ್ಳಬಲ್ಲದು. ಹೆಚ್ಚಿನ ಸಾಮರ್ಥ್ಯ ಅದಕ್ಕಿಲ್ಲ. ಆದರೆ ತನಗೆ ದಕ್ಕಿದಷ್ಟನ್ನೇ ತೆಗೆದುಕೊಂಡು ತನ್ನದೇ ಆದ ಜೀವನ ವಿಷಯಕ, ನೀತಿವಿಷಯಕ, ಧರ್ಮವಿಷಯಕ ಸಿದ್ಧಾಂತವನ್ನೇ ಅದು ಕಟ್ಟುತ್ತದೆ. ಹೀಗೆ ಮಾಡುವಾಗ ಯಾವ ಚಿಹ್ನೆ, ದರ್ಶನ ಇವುಗಳ ಮೇಲೆ ಹೆಚ್ಚು ಒತ್ತು ನೀಡುವುದೋ ಅದನ್ನನುಸರಿಸಿ ಅದರ ಉಪಪತ್ತಿ ಬೆಳೆಯುತ್ತದೆ. ಆದರೆ, ವಿಶಾಲ ವಿಜ್ಞಾನದ ಕಾಲಖಂಡ ಅಥವಾ ಯುಗ ಪ್ರಾಪ್ತವಾಯಿತೆಂದರೆ ತನ್ನ ಉಪಪತ್ತಿಯನ್ನದು ಪುನಃ ಪರಿಶೀಲನೆ ಮಾಡುತ್ತದೆ, ಪೂರ್ಣತೆಯತ್ತ ಸಾಗತೊಡಗುತ್ತದೆ; ತನ್ನ ವಿಶ್ವ ವಿಷಯಕ ಜ್ಞಾನ, ಈಶ್ವರ–ಜ್ಞಾನ ಹಾಗೂ ಸ್ವಯಂ–ಅರಿವು (ಆತ್ಮ–ಜ್ಞಾನ) ಇವೆಲ್ಲವುಗಳಲ್ಲಿ ಮಾರ್ಪಾಡು ಮಾಡಿಕೊಳ್ಳುತ್ತದೆ. ಸಮಗ್ರತೆಯನ್ನು ತಂದುಕೊಳ್ಳುವ ಪ್ರಯತ್ನ ಮಾಡುತ್ತದೆ. ಗೀತೆಯ ಬೋಧನೆಯು ಹಾಗೂ ಸಿದ್ಧಾಂತವು ಸಂಪೂರ್ಣವಾಗಿ ವೇದಾಂತದ ಮೂಲಭೂತ ಸತ್ಯದ ಮೇಲೆಯೇ ರೂಪಿತವಾಗಿದೆ. ಸಮಗ್ರ ಅಸ್ತಿತ್ವವು ಏಕಮೇವ ಬ್ರಹ್ಮದ ಮೇಲೆಯೇ ಪ್ರತಿಷ್ಠಿತವಾಗಿದೆ. ಬ್ರಹ್ಮಾಂಡದ ಸಮಸ್ತ ಅಸ್ತಿತ್ವವು ಏಕಮೇವ ಬ್ರಹ್ಮವೇ ಆಗಿದೆ, ಎಲ್ಲ ಜೀವನವು ಬ್ರಹ್ಮನ ಚಕ್ರಾಕಾರ

ಭ್ರಮಣವೇ ಆಗಿದೆ, ಅರ್ಥಾತ್ ಎಲ್ಲ ಜೀವನವು ದಿವ್ಯ ಪ್ರವಾಸವೇ ಆಗಿದ್ದು, ಈ ಪ್ರವಾಸದ ಆರಂಭವು ಬ್ರಹ್ಮನಿಂದಲೇ ಆಗುತ್ತದೆ, ಬ್ರಹ್ಮನಲ್ಲೇ ಕೊನೆಗೊಳ್ಳುತ್ತದೆ. ವೇದಾಂತದ ಈ ಮೂಲಭೂತ ಸತ್ಯದ ಮೇಲೆಯೇ ಗೀತಾಶಾಸ್ತ್ರ ಆಧಾರಿತವಾಗಿದೆ.

ಪ್ರಕಟವಾಗಿ ಅಭಿವ್ಯಕ್ತವಾಗಿರುವ ಸಮಸ್ತ ಪ್ರಕೃತಿಯು ಈಶ್ವರನ ಶಕ್ತಿಯಾಗಿದೆ. ಈಶ್ವರನು ಪ್ರಕೃತಿಯ ದಿವ್ಯ ಆತ್ಮನಾಗಿದ್ದಾನೆ. ಅದರ ಯಜಮಾನನಾಗಿದ್ದಾನೆ. ಅದರೊಳಗೆ ವಾಸಿಸುವ 'ದೇ ಹೀ' ಆಗಿದ್ದಾನೆ. ಪುರುಷನ (ಅಥವಾ ಈಶ್ವರನ) ಸಂತೋಷಕ್ಕಾಗಿಯೇ ಪ್ರಕೃತಿಯು ಅನೇಕ ವಿಧ ಜೀವಿಗಳನ್ನು ಸೃಷ್ಟಿಸುತ್ತದೆ, ತಾನೇ ಅಸಂಖ್ಯಾತ ಜೀವಿಗಳ ರೂಪ ತಾಳುತ್ತದೆ. ಅನೇಕ ವಿಧ ಕರ್ಮಗಳನ್ನು ಮಾಡುತ್ತದೆ. ಮನಸ್ಸಾಗಿ ವಿಚಾರ ಮಾಡುತ್ತದೆ; ಆನಂತರ ಪುನಃ ಮನಸ್ಸು, ಆತ್ಮದರಿವು ಅಥವಾ ಆತ್ಮ ಜ್ಞಾನ ಇವುಗಳ ಮೂಲಕ ಸಾಗಿ ಪರಮ ಪುರುಷನ ಜ್ಞಾನವನ್ನು ಸಂಪಾದಿಸುತ್ತದೆ. ಆ ದಿವ್ಯ ಪುರುಷನೇ ಆಗಿ ಬದಲಾಗುತ್ತದೆ. ಮೊದಲ ಹೆಜ್ಜೆ ಅಂದರೆ ಆತ್ಮ ಅಥವಾ ಮೂಲ ಚೇತನವು ಸಾಂದ್ರೀಕೃತಗೊಂಡು, ಎಲ್ಲವನ್ನು ತನ್ನಂತರಂಗದಲ್ಲಿ ಬೈತಿರಿಸಿಕೊಂಡು ಬೀಜೀಕೃತವಾಗುತ್ತದೆ. ಇದನ್ನು ಅಂತರ್ನಿವೃತ್ತಿ ಅಥವಾ ಅಂತರ್ಭೂತವಾಗುವಿಕೆ involution ಎಂದು ಕರೆಯುತ್ತಾರೆ. ಅಲ್ಲಿಂದ ಪುನಃ ಒಂದೊಂದಾಗಿ ಪ್ರಕಟವಾಗುತ್ತ ಹೋಗುತ್ತವೆ, ಏನೆಲ್ಲ ಅಂತರ್ನಿಹಿತವಾಗಿದೆಯೋ ಅದೆಲ್ಲ ನಿಧಾನವಾಗಿ ಹಂತ ಹಂತವಾಗಿ ಅಭಿವ್ಯಕ್ತವಾಗುತ್ತ ಹೋಗುತ್ತದೆ; ಇದನ್ನು ವಿಕಾಸ evolution ಎಂದು ಕರೆಯುತ್ತಾರೆ. ಆತ್ಮವು ತನ್ನೆಲ್ಲ ಆಯಾಮಗಳನ್ನು ದೃಶ್ಯವಾಗಿಸುತ್ತ, ಪ್ರಕಟೀಕರಿಸುತ್ತ ಹೋಗುವ ಪ್ರಕ್ರಿಯೆ ಇದು. ಪ್ರಕೃತಿಯ ಈ ಪ್ರವೃತ್ತಿ–ನಿವೃತ್ತಿಯ ಆವರ್ತನವು ನಿರಂತರವಾಗಿ ನಡೆದಿರುತ್ತದೆ; ಈ ರೀತಿ ಆಗಬೇಕಾದರೆ ಪುರುಷನು ಒಂದು ಸಮ ಯಾವಚ್ಛೇದವನ್ನನುಸರಿಸಿ ನಿರಂತರವಾಗಿ ಮೂರು ಅವಸ್ಥೆಗಳಲ್ಲಿ ಇರಬೇಕಾಗುತ್ತದೆ. ಈ ಮೂರು ಅವಸ್ಥೆಗಳಲ್ಲಿ ಪ್ರತಿಯೊಂದು ಅವಸ್ಥೆಯೂ ಪ್ರಕೃತಿಯ ಒಟ್ಟಾರೆ ಕಾರ್ಯದ ಸಿದ್ಧಿಗೆ ಅವಶ್ಯವಾಗಿರುತ್ತದೆ – ಕ್ಷರ, ಪರಿವರ್ತನಾಶೀಲ meetable ವಸ್ತುವಿನ ರೂಪದಲ್ಲಿ ಪುರುಷನು ಪ್ರಕಟವಾಗಲೇಬೇಕಾದ ಅಗತ್ಯವಿರುತ್ತದೆ. ಈ ಕ್ಷರ meetable ಅವಸ್ಥೆಯಲ್ಲಿ ಪುರುಷ ತತ್ವವು ನಮಗೆ ಸೀಮಿತ, ಮರ್ಯಾದಿತ, ಬದ್ಧ ಎಂಬಂತೆ ತೋರುತ್ತದೆ. ಅದು ಅನೇಕ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದನ್ನೇ ಗೀತೆಯು "ಸರ್ವಭೂತೇ" ಎಂದು ವರ್ಣಿಸುತ್ತದೆ. ಕೋಟ್ಯಾವಧಿ

ಭೂತಗಳ (ಭೂತಗಳ ಅಂದರೆ ಜೀವಿಗಳ, ವಸ್ತುಗಳ, ಸಂಗತಿಗಳ ಎಂದು ಅರ್ಥ) ಪ್ರತ್ಯೇಕ ಅಸ್ತಿತ್ವವೂ ಸೀಮಿತವೆನಿಸಿದರೂ ನಿಸ್ಸೀಮ ಅಸ್ತಿತ್ವದ ಜತೆ ಘನಿಷ್ಠ ಸಂಬಂಧ ಇದ್ದೇ ಇರುತ್ತದೆ – ಅನೇಕ ರೀತಿಯ, ಅನೇಕ ಭೇದಗಳ, ಅನೇಕ ಸಂಬಂಧ ಇರುವುದನ್ನು ನಾವು ವ್ಯಾವಹಾರಿಕವಾಗಿ ಕೂಡ ಗುರುತಿಸಬಹುದು – ಇದು ಪುರುಷನು ಕ್ಷರ ಕ್ಷೇತ್ರದಲ್ಲಿ ಪ್ರಕಟವಾಗುವ ಹಾಗೂ ನಮಗೆ ತೋರಿಬರುವ ವಿಧಾನ. ಈ ಅನಂತ ಕ್ಷರ ವಸ್ತುಗಳ (ಜೀವಿಗಳ) ಹಿನ್ನೆಲೆಯಲ್ಲಿ ಇರುವ ದಿವ್ಯ ಕಾರ್ಯವು ಪುರುಷ ತತ್ವದ ಮೂಲಕವೇ ಸಂಪನ್ನವಾಗಿರುತ್ತದೆ. ಇದು ಪುರುಷನ ಅಥವಾ ಈಶ್ವರನ ವಿಶ್ವ ವ್ಯಾಪಕ ಗುಣವೇ ಆಗಿರುತ್ತದೆ. ಅದು ದೇಶಾತೀತವೂ, ಕಾಲಾತೀತವೂ, ಅಕ್ಷರವೂ, ನಿರಾಕಾರವೂ, ಅಪರಿವರ್ತನೀಯವೂ, ಅವಿಭಾಜ್ಯವೂ ಆಗಿರುತ್ತದೆ ಎಂಬುದನ್ನು (ನಾವು) ಮರೆಯಲಾಗದು. ಸಮಸ್ತ ಕ್ಷರ ವಸ್ತು, ಸಂಗತಿ, ಜೀವಿ ಎಲ್ಲವೂ ನಿಜವಾಗಿ ಒಂದೇ ಆಗಿರುತ್ತದೆ. ಅಂತೆಯೇ ತನ್ನ ಕ್ರಿಯಾಶೀಲ, ಸಾಂತ ವ್ಯಕ್ತಿತ್ವವುಳ್ಳ ಪ್ರತ್ಯೇಕ ಅಸ್ತಿತ್ವದಲ್ಲಿಯೂ ಸಹ ಅದು ತನ್ನ ಸಂಪೂರ್ಣ ವಿಶ್ವಾತ್ಮಕತೆಯನ್ನು, ಶಾಂತತೆಯನ್ನು, ಸ್ಥಿರತೆಯನ್ನು, ಅಚಲತೆಯನ್ನು, ಅಕ್ಷರ ಅಥವಾ ಅಪರಿವರ್ತನೀಯ ನಿರ್ಮೋಹ ಏಕತೆಯನ್ನು ಪ್ರದರ್ಶಿಸಬಲ್ಲದು. ಇದೆಲ್ಲದರ ಹಿನ್ನೆಲೆಯಾಗಿ ಅವಿಭಾಜ್ಯವಾದ ಅನಂತತೆಯು ಅಖಂಡವಾಗಿ ಇರುವುದರಿಂದ ಕಾಲಾಂತರದಲ್ಲಿ, ಅದು ತನ್ನನ್ನು ಸಂಪೂರ್ಣವಾಗಿ ಪ್ರತ್ಯೇಕ ಅಸ್ತಿತ್ವದಲ್ಲಿಯೂ ಪ್ರಕಟಿಸಿಕೊಳ್ಳಬಲ್ಲದು. ಆದರೆ ಎಲ್ಲಕ್ಕಿಂತ ಪರಮೋಚ್ಚ ರಹಸ್ಯವೇನೆಂದರೆ ಉತ್ತಮಂ ರಹಸ್ಯಂ ಏನೆಂದರೆ ಪುರುಷೋತ್ತಮನದು. ಆತನೇ ಪರಮೋಚ್ಚ ಮಹಾದೇವ, ದೇವಾಧಿದೇವ; ಆತನಲ್ಲಿ ಎರಡೂ ಇವೆ, ಅನಂತತೆಯೂ ಇದೆ, ಸಾಂತತೆಯೂ ಇದೆ, ಆಕಾರವೂ ಇದೆ, ನಿರಾಕಾರವೂ ಇದೆ, ಸಗುಣವೂ ಇದೆ ನಿರ್ಗುಣವೂ ಇದೆ, ಏಕವೂ ಇದೆ ಅನೇಕವೂ ಇದೆ, ಭವವೂ ಇದೆ ಭವಿತವ್ಯವೂ ಇದೆ, ಸಂಭಾವ್ಯವೂ ಇದೆ, ಭೂತವೂ ಇದೆ, ಸಂಭೂತಿಯೂ ಇದೆ, ವಿಶ್ವಾತ್ಮಕ ಕಾರ್ಯವೂ ಇದೆ ವಿಶ್ವಾತೀತ ಶಾಂತಿಯೂ ಏಕಕಾಲಕ್ಕೆ ಇದೆ. ಪ್ರವೃತ್ತಿ ಹಾಗೂ ನಿವೃತ್ತಿ ಎರಡೂ ಏಕಕಾಲಕ್ಕೆ ಇವೆ, ಪರಸ್ಪರ ಸ್ನೇಹಿತರಂತೆ ಒಂದುಗೂಡಿ ಇವೆ, ಒಂದು ಇನ್ನೊಂದನ್ನು ಆಧರಿಸಿಕೊಂಡು, ಆವರಿಸಿಕೊಂಡು, ಆಧೀನಪಡಿಸಿಕೊಂಡು ಒಂದು ಇನ್ನೊಂದರ ಆಧೀನದಲ್ಲಿ ಇರುತ್ತವೆ, ಪರಮ ಪುರುಷನಲ್ಲಿ ಎಲ್ಲವೂ ತಮ್ಮ ಪರಮ ರಹಸ್ಯವನ್ನು ಕಂಡುಕೊಳ್ಳುತ್ತವೆ ಹಾಗೂ ತಮ್ಮ ಕೇವಲ ಸಮನ್ವಯವನ್ನು ದರ್ಶಿಸುತ್ತವೆ, ಅನುಭವಿಸುತ್ತವೆ.

ಸತ್ತೆಯ ಅಸ್ತಿತ್ವದ ಸತ್ಯದ ಮೇಲೆಯೇ ಕರ್ಮದ ಸತ್ಯವೂ ಅವಲಂಬಿತವಾಗಿರುತ್ತದೆ. ಸಕ್ರಿಯ, ಕ್ರಿಯಾಶೀಲ ಅಥವಾ ಚಲನಶೀಲ ಅಸ್ತಿತ್ವವು ಆಂತರಿಕವಾಗಿ ಪ್ರಕೃತಿಯು ಪುರುಷನಿಗೆ ಅರ್ಪಿಸುವ ಕರ್ಮಸ್ವರೂಪಿ ಯಜ್ಞವೇ ಆಗಿರುತ್ತದೆ ಅಥವಾ ಪ್ರಕೃತಿಯು (ನಿಸರ್ಗವು Nature) ಪುರುಷೋತ್ತಮನಿಗೆ ಅರ್ಪಿಸುವ, ಅನೇಕ ಜೀವಿಗಳ ರೂಪದಲ್ಲಿನ ಅಸಂಖ್ಯಾತ ಬಯಕೆಗಳನ್ನು, ಸಾಂತದ ಆಶೋತ್ತರಗಳನ್ನು ಅನಂತನಿಗೆ ಸಮರ್ಪಣೆ ಮಾಡುವ ಯಜ್ಞವೇ ಆಗಿರುತ್ತದೆ. ನಮ್ಮ ಜೀವವೆಂಬುದೊಂದು ಯಜ್ಞವೇದಿಕೆ ಇದ್ದ ಹಾಗೆ, ಪ್ರಕೃತಿಯು ನಮ್ಮಗಳ ಮೂಲಕ ಮಾಡುವ ಕರ್ಮಗಳನ್ನು ಕರ್ಮ ಫಲಗಳನ್ನು ಅದರಲ್ಲಿ ಆಹುತಿ ಮಾಡುತ್ತದೆ. ಪರಮಾತ್ಮನ ಬಗ್ಗೆ ತನಗಿರುವ ಯಾವುದೊಂದು ರೀತಿಯ ಪರಿಕಲ್ಪನೆ ಅಥವಾ ಮುಖಕ್ಕೆ, ಅದರಲ್ಲಿರುವ ಚೈತನ್ಯಕ್ಕೆ ಅರ್ಪಿಸುತ್ತದೆ. ಫಲ, ಪ್ರತಿಫಲರೂಪವಾಗಿ ಏನೇ ಬರಲಿ ಅದು ಆಯಾ ಸಾಂತ ಪ್ರತ್ಯೇಕ ಜೀವಿಗೆ ತಾತ್ಕಾಲಿಕ ಅಥವಾ ಆತ್ಯಂತಿಕ ಕಲ್ಯಾಣ ಕಾರಕವೇ ಆಗಿರುತ್ತದೆ. ಯಾವ ಜೀವಿಯು (ಅಥವಾ ಆತ್ಮವು) ಪ್ರಜ್ಞೆಯ ಯಾವ ಹಂತವನ್ನು ತಲುಪಿದೆಯೋ, ಅಂದರೆ ಪ್ರಕೃತಿಯಲ್ಲಿ ಎಷ್ಟರ ಮಟ್ಟಿಗೆ ವಿಕಾಸ ಹೊಂದಿದೆಯೋ ಅದಕ್ಕನುಗುಣವಾಗಿಯೇ ಆಯಾ ಪ್ರತ್ಯೇಕ ಜೀವಿಯು ತನಗೆ ಇಷ್ಟವಾದ ಪ್ರತ್ಯೇಕ ದೇವತೆಯನ್ನಾಯ್ದುಕೊಂಡು ಆರಾಧಿಸುತ್ತದೆ. ತನಗೆ ಇಷ್ಟವಾದ ಆನಂದವನ್ನು ಅನುಸರಿಸಿ ಅವನು ಯಜ್ಞವನ್ನು ಕೈಕೊಳ್ಳುತ್ತಾನೆ. ಪ್ರಕೃತಿಸ್ಥ ಅಂದರೆ ಕ್ಷರ ಪುರುಷನ ವ್ಯವಹಾರದಲ್ಲಿ ಎಲ್ಲವೂ ಅನ್ಯೋನ್ಯ ವಿನಿಮಯ ಯಜ್ಞವಾಗಿರುತ್ತದೆ; ಏಕೆಂದರೆ ಇಡೀ ಅಸ್ತಿತ್ವವೆಲ್ಲ, ಜೀವನವೆಲ್ಲ ಒಂದೇ ಆಗಿದ್ದು ಎಲ್ಲ ಭಾಗ–ವಿಭಾಗಗಳು ಅನನ್ಯ ಅವಲಂಬನವನ್ನನುಸರಿಸುವುದು ಸಹಜವೂ, ಅವಶ್ಯಕವೂ ಆಗಿದೆ. ಒಂದೊಂದು ಭಾಗವು ಇನ್ನೊಂದರ ಸಹಕಾರ, ಸಹಾಯ ಪಡೆದುಕೊಂಡು ಬೆಳೆಯುವುದು ಸಹಜವೂ ಹೌದು, ನಿಯಮವೂ ಹೌದು. ಈ ರೀತಿಯ ವಿನಿಮಯ ರೂಪದ ಯಜ್ಞವು ಸಹಜವಾಗಿ, ಸ್ವ–ಇಚ್ಛೆಯಿಂದ ನಡೆಯದೇ ಹೋದರೆ ಪ್ರಕೃತಿಯು ಆಗ ಬಲಪೂರ್ವಕವಾಗಿ ಕಸಿದುಕೊಳ್ಳುತ್ತದೆ ಅಥವಾ ತೆಗೆದುಕೊಳ್ಳುತ್ತದೆ. ಏಕೆಂದರೆ ಅದು ಅಸ್ತಿತ್ವದ, ಜೀವನದ ನಿಯಮವನ್ನು ಪೂರ್ತಿ ಮಾಡಲೇಬೇಕಿದೆ. ಪರಸ್ಪರ ಕೊಡು–ಕೊಳ್ಳುವಿಕೆ ಅಥವಾ ವಿನಿಮಯವೇ ವಿಶ್ವ ಜೀವನದ ನಿಯಮ, ಈ ನಿಯಮಕ್ಕೆ ವಿರುದ್ಧವಾಗಿ ಅದು ಕ್ಷಣ ಕೂಡ ನಡೆದುಕೊಳ್ಳಲಾರದು ಮತ್ತು ಈ ನಿಯಮವೇ ವಿಶ್ವ ನಿಯಾಮಕನ ಸೃಷ್ಟಿಯ ಮುದ್ರೆಯಾಗಿದ್ದು, ಯಜ್ಞವೇ ಏಕೈಕ

ನಿಯಮ ಮತ್ತು ಇದರ ಮೂಲಕ ಆ ಯಜ್ಞ ಪ್ರಭುವು ಸೃಷ್ಟಿಯ ಜನನ ಮತ್ತು ಸ್ಥಿತಿ ಅಥವಾ ಜೀವನವನ್ನು ಕಲ್ಪಿಸುತ್ತಾನೆ. ಯಜ್ಞದ ಈ ವಿಶ್ವಾತ್ಮಕ ನಿಯಮವು ಈ ವಿಶ್ವವೆಲ್ಲವೂ ಪರಮಾತ್ಮನ ಅಧೀನ, ಅವನಿಗೇ ಸೇರಿದ್ದು, ಈ ಜೀವನವು ಅವನ ಕ್ಷೇತ್ರ ಅಥವಾ ಅವರ ಆರಾಧನೆಯ ಸ್ಥಳ; ಇದು ನಮ್ಮ ಸ್ವ–ಸಂತೋಷ, ಕಾಮನಾತೃಪ್ತಿ, ವೈಯಕ್ತಿಕ ಅಹಂ ನಿಮಿತ್ತವಾದ ಭೋಗ ಎಂದು ಭಾವಿಸಲಾಗದು. ಇಲ್ಲಿ ಅಹಂ ತೃಪ್ತಿಗೆ ಸ್ಥಾನವಿಲ್ಲ – ಇದು ಕೊನೆಯ ನಿಯಮಲ್ಲ, ಕೇವಲ ಆರಂಭದ ನಿಯಮ ಅಥವಾ ಹೆಜ್ಜೆ ಅಷ್ಟೇ – ಪರಮಾತ್ಮನ ಸಂಶೋಧನೆ, ಅವನಿಗಾಗಿ ಹುಡುಕಾಟ, ಅವನ ಆರಾಧನೆ, ಅನಂತನಾದ ಪರಮಾತ್ಮನ ಪ್ರಾಪ್ತಿ ಇದು ಅಂತಿಮ ಉದ್ದೇಶ ಹಾಗೂ ಗುರಿ. ಯಜ್ಞವನ್ನು ವೈಶಾಲ್ಯೀಕರಿಸುತ್ತ ಆತ್ಮನನ್ನೇ ಆಹುತಿಯಾಗಿ ಅರ್ಪಿಸಲು ಸಿದ್ಧನಾದಾಗ, ಯಜ್ಞದ ಸಾರ್ಥಕತೆ ಕೈಗೂಡುವುದು. ಆಗ ಜೀವಕ್ಕೆ ಉನ್ನತ ಆಧ್ಯಾತ್ಮಿಕ ಅನುಭವ ಆಗುವುದು.

ಆದರೆ ವೈಯಕ್ತಿಕವಾಗಿ, ವ್ಯಕ್ತಿಗತವಾಗಿ ಪ್ರತಿ ಕ್ಷೇತ್ರದಲ್ಲಿ ವ್ಯಕ್ತಿಯು ಅಜ್ಞಾನದಿಂದಲೇ ಕಾರ್ಯ ಆರಂಭ ಮಾಡುತ್ತಾನೆ, ಬಹುಕಾಲ ಅಜ್ಞಾನದಲ್ಲಿಯೇ ಅವನ ಕಾರ್ಯ ಮುಂದುವರಿಯುತ್ತದೆ. ತನ್ನ ಬಗ್ಗೆ ಅತೀವ ಕಾಳಜಿ ಹಾಗೂ ಗಮನ ಇರುವ ವ್ಯಕ್ತಿಯು ಎಲ್ಲದಕ್ಕೂ ಅಹಂನೇ ಕಾರಣ ಎಂದು ಭಾವಿಸುತ್ತಾನೆ, ಅದೇ ಜೀವನದ ಅರ್ಥವೆಂದೂ ತಿಳಿಯುತ್ತಾನೆಯೇ ವಿನಃ ಎಲ್ಲದಕ್ಕೂ ಪರಮಾತ್ಮನೇ ಕಾರಣ ಎಂಬುದನ್ನು ಮನಗಾಣುವುದಿಲ್ಲ. ಎಲ್ಲ ಕೆಲಸಗಳನ್ನು ತಾನೇ ಮಾಡುತ್ತೇನೆ ಎಂದೇ ಅವನು ತಿಳಿಯುತ್ತಾನೆ, ತನ್ನ ಅಸ್ತಿತ್ವದ ಎಲ್ಲ ಚಟುವಟಿಕೆಗಳು, ಚಲನೆ, ಕ್ರಿಯೆಗಳು – ತನ್ನ ಆಂತರಿಕ ಹಾಗೂ ಬಾಹ್ಯ ಹೀಗೆ ಎಲ್ಲ ಬಗೆಯ ಚಟುವಟಿಕೆಗಳು ನಿಜವಾಗಿ ವಿಶ್ವ ಪ್ರಕೃತಿಯ ಕಾರ್ಯಗಳೇ ಆಗಿವೆ ಎಂಬುದನ್ನಾತ ತಿಳಿಯುವುದಿಲ್ಲ. ತಾನೇ ತನ್ನ ಕರ್ಮಗಳ ಭೋಕ್ತ ಎಂದೂ, ಇಡೀ ಪ್ರಕೃತಿಯು ತನ್ನ ಸಂತೋಷ ನಿಮಿತ್ತವಾಗಿಯೇ ಇದೆ ಎಂದೂ, ಪ್ರಕೃತಿಯು ತನ್ನೆಲ್ಲ ಬಯಕೆಗಳನ್ನು, ಕಾಮನೆಗಳನ್ನು ತೃಪ್ತಿ ಪಡಿಸಲೇಬೇಕೆಂದು ಅವನ ಹಠ. ಆದರೆ ಪ್ರಕೃತಿಯು ತನ್ನದೇ ಆದ ಹಿರಿದಾದ ನಿಯಮವನ್ನು, ದೈವೀ ನಿಯಮವನ್ನು ಪಾಲಿಸುವುದೇ ಹೊರತು ಯಾವುದೇ ವ್ಯಕ್ತಿಯ ವ್ಯಕ್ತಿಗತ ಬಯಕೆಯನ್ನು ತೃಪ್ತಿ ಪಡಿಸಲು ಅದು ಎಳ್ಳಷ್ಟೂ ಪ್ರಯತ್ನಿಸುವುದಿಲ್ಲವೆಂಬುದನ್ನು ಅವನು ಬೇಗನೇ ಗ್ರಹಿಸುವುದೇ ಇಲ್ಲ.

(ಸಶೇಷ)

# ಶ್ರೀ ಅರವಿಂದರ ಕಾವ್ಯ
# “ಈಲಿಯನ್”

**– ಅನುವಾದ: ಡಾ॥ ಬಿ.ಆರ್. ಭೀಡ್, ರಾಯಚೂರು**

**ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/6)**

233–234. ಶಕ್ತಿಗೆ ಸಹಾಯ ಬಲವೇ; ವೈಭವಕ್ಕೆ ಆಸರೆ ವೈಭವವೇ. ಹಾಗೆ ಸೌಂದರ್ಯವು ಕೂಡ ಟ್ರಾಯ್ ನಗರದ ಆಶ್ರಯ ಹೊಂದಿ, ಅದರ ಮಡಿಲಲ್ಲೇ ಮಲಗಿದಹಾಗಿತ್ತು. (1.68)

234–237. ಆರ್ಗೈವ್ Argive (ಗ್ರೀಕ ದೇಶದ ಪ್ರಾಚೀನ ಹೆಸರು) ಯೋಧರನ್ನು ದೇವತೆಗಳು ಹಾಗೆಯೇ ನೋಡುತ್ತಲೇ ಇದ್ದುಬಿಟ್ಟಿದ್ದಾರೆ. ಅವರೇನೋ ಬದಲಾವಣೆ ಇಲ್ಲದ, ಮುಪ್ಪೇ ಅಡರದ ದೇವತೆಗಳು. ಅವರು ದೂರದಲ್ಲಿ ನಿಂತುಕೊಂಡೇ ಮುಂದಿನದನ್ನು ನೋಡುತ್ತಿದ್ದಾರೆ.

ಗ್ರೀಕ ಯೋಧನಾದ ಟಾಲ್ಥೀಬಿಯಸ್ ಟ್ರಾಯ್ ರಾಜ್ಯವನ್ನು ಹೇಗೆ ದ್ವೇಷದಿಂದ ಸಿಟ್ಟಿನಿಂದ ನೋಡುತ್ತ ಮುನ್ನಡೆಯುತ್ತಿದ್ದಾನೋ ಅದೇ ರೀತಿ, ದೇವತೆಗಳಾದರೂ ಸಹ ಅಸಹಾಯಕರಂತೆ ಮೂಕರಾಗಿ ಸುಮ್ಮನೇ ನೋಡುತ್ತ ನಿಂತಿದ್ದಾರೆ. ಅವರಿಗೆ ಹಿಂದಿನ ಗತಕಾಲವೆಲ್ಲ ಗೊತ್ತು, ಮುಂದಿನ ಭವಿಷ್ಯ ಮಾತ್ರ ಗೊತ್ತಿಲ್ಲ. ಅವರೂ ಸಹ ಮುಂದೇನಾದೀತೆಂಬುದನ್ನು ಕುತೂಹಲದಿಂದ, ಅತಂಕದಿಂದ ನೋಡುತ್ತ ನಿಂತಿದ್ದಾರೆ. (1.69)

237–238. ಸುಂದರವಾಗಿದ್ದ ಟ್ರಾಯ್ ನಗರವನ್ನು ಅತಿ ಕ್ರೂರವಾದ ದೃಷ್ಟಿಯಿಂದ ನೋಡುತ್ತ ಆ ವೃದ್ಧ ಗ್ರೀಕ ಮುನ್ನಡೆಯುತ್ತಿದ್ದಾನೆ. ಅವನ ಮುಖದ ಮೇಲೆ ಮುಂದಿನ ವಿನಾಶದ ಮುನ್ಸೂಚನೆಯ ಲಕ್ಷಣಗಳಿವೆ. ಇಡೀ ಗ್ರೀಕ ದೇಶವೇ ಅವನ ಕಣ್ಣುಗಳ ಮೂಲಕ ಟ್ರಾಯ್ ನತ್ತ ನೋಡುತ್ತಿದೆ. ಅತಿಯಾದ ದ್ವೇಷದ ಜೊತೆಗೆ ತುಸು ಮೆಚ್ಚುಗೆಯ ಭಾವವೂ ಬೆರೆತಿದೆ. ತುಸು ಹೆದರಿಕೆಯೂ ಇದೆ, ಆದರೆ ನಿಷ್ಕಾಳಜಿಯ ಭಾವವೂ ಇದೆ. (1.70)

ಈಗ ಟ್ರಾಯ್ ವೀರ ಡೀಫೋಬಸ್ ಕ್ರುದ್ಧ ಸ್ವರದಲ್ಲಿ ಮಾತನಾಡಲು ಆರಂಭಿಸಿದ. ತನ್ನ ಉದ್ವೇಗವನ್ನು ಆದಷ್ಟು ತೋರಗೊಡದೇ, ಟ್ರೋಜನರ ಮೇಲೆ ಬಿದ್ದಿರುವ ದೇವತೆಗಳ ಕೆಟ್ಟ ದೃಷ್ಟಿಯನ್ನು ಎದುರಿಸುವಂತೆ, ಅವನು ನೇರವಾಗಿ ಮಾತನಾಡಲು ತೊಡಗಿದ: Achaia (ಗ್ರೀಕ) ರಾಜದೂತನಾದ ನೀನು ಇಷ್ಟು ಬೆಳಗಿನ ಜಾವದಲ್ಲಿ ನಿನ್ನ ರಥವನ್ನು ನೀನೇ ನಡೆಸಿಕೊಂಡು ಬಂದಿರುವಿ. ನಮ್ಮಲ್ಲೂ

ಯೋಧರು ಇನ್ನೂ ಮಲಗಿದಾದಾರೆ; ನಮ್ಮ ಪಟ್ಟಣವನ್ನು ಸುತ್ತುವರಿದಿರುವ ನಿಮ್ಮ ಶಿಬಿರಗಳಲ್ಲೂ ಸಹ ನಿಮ್ಮ ಯೋಧರು ಮಲಗಿದ್ದಾರೆ. (1.71)

239–242. ನನಗನಿಸುತ್ತದೆ, ಇದೇನೂ ಒಳ್ಳೆಯ ಲಕ್ಷಣೆ ಅಲ್ಲ. ಗಾಢ ನಡುರಾತ್ರಿಯಲ್ಲಿ ನಿಮ್ಮನ್ನು ಎಬ್ಬಿಸಿ, ನಿದ್ರೆ ಗೆಡುವಂತೆ ಮಾಡಿ, ವೃದ್ಧನಾಗಿರುವ ನಿನ್ನ ದುರ್ಬಲ ಅಂಗಾಂಗಗಳಲ್ಲಿ ಸುಮಾರು ಶಕ್ತಿ ತುಂಬಿ, ನಿನ್ನ ಮನದ ಆಲೋಚನೆಗಳಲ್ಲಿ ಮಹಾ ಸಂಕಲ್ಪ ಶಕ್ತಿತುಂಬಿ, ನಿನ್ನ ಮಾತುಗಳಲ್ಲಿ ವಿಚಕ್ಷಣತೆಯನ್ನು ತುಂಬಿರುವ ಆ ಶಕ್ತಿ ಸಾಮಾನ್ಯ ಮರ್ತ್ಯಮಾನವರದಲ್ಲ, ಅದು ನಮ್ಮ ಕಾರ್ಯಗಳ ಹಿಂದೆ ಅದೃಶ್ಯರಾಗಿ ನಿಂತು ಎಲ್ಲವನ್ನು ವ್ಯವಸ್ಥಿತಗೊಳಿಸುವ ದೇವತೆಗಳಿಂದ ಬಂದುದು. ಅವರು ನಮ್ಮ ಮನಃಪ್ರಾಣ ಶರೀರಗಳನ್ನು ಮಾತುಗಳನ್ನು ತಮ್ಮ ಈಪ್ಸಿತ ಕೆಲಸ ಮಾಡಲು ಉಪಕರಣಗಳನ್ನಾಗಿ ನಿಯೋಜಿಸುತ್ತಾರೆ. (1.72)

243–245. ಆ ದೇವತೆಗಳಿದ್ದಾರಲ್ಲ ಅವರು ನಮ್ಮನ್ನು ದಾಳಗಳಾಗಿ ಉಪಯೋಗಿಸಿಕೊಳ್ಳುತ್ತಾರೆ. ಸದಾ ಪರದೆಯ ಹಿಂದೆ ನಿಂತೋ, ನೆರಳಲ್ಲಿ ಅಡಗಿಕೊಂಡೋ ತಮ್ಮ ಕಾರ್ಯ ಮಾಡುತ್ತಾರೆ. ಒಂದೊಂದು ಸಲ ನಮಗೆ ಗೊತ್ತಾಗದ ರೀತಿಯಲ್ಲಿ ಎಲ್ಲಿಂದಲೋ ಬಂದಂತೆ ಮೇಲೆ ಬಂದು ನಿಲ್ಲುತ್ತಾರೆ, ಕತ್ತಲೆಯಲ್ಲಿ ನಕ್ಷತ್ರಗಳು ತಮ್ಮ ಪೂರ್ಣ ಬೆಳಕಿನಿಂದ ಅಕಸ್ಮಾತ್ತಾಗಿ ಬೆಳಗುವುದಿಲ್ಲವೇ ಹಾಗೆ. ಆ ಬೆಳಕು (ಜ್ಞಾನ, ಶೌರ್ಯ ಎಲ್ಲವೂ) ನಮ್ಮದೇ ಎಂದು ನಾವು ಭಾವಿಸುತ್ತೇವೆ. ಆದರೆ ಅದಾವುದೂ ನಮ್ಮದಲ್ಲ, ಅದು ಅವರದು, ಅವರು ನಮಗೆ ಕೊಟ್ಟ ಗುರುತಿನ ಬಿಲ್ಲೆ (ಟೋಕನ್ token) ಅಥವಾ ವಿರೋಧದ ಪ್ರತಿಕ್ರಿಯೆ (ಕೌಂಟರ್ counter) ತರಹ. ನಮ್ಮೊಳಗೆ ಹರಿದಾಡುತ್ತ ನಮ್ಮ ಮೂಲಕವೇ ಕೆಲಸ ಮಾಡುವ ಶಕ್ತಿಯ ಹರಿವು, ಆದರೆ ಅದರ ಮೂಲ ನಮಗೆ ಗೊತ್ತಿಲ್ಲ, ಇದೇ ರಹಸ್ಯ. (1.73)

ಹೋಗಲಿ ಬಿಡು. ನೀನೀಗ ನಮ್ಮ ಟ್ರಾಯ್‌ಗೆ ಬಂದ ಕಾರಣ ಹೇಳು. ಟ್ರೋಜನ್‌ರಾದ ನಾವೇನೂ ಸಾಮಾನ್ಯರಲ್ಲ, ಮಹಾಶೂರರು, ವೀರರು, ಎಷ್ಟೋ ಕಾಲದಿಂದ ಸಶಕ್ತರಾಗಿ ರಾಜ್ಯ ಮಾಡಿಕೊಂಡಿದ್ದವರು. ಆದರೆ, ನಾವೇನೋ ಬಹುಶಃ ಕಾಲದ ಕೊನೆಯ ಘಟ್ಟದಲ್ಲಿದ್ದೇವೆಯೋ ಏನೋ? ದೇವತೆಗಳೆಲ್ಲ ರೋಸಿಹೋದಂತೆ ಕಾಣುತ್ತದೆ.

Agamemnon ಈಗ ಹೇಳಿಕಳಿಸಿರುವುದು ಏನು? ಗ್ರೀಕರಿಂದ ಟ್ರೋಜನರಿಗೆ ಬಂದ ಸಂದೇಶವೇನು? ಸವಾಲೋ, ಪಂಥಾಹ್ವಾನವೋ, ಅನುಗ್ರಹವೋ ಅಥವಾ ಸಂಧಾನವೋ? (1.74)

246–252. Achaia ಗ್ರೀಕರಿಂದ ಟ್ರೋಜನರಿಗೆ ತಾನು ತಂದ ಪ್ರಳಯ ಸೂಚಕ ಸಂದೇಶವನ್ನು ಬಿತ್ತರಿಸುತ್ತ ರಾಯಭಾರಿ ಟಾಲ್ಥೀಬಿಯಸ್ ಉತ್ತರ ದಿಕ್ಕಿನ ಜೋರಾದ ಗಾಳಿಯಂತೆ ಗಟ್ಟಿಯಾದ ಧ್ವನಿಯಲ್ಲಿ ಹೀಗೆ ಹೇಳಿದನು.

ಟ್ರೋಜನ್ ವೀರ ಡೀಫೋಬಸ್ ನಿನಗೆ ತಿಳಿಯದ್ದೇನಲ್ಲ. ಆದರೂ ಕೇಳು. ಸೂರ್ಯೋದಯ, ಸೂರ್ಯಾಸ್ತ, ರಾತ್ರಿಯ ರುದ್ರ ಮೌನ ಇವೆಲ್ಲ ಸಾಮಾನ್ಯ. ಪ್ರಬಲ ಬಲಿಷ್ಠನಾದ ಸೂರ್ಯ ಕೂಡ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುತ್ತಾನೆ. ಬಲಿಷ್ಠರಿಗೆ ಇವೆಲ್ಲ ಲೆಕ್ಕಕ್ಕಿರುವುದಿಲ್ಲ.

ಆದರೆ ಸೇವಕರಿಗೆ ಇದೆಲ್ಲ ಇಲ್ಲ, ಅವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಸಮಯ ಇಲ್ಲ. ಸಮಯ ಅವರ ಪಕ್ಷದಲ್ಲಿ ಎಂದಿಗೂ ಬರುವುದೇ ಇಲ್ಲ. ಒಮ್ಮೆಲೇ ದೇಹಾವಸಾನ, ದಹನ ಸಂಸ್ಕಾರ, ಆವಾಗಲೇ ನಿದ್ರೆ, ವಿಶ್ರಾಂತಿ ಎಲ್ಲ.

●ಈ ವಾಕ್ಯದಲ್ಲಿ ಆಳರಸರ ಸೇವಕರಿಗಿರುವ ಬಂಧನದ ವಾಸ್ತವಿಕ ಸತ್ಯವನ್ನು ವ್ಯಂಗ್ಯದ ಮೊನಚಿನಿಂದ ಹೇಳುವ ಪರಿ ಬಹಳ ಸುಂದರವಾಗಿದೆ. ಬಲಾಢ್ಯರಿಗೆ, ಆಳರಸರಿಗೆ ಯುದ್ಧವಾಡಲೂ ಸಹ ತಮ್ಮದೇ ಆದ ಬಲವಾದ ಕಾರಣ ಇರುತ್ತದೆ. ಆದರೆ ಆಳುಗಳಿಗೆ ತಮ್ಮದೇ ಆದ ವೈಯಕ್ತಿಕ ಕಾರಣವೂ ಇಲ್ಲ, ವಿಶ್ರಾಂತಿಗೆ ಅವಕಾಶವೂ ಇಲ್ಲ, ಸೇವೆ ಮಾಡುತ್ತ ಮರಣವೇ ಮಹಾವಿಶ್ರಾಂತಿ ಅನ್ನಬೇಕಾದ ವಿಕಟ ಪರಿಸ್ಥಿತಿ ಇರುತ್ತದೆ. ಇದು ವಾಸ್ತವ. ಆದರೆ ಇದನ್ನೇ ಕಟುವಾದ ವ್ಯಂಗ್ಯದ ಮೂಲಕ ವೃದ್ಧ ರಾಜದೂತ ಟಾಲ್ಥೀಬಿಯಸ್ ತನ್ನ ಅನುಭವದ ಮಾತು ಹೇಳುವುದು ಚೆನ್ನಾಗಿದೆ.

ನಾನು ಲೋಕದ ಸಮಸ್ತ ಜನರ ಸಾಮ್ರಾಟನ ಕಡೆಯಿಂದ ಬಂದವನಲ್ಲ. ಅಥವಾ ಭೋರ್ಗರೆವ ಸಮುದ್ರದ ಅಲೆಗಳ ಭರಾಟೆಯ ಮೇಲೆ ಕುಳಿತು ಬರುವ ಬಿರುಗಾಳಿಯ ತರಹ ಕುಳಿತು ನಡೆಸಿದ ಗಡಿಬಿಡಿಯಲ್ಲಿ ಗುಪ್ತ ಸಭೆಯ ಸಮಾಲೋಚನೆಯಿಂದ ಬಂದವನೂ ಅಲ್ಲ.

ರಾಜರ ರಾಜ ಹಾಗೂ ಅನೇಕ ಪ್ರಜಾ ಸಮೂಹದ ಏಕೈಕ ಮಹಾರಾಜನಂತಿರುವ ಗ್ರೀಕ ಅರಸು ನನ್ನನ್ನು ಇಲ್ಲಿಗೆ ಕಳಿಸಿದ್ದಾನೆ. (1.75–79)

246–255. ನಾನು ಥಾಯಿಯಾದ Phthia ಧ್ವನಿ. ನಾನು Helleneನ ಸಂಕಲ್ಪ (ಗ್ರೀಕರು ತಮ್ಮನ್ನು ತಾವು Hellenose, Hellene ಎಂದು ಹೇಳಿಕೊಳ್ಳುತ್ತಾರೆ. ಅದು ಪುರಾತನ ಗ್ರೀಕ ಜನಾಂಗದ ಹೆಸರು) ನನ್ನ ಬಲಗೈಯಲ್ಲಿ ಶಾಂತಿಯನ್ನು ನಿಮಗಾಗಿ ತಂದಿದ್ದೇನೆ. ನನ್ನ ಎಡಗೈಯಲ್ಲಿ ಮೃತ್ಯುವನ್ನೂ ಸಹ ತಂದಿದ್ದೇನೆ.

ಅಭಿಮಾನದಿಂದ, ಗರ್ವದಿಂದ ನೀವು ಅವುಗಳನ್ನು ಸ್ವೀಕರಿಸಬೇಕು, ಪ್ರಬಲನಾದ ಅಕೀಲ್ಸ್ Achilles ನೀಡಿರುವ ಕಾಣಿಕೆಗಳನ್ನು ಗೌರವಿಸಿ. ಏಟ್ Ate ದೇವತೆ ನಿಮ್ಮನ್ನು ವಂಚಿಸಿದರೆ ನೀವು ಮರಣವನ್ನು ಸ್ವೀಕರಿಸಬೇಕಾಗುವುದು, ಆಗ ಮಹಾವಿನಾಶವೇ ನಿಮಗೆ ಸಂಗಾತಿಯಾಗುವುದು. ನಿಮ್ಮ ಭಾಗ್ಯ ತಿರುಗಿದ್ದರೆ, ನಿಮ್ಮೊಳಗಿನ ದೇವತೆಗಳು ನಿಮ್ಮ ಪ್ರಾರ್ಥನೆಗೆ ಮೆಚ್ಚಿದ್ದರೆ ನೀವು ಶಾಂತಿಯನ್ನು ಆಯ್ದುಕೊಳ್ಳುವಿರಿ.

●Ate ಏಟ್ ಅಥವಾ ಈಟ್ ಈಕೆ ಸ್ಯೂಸ್ ಮತ್ತು ಹೀರಾ ಇವರ ಮಗಳು. ಈಕೆ ಅಂಧತ್ವ, ಮೂಢತನ, ಅಪರಾಧ, ತಪ್ಪುಗಳನ್ನು ಸೃಷ್ಟಿಸುವ ದೇವತೆ. ಬಹಳ ಕ್ರೂರಿ ಈಕೆ. ವಿನಾಶ, ಪ್ರಳಯ ಮತ್ತು ಮೃತ್ಯುವನ್ನು ತರುವುದೇ ಈಕೆಯ ಕೆಲಸ.

ನನ್ನ ಎದೆಯಲ್ಲಿ ಇದ್ದುದನ್ನು ಬಾಯಿಯಲ್ಲಿ ಹೇಳಲು ಇನ್ನೂ ಏನೆಲ್ಲ ಮಾತು ತುಂಬಿಕೊಂಡಿದೆ. ಆದರೆ ನಾನು ಹಿಂಜರಿಯುತ್ತಿದ್ದೇನೆ.

ಅವನ್ನೆಲ್ಲ ಓಣಿಗಳಲ್ಲಿ, ಬೀದಿಗಳಲ್ಲಿ, ಪೇಟೆಗಳಲ್ಲಿ ಹಾಗೂ ಇಂಥ ಎಲ್ಲ ಸಾಮಾನ್ಯ ಜನರೂ ಇರುವ ಸಭೆಗಳಲ್ಲಿ ಹೇಳುವುದು ತರವಲ್ಲ. ಆದರೆ, ಜನಜಂಗುಳಿಯಿಲ್ಲದ ಕೇವಲ ರಾಜ ಮತ್ತು ಆಪ್ತ ಸಲಹೆಗಾರ ಸಭೆಗಳಲ್ಲಿ ಹೇಳಬಹುದೇನೋ! ಅಲ್ಲಿ ರಹಸ್ಯ ಮಂತ್ರಾಲೋಚನೆ ಇರುತ್ತದೆ. ಅಲ್ಲಿನ ಸಭಿಕರಿಗೆ ಔಚಿತ್ಯಪೂರ್ಣ ಜ್ಞಾನ ಮತ್ತು ಮುಂದಿನ ಭವಿಷ್ಯದ ಬಗ್ಗೆ ಊಹೆ ಮಾಡಬಲ್ಲ ಸಾಮರ್ಥ್ಯ ಇರುತ್ತದೆ. ಈಲಿಯನ್ನ ರಾಜಕುಮಾರನಾದ ಡೀಫೋಬಸ್ ನೇತೃತ್ವದಲ್ಲಿ ಈ ಸಭೆಯಲ್ಲಿ ನಾನು ಅದನ್ನೆಲ್ಲ ಹೇಳಬಹುದು. (1.80–83)

256–260. ಟಾಲ್ಥೀಬಿಯಸ್ ಮಾತಿಗೆ ಲೋಮಾಡಾನ್ಟಿನ್ ಉತ್ತರಿಸಿದ. ಲೋಮಾಡಾನ್ಟಿನ್ Laomedontian ಇವನೂ ಓರ್ವ ಟರೋಜನ್ ವೀರ, ಓರ್ವ ರಾಜ ಕೂಡ.

“ರಾಜದೂತನೇ, ಆಶಿಲೇಸ್‌ನ ಧ್ವನಿಯೇ, ಶಾಂತಿಯ ಕಾಣಿಕೆಯಲ್ಲಿ ಅದರ ಪ್ರಸ್ತಾವನೆಯಾಗಿ ಧಮಕಿ ಅಥವಾ ಹೆದರಿಸುವ ಪ್ರಯತ್ನವಿದ್ದರೆ ಅದರಿಂದೇನು ಉಪಯೋಗ? ಅದು ನಿಷ್ಪ್ರಯೋಜಕ.

ಆದರೂ ನಾವು ನಿನ್ನ ಮಾತು ಕೇಳುತ್ತೇವೆ.

ಅಲ್ಲಿ ಬಾಗಿಲಲ್ಲಿ ಯಾರಿದ್ದೀರಿ? ಜೋರಾಗಿ ಓಡಲು ಕಾಲಲ್ಲಿ ಕಸು ಉಳ್ಳವರು ಯಾರಿದ್ದೀರಿ? ಬನ್ನಿ.

ನೀನು, ಥ್ರಾಸಿಮ್ಯಾಕಸ್ ನೀನೇ ಧಾವಿಸು.

ಐಲಸ್‌ನ ಅಂತಃಪುರದಲ್ಲಿ ಎಲ್ಲರನ್ನೂ ನಿದ್ರೆಯಿಂದ ಎಚ್ಚರಿಸು. ಈ ಹೆಲ್ಲೆನ್ನರ ಚಾಲೆಂಜಿನ ವಿಷಯ ಎಲ್ಲರಿಗೂ ತಿಳಿಯಲಿ.

ಏನಿಸ್ ನನ್ನು ಕರೆದು ತಾ.

•ಐಲಸ್ ಅಂದರೆ ಈಲಿಯನ್.

•ಏನಿಸ್ Aeneas ಇವನು ಟ್ರೋಜನ್ ಅರಸು ಪ್ರೈಯಾಮ್‌ನ ಮೊದಲ ಅಜ್ಜನ ಮಗ; ಇವನು Anchesis ಹಾಗೂ ಗ್ರೀಕ ದೇವತೆ Aphroditeನ ಸಂತಾನ. ಇವನೂ ಸಹ ಟ್ರೋಜನರ ಪಾಳಯದಲ್ಲಿನ ವೀರಯೋಧ.

•ಈ ಪದಪುಂಜ ಗಮನಿಸಿ Hellene challenge: ಮೊದಲ ಸ್ವರಗಳ ಧ್ವನಿಯು ಪ್ರಾಸಬದ್ಧವಾಗಿದೆ. ಇದನ್ನು head rhymes ದೃಷ್ಟಿಯಿಂದ alliterationನಲ್ಲಿಯೇ ಸೇರಿಸಲಾಗುವುದು. (1.84–89)

261–267. ಲಾವೋಮೆಡಾಂಟಿನ್‌ನ ಮಾತು ಇನ್ನೂ ಮುಗಿದಿರಲಿಲ್ಲ, ಥ್ರಾಸಿಮ್ಯಾಕಸ್ ಓಡಲು ಮೊದಲು ಮಾಡಿಬಿಟ್ಟಿದ್ದ. ತನ್ನ ಗವಸು, ಭಾರವಾದ ಕವಚ ಎಲ್ಲ ಕಳಚಿ ಧಾವಿಸಿದ. ಥ್ರಾಸಿಮ್ಯಾಕಸ್ ತುಂಬ ಚಟುವಟಿಕೆಯ ಯುವಕ. ಅವನು ಟ್ರೋಜನ ವೀರ ಅರೀಟಸ್‌ನ ಮಗ. ಅವನು ಓಡುವಲ್ಲಿಯೂ ಮೊದಲಿಗನೇ, ಯುದ್ಧದಲ್ಲೂ ಮೊದಲಿಗನೇ.

ಸೂರ್ಯ ಕಾಣಿಸುವ ಹೊತ್ತಿಗಾಗಲೇ ಆತ ಕಣ್ಣಿಗೆ ಕಾಣದಷ್ಟು ದೂರ ಹೋಗಿದ್ದ.

ಇತ್ತ ಡೀಫೋಬಸ್ ನಿಧಾನವಾಗಿ ಕಾಲೆಳೆಯುತ್ತ ಸಾಗಿದ. ಅವನ ಮನದಲ್ಲಿ ತುಮುಲ ನಡೆದಿದೆ. ಮುಂದೇನು ವಿಧಿ ಕಾಣಲಿಕ್ಕಿದೆಯೋ ಎಂಬ ಆತಂಕದಿಂದ ಹೃದಯ ಭಾರವಾಗಿದೆ, ಭಾವ ತುಂಬಿ ಬಂದಿದೆ. ಅವನ ಆತ್ಮ ವಿಚಲಿತವಾಗಿದೆ. ಏನಾದೀತು, ಏನಾಗಬಹುದೆಂದು ಲೆಕ್ಕ ಹಾಕುತ್ತಲಿದ್ದಾನೆ. ಆಳ ಹತ್ತಲೊಲ್ಲದು. ಮೆಟ್ಟಲು ಇಳಿದು ತನ್ನ ಮನೆಯತ್ತ ನಡೆದ. ಆರ್ಗೈವ್ Argive ಅಂದರೆ ಗ್ರೀಕರ ಹೆಜ್ಜೆಗೆ ಸಮನಾಗಿ ಹೆಜ್ಜೆ ಹಾಕಬೇಕೆಂದುಕೊಳ್ಳುತ್ತ ತನ್ನ ನಡಿಗೆಯ ವೇಗವನ್ನು ತ್ವರಿತಗೊಳಿಸಿ ಸಾಗತೊಡಗಿದ. (1.90–92)

(ಸಶೇಷ)

# ಯುಗಳಾವತಾರದ ರಹಸ್ಯ

**– ಪುಟ್ಟು ಕುಲಕರ್ಣಿ**

ಪ್ರಸ್ತುತ **ಯುಗಧರ್ಮವು 'ಸ್ತ್ರೀ–ಪುರುಷ ಸಮತೆ'**ಯಾಗಿದೆ. ಇದೇ ಈ ಯುಗದ ಅಸ್ಮಿತೆಯೂ ಹೌದು. ಪುರುಷೋತ್ತಮ ಭಾವದ ಚಿಂತನದ ವಿಕಾಸದ ನಂತರದಲ್ಲಿ, ನಿಯತಿಯ ಅನುಗುಣವಾಗಿಯೇ ಅದು ತನ್ನ ಪೂರ್ವ ಪರಂಪರೆಯನ್ನೇ – ಅಂದರೆ ವೈಶ್ವಿಕ ನಿಯತಿಯಲ್ಲಿಯೇ ಸಮತೆಯ ಸ್ವರೂಪದಲ್ಲಿದ್ದ ಆಯಾಮವನ್ನು ಪರಿಪೂರ್ಣಗೊಳಿಸಿಕೊಳ್ಳುತ್ತಿದೆ. ಈ ರಹಸ್ಯವನ್ನು ಶ್ರೀ ಅರವಿಂದರು ತಮ್ಮ ಯೋಗ ಸಾಧನೆಯ ಫಲಿತವಾಗಿ **'ಸಾವಿತ್ರಿ'**ಯಲ್ಲಿ ಮಂತ್ರ ಸ್ವರೂಪದಲ್ಲಿ ರೂಪಿಸಿದ್ದಾರೆ. ಮಾನವನ ಚಿಂತನಾ ವಿಕಾಸದ ಪ್ರಾರಂಭಿಕ ಹಂತದೊಳಗೆ, ಮಾತೃದೇವತೆಯೇ ಪ್ರಮುಖವಾಗಿದ್ದಳು. ಸರ್ವಸ್ವವೂ ಶ್ರೀಮಾತೆಯ ಮೂಲಕವೇ ಸಾಕಾರಗೊಳ್ಳುವದನ್ನು ಕಂಡ, ಅಚ್ಚರಿಗೊಂಡ ಮಾನವ ಆರಾಧನಾ ಮನೋಭಾವದಲ್ಲಿ **'ಆದಿ ಶಕ್ತಿ'**ಯ ಹಂತದವರೆಗೂ ತನ್ನ ಚಿಂತನವನ್ನು ಊರ್ಧ್ವಗೊಳಿಸಿಕೊಂಡ. ಕ್ರಮೇಣ ಕ್ರಮೇಣ ಅಲ್ಲಿ ಪುರುಷ ಸ್ವರೂಪದ ಅಸ್ತಿತ್ವದ ಆಯಾಮವನ್ನು ಅರಿತ ಮೇಲೆ, ಅದನ್ನು **'ಶಿವ–ಶಕ್ತಿ'** ಎಂದು ವಿಂಗಡಿಸಿಕೊಂಡರೂ, **'ಅರ್ಧನಾರೀಶ್ವರ'** ಸ್ವರೂಪದಲ್ಲಿ ಅದನ್ನೇ ಸಂಯೋಗಗೊಳಿಸಿಕೊಂಡು ಆನ್ವೇಷಣೆ ಪ್ರಾರಂಭಿಸಿದ.

## ಆತ್ಮಕಿದೆ ಸೂಕ್ಷ್ಮ– ಭೂಕಂಠ–ಸೇತು

ಈ **ಶಿವ–ಶಕ್ತಿಯ** ಅಥವಾ **ಪುರುಷ–ಪ್ರಕೃತಿಯ** ಸ್ವರೂಪವನ್ನು ಶ್ರೀಅರವಿಂದರು ವಿವರ ವಿವರವಾಗಿ ತಿಳಿಸಿದ್ದಾರೆ. ಆಯಾ ಯುಗದ ಬದುಕಿನ ವಿಧಾನವನ್ನು ಅನುಸರಿಸಿಕೊಂಡು ರೂಪಾಂತರ ಹೊಂದುತ್ತಿರುವ ಭಾಷಾ ವ್ಯವಸ್ಥೆಯಲ್ಲಿ ಇದನ್ನು ಅತ್ಯಂತ ಕೌಶಲ್ಯಪೂರ್ಣವಾಗಿ ಸಮ್ಮಿಲನಗೊಳಿಸಿ ಚಿಂತನದ ಆಯಾಮವನ್ನು ಕೊಟ್ಟಿದ್ದಾರೆ. ಇಲ್ಲಿರುವ ಸಾಂತದ (ಜಗತ್ತಿನ) ಜೊತೆಗೆ ಮಾನವನ ಮನಸ್ಸು(ಚಿತ್ತ) ಹೇಗೆ ಸಮರಸದಲ್ಲಿ ಪರಿಪೂರ್ಣವಾಗುತ್ತದೆ, ಮತ್ತು ಆ ರೀತಿ ಸಮರಸವಾಗುತ್ತಿದ್ದರೂ ತಮ್ಮ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಸೃಷ್ಟಿಯ ರಹಸ್ಯವನ್ನು ಇನ್ನೂ ನಿಗೂಢಗೊಳಿಸಿಕೊಳ್ಳುತ್ತವೆ

ಎಂದು ತಿಳಿಸುವಲ್ಲಿ, ಇವೆರಡರ ಮಧ್ಯದಲ್ಲಿ ಇರುವ ವಿಭಜನೆಯ ಚಿಹ್ನೆಯೇ ಕೂಡು–ಚಿಹ್ನೆಯಾಗುವ ಪ್ರಕ್ರಿಯೆಯನ್ನು ತಿಳಿಸಿದ್ದಾರೆ.

ಇಲ್ಲಿ ಆರೋಹಗೊಳ್ಳುತ್ತಿರುವ ಆತ್ಮಕ್ಕೆ ಜೋಡು–ಸಂಪರ್ಕ ಕೊಂಡಿಯಾಗಿ **ಭೂಕಂಠ–ಸೇತು**ವಾಗಿ ಇದು ಲೀಲೆಗೊಳ್ಳುತ್ತದೆ. ಭೂಕಂಠ ಎನ್ನುವದು ಸಂಯೋಗ ಭೂಮಿ ಎಂತಲೂ ಮತ್ತು ಸಂಧಿ ಸ್ಥಳವೆಂತಲೂ ಬಳಕೆಯಲ್ಲಿದೆ. ಭೂಗೋಳ ಶಾಸ್ತ್ರ ಮತ್ತು ಜೀವಶಾಸ್ತ್ರದ ವಿವರಣೆಯಲ್ಲಿ, ಇದನ್ನು ಎರಡು ದೊಡ್ಡ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಇಕ್ಕಟ್ಟಾದ ಭಾಗವಾಗಿದ್ದರೆ/ಶರೀರದಲ್ಲಿ ಅದರಲ್ಲೂ ಕಶೇರುಕಗಳಲ್ಲಿ ಮೆದುಳಿನ ಮಧ್ಯದ ಸಂಪರ್ಕ ಭಾಗವಾಗಿರುತ್ತದೆ. ಈ ಭೂಕಂಠ–ಸೇತು ಎನ್ನುವದು ಭೂಮಿಗೂ ಮತ್ತು ವ್ಯೋಮಕ್ಕೂ ಸಂಪರ್ಕ ಕಲಿಸುವ ಸಲುವಾಗಿಯೇ ರೂಪುಗೊಂಡಿರುವ ವ್ಯವಸ್ಥೆಯಾಗಿದೆ. ಇದೊಂದು ವಿಶ್ವ ಸತ್ಯ. ಈ ರೀತಿಯ ಬಂಧ–ಪತ್ರದಲ್ಲಿಯೇ ಅದರ ವಿಷಯಗಳು ದಾಖಲಿಸಲ್ಪಟ್ಟಿವೆ. ಅವುಗಳನ್ನು ಸದಾ ನವೀಕರಿಸುತ್ತ ಯಾನಗೊಳ್ಳುವದೇ ಮಾನವನ ಕಾರ್ಯವಾಗಬೇಕು. ಅಂದರೆ ಮಾತ್ರ ಆ ಗತದ ದಿವ್ಯ–ಚಿಂತನಗಳನ್ನು ನಮ್ಮ ಹೃದಯ ಸ್ಮರಣೆಯಲ್ಲಿ ಇಟ್ಟುಕೊಳ್ಳಬಹುದು. ಇದು ಪರಿಪೂರ್ಣಗೊಳ್ಳಲು ಇರುವ 'ಐಕ್ಯ ಮಂತ್ರ'ವಾಗಿದೆ. ಇದು ಪುನರ್–ರಚನೆಯಲ್ಲಿ ರೂಪಾಂತರಣಗೊಳ್ಳುತ್ತದೆ. ಇದು ಎಲ್ಲರಿಗೂ ಸುಲಭವಾಗಿ ಸಂವನಗೊಳ್ಳುವಂತೆಯೇ, ನಮ್ಮದೇ ಭಾಷಾ ವ್ಯವಸ್ಥೆಯಲ್ಲಿಯೇ ರೂಪಿಸಿ, "ಆದಿಯಕ್ಕರಕೆ ಅಂತ್ಯದಕ್ಕರವು ಸಮರಸದ ಪರಮ–ನಾದವಾಗಿರುವದನ್ನು ದರ್ಶನಕ್ಕೆ ಲಭ್ಯಗೊಳಿಸುತ್ತಾರೆ. ಆದಿಯಕ್ಕರ (ಆಂಗ್ಲ ಭಾಷೆಯಲ್ಲಿ ಅಲ್ಫಾ); ಇದು 'ಅ'/ಅಂತ್ಯದಕ್ಕರ (ಇಂಗ್ಲೀಷಿನಲ್ಲಿ ಒಮೇಗಾ ಇದ್ದರೆ) ಇದು ನಮ್ಮಲ್ಲಿ 'ಕ್ಷ' ಅಥವಾ 'ಕ್ಷಂ'. ಇದಕ್ಕೇ ಜಗನ್ಮಾತೆಯನ್ನು **'ಅಕ್ಷಮಾಲಾ'** ಎನ್ನುತ್ತಾರೆ. ಈ ಪ್ರಕೃತಿ–ಚೈತನವು ಅಮೃತತ್ವದ ಸ್ವರೂಪದಲ್ಲಿರುತ್ತದೆ. ಇದು ಆಧಾರದಲ್ಲಿ ಆದಿಬಿಂದುವಾಗಿ, ಆ ಊರ್ಧ್ವದಲ್ಲಿ ಅಂತ್ಯಬಿಂದುವಾಗಿರುತ್ತದೆ. ಈ ಎರಡು ತಾಣಗಳ ಮಾಯಕದ ಯೋಜನೆಯಲ್ಲಿ ಮಾನವನ ಆತ್ಮ ವಿಕಾಸಗೊಳ್ಳುತ್ತದೆ.

**ಸ್ವರಗಳು ಅನಂತ; ವ್ಯಂಜನಗಳು ಸಾಂತ.** ವ್ಯಾಕರಣದಲ್ಲೂ ಸಹಿತ ಸ್ವರದ ಸಂಯೋಜನೆ ಇಲ್ಲದೇ 'ಅಕ್ಷರ'ವು ರೂಪುಗೊಳ್ಳುವದಿಲ್ಲ. ವ್ಯಂಜನದೊಂದಿಗೆ ಸಂಯೋಗ ಹೊಂದದಿದ್ದರೂ 'ಸ್ವರ' ಮಾತ್ರ ಅನಂತವಾಗಿಯೇ ಇರುತ್ತದೆ.

'ಅ'ದಿಂದ 'ಕ್ಷ'ದವರೆಗೆ ('ಜ್ಞ'ದ ವರೆಗೆ ಅಲ್ಲ). ಅದಕ್ಕಾಗಿಯೇ 'ಅಕ್ಷರ'ವೆನ್ನುತ್ತಾರೆ. ದೇವಿಗೂ ಸಹಿತ ಅಕ್ಷಮಾಲಾ ಎನ್ನುವ ಹೆಸರಿದೆ. ಇಲ್ಲಿ ಇವೆರಡನ್ನೂ ಸಂಯೋಗಿಸುವ ಒಂದು 'ಸಂಪರ್ಕ ಸೇತು' ಇದ್ದೇ ಇರುತ್ತದೆ. ಆದರೆ ಇವೆರಡೂ ಈ ರೀತಿ ಸಂಯೋಗಗೊಂಡಾಗ ಅಲ್ಲಿ ಮಧ್ಯದಲ್ಲಿ ಒಂದು (– ಹೈಫೆನ್) ಇದ್ದೇ ಇರುತ್ತದೆ. ಆರೋಹಗೊಳ್ಳುವ ಆತ್ಮಕ್ಕೆ ಇದು 'ಸೂಕ್ಷ್ಮ ಭೂಕಂಠ–ಸೇತುವಾಗಿ' ಇರುತ್ತದೆ. ಜಡ ಮತ್ತು ಚೇತನದ ಮಧ್ಯದ ಈ ಸಂಬಂಧವನ್ನು ವಿಶೇಷವಾಗಿ ಅಧ್ಯಯನ ಮಾಡಲಾಗುತ್ತಿದೆ.

ಇಲ್ಲಿ ಅತ್ಯಂತ ಸೂಕ್ಷ್ಮ ವಿಷಯವಾಗಿರುವದೇನೆಂದರೆ, ಈ ಸಂಪರ್ಕ ಸೇತು ಸ್ವತಃ ಶ್ರೀ ಅರವಿಂದರೇ ಆಗಿದ್ದಾರೆ. ಇದನ್ನು ಅವರ ಜನ್ಮ ವರ್ಷವಾಗಿರುವ 1972 ರ ವಿಶ್ಲೇಷಣೆಯಲ್ಲಿ ಕೂಲಂಕಷವಾಗಿ ಅಧ್ಯಯನ ಮಾಡಲಾಗಿದೆ. 1872 ನ್ನು 1+8+7+2 ಇದನ್ನು 9 ಎಂದು ಪರಿಗಣಿಸಲಾಗುತ್ತಿದೆ. ಈ ಅಧ್ಯಯನಕ್ಕೆ Enagram ಎಂದು ಕರೆಯುತ್ತಾರೆ. ಪೂರ್ಣಮಂಡಲದ ಮೊತ್ತ ಅಥವಾ ಮೌಲ್ಯವು ಯಾವಾಗಲೂ 9 ಆಗಿರುತ್ತದೆ. ಈ ಹಂತವನ್ನು ತಲುಪಿದಾಗ ಅದು 'ಯುಗ ಪರಿವರ್ತನೆ'ಯನ್ನು ಸಂಕೇತಿಸುತ್ತದೆ. ಇದರ ಮೌಲ್ಯ 10.

ಇಲ್ಲಿಯೂ ಸಹಿತ 1 ಮತ್ತು 10 ರ ಮೌಲ್ಯವನ್ನು ಈ ಸಂಖ್ಯಾ ತತ್ತ್ವದಲ್ಲಿ 1 (ಒಂದು) ಎಂದೇ ನಿಶ್ಚಿತವಿದೆ. ಇದನ್ನು ವಿವರವಾಗಿ ಕಲಿಸಿಕೊಡುವ 'ಥಿಯೊಸೊಫಿಕಲ್ ಎಡಿಶನ್'' ಎನ್ನುವ ಅಧ್ಯಯನದ ಪರಂಪರೆಯೇ ಇದೆ. ಇಲ್ಲಿ ಇದನ್ನು Gnostic Circle ಎಂದೇ ಕರೆಯುತ್ತಾರೆ. ಸಾವಿತ್ರಿ ಹೇಳುತ್ತಿರುವದು ಈ Gnostic Circle ಬಗೆಗೆ ಎನ್ನುವದು ಮುಖ್ಯ ವಿಷಯ. Nurelli and Bachelet ಎನ್ನುವ ಗಣಿತ ಶಾಸ್ತ್ರಜ್ಞರು ಶ್ರೀ ಅರವಿಂದರ ಜನ್ ವರ್ಷ 1872 ರ ಬಗೆಗೆ ಈ 'ಥಿಯೊಸೊಫಿಕಲ್ ಎಡಿಶನ್'' ವಿಧಾನದಲ್ಲಿ ಅಧ್ಯಯನ ಮಾಡಿ ಪುರಾವಿಸಿದ್ದಾರೆ. ಆದರೆ ನಾವು ದಿನನಿತ್ಯ ಉಪಯೋಗಿಸುತ್ತಿರುವ ಗಣಿತ ಸೂತ್ರಗಳು ಕೇವಲ ಭವಬದುಕಿನ ವಿಷಯಗಳನ್ನು ಮಾತ್ರ ತೋರಿಸುತ್ತಿವೆ.

ಇದೇ ಭೂಕಂಠ–ಸೇತು. ಅಂದರೆ ಸಂಯೋಗ ಭೂಮಿ, ಇದು ನಮ್ಮ ದೇಹದಲ್ಲಿಯೇ ಇದೆ. (ಅವಕಾಶದಲ್ಲಿಯೂ ಈ ವ್ಯವಸ್ಥೆ ಇದೆ) ಶರೀರದ ಎರಡು ದೊಡ್ಡ ಭಾಗಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಇಕ್ಕಟ್ಟಾದ ಜಾಗವಿದು. ಕಶೇರುಕಗಳಲ್ಲಿ ಇದು ಮೆದುಳಿನ ಮಧ್ಯದಿಂದ ಹಿಂಬದಿಗಳಿಗೆ ಸಂಪರ್ಕ

ಕಲ್ಪಿಸುತ್ತದೆ. ಇನ್ನು ದೇಹದಲ್ಲಿ (ಮನುಷ್ಯನಲ್ಲಿ) ಕಶೇರಕ ಸ್ತಂಭವೂ 33 ಬಿಡಿ ಎಲುವುಗಳಿಂದ ರಚಿತಗೊಂಡಿರುತ್ತದೆ. ಭ್ರೂಣಾವಸ್ಥೆಯಲ್ಲಿದ್ದಾಗ ಇರುವ ಈ 33 ಎಲುವುಗಳು, ಜನಿಸಿ ಭೂಮಿಗೆ ಬಂದಾಗ ಕೇವಲ 26 ಮಾತ್ರ ಉಳಿದುರುತ್ತವೆ. ಕೆಲವು ವೈವಿಧ್ಯತೆಯ ಅಭಿವ್ಯಕ್ತಿಯಲ್ಲಿ ಪುಚ್ಛವಾಗಿ ಪರಿವರ್ತಿತಗೊಂಡ ವ್ಯವಸ್ಥೆಯೂ ಇದೆ.

ಇಂಗ್ಲೀಷಿನಲ್ಲಿಯೇ ಆಗಲಿ ಅಥವಾ ಭಾರತದಲ್ಲಿ, ಈಗ ಪ್ರಚಲಿತದಲ್ಲಿ ಬಳಕೆಯಲ್ಲಿರುವ ಭಾಷಾ ವ್ಯವಸ್ಥೆಯಲ್ಲಿ ಈ ರೀತಿಯ ಖಭೌತೀಯ ನೆಲೆಯ ವಿಷಯಗಳ ಪ್ರತಿಪಾದನೆ ಕಡಿಮೆ. ಇಲ್ಲವೇ ಇಲ್ಲವೆಂದರೂ ತಪ್ಪಲ್ಲ. ಅದರಲ್ಲೂ ರಶಿಯಾದ ಯೂರಿ ಗಗಾರಿನ್ (ಪ್ರಥಮ ಖಗೋಳ ಯಾನಿ) ಹಾಗೂ ಅಮೇರಿಕಾದವರು ಸಾಧಿಸಿದ್ದಾರೆ ಎನ್ನಲಾಗುತ್ತಿರುವ 'ಚಂದ್ರನ ಮೇಲೆ ಮಾನವ' – ನೀಲ ಆರ್ಮಸ್ಟ್ರಾಂಗ್ ಘಟನೆಗಳ ನಂತರ, ಹಾಗೂ ಇದೀಗ ನಮ್ಮ ಸಂಪೂರ್ಣ **'ಸಂವಹನಾ ವ್ಯವಸ್ಥೆಯೂ'** ಸೆಟಲೈಟ್ ಆಧರಿಸಿಯೇ ರೂಪುಗೊಳ್ಳುತ್ತಿರುವದರಿಂದ, ಈ ಭೂಮಿಗೆ ಹೊಂದಿಕೊಂಡು ಇರುವ ಖಭೌತೀಯ ನೆಲೆಯ ವಿಷಯಗಳು, ಇವುಗಳನ್ನು ಈ ಅವಕಾಶದಲ್ಲಿ ನಿರೂಪಿಸುತ್ತಿರುವ **'ಬ್ರಹ್ಮಾಂಡ ವ್ಯವಸ್ಥೆ'**ಯನ್ನು ಸಾವಿತ್ರಿ ಅತ್ಯಂತ ಸೂಕ್ಷ್ಮವಾಗಿ ಹೇಳುತ್ತಿದೆ. ಅದನ್ನು ನಾವು ಮುಕ್ತ ಹೃದಯದಿಂದ ಸ್ವೀಕರಿಸಬೇಕಿದೆ.

ಇದೇ ವಿಷಯವನ್ನು ಆಧುನಿಕ ಜೀವಶಾಸ್ತ್ರವೂ ಸಹಿತ ಕ್ರೊಮೋಝೋಮ್ ವಿಷಯದ ಮೂಲಕ ಎಕ್ಸ್ ಮತ್ತು ವಾಯ್ ಸ್ವರೂಪದ ಅಸ್ತಿತ್ವವನ್ನು ಕಂಡುಕೊಂಡಿದೆ. ಅವೆರಡೂ ಸಂಯೋಗಗೊಂಡಾಗಲೇ ಜೀವ–ಸೃಷ್ಟಿ ಎನ್ನುವದೂ ಸಹಿತ ತಿಳಿದ ವಿಷಯ. ಇವುಗಳನ್ನು **'ಸ್ವರ್ಣಿಮದ ಯುಗಳ ಸರ್ಪ'**ಗಳಾಗಿಯೇ ಜಗತ್ತಿನಾದ್ಯಂತ ಆರಾಧನೆ – ಪದ್ಧತಿಗಳಿವೆ. ಇದು ಸಾಂದ್ರ ಪ್ರಜ್ಞೆ ಮತ್ತು ದೃಷ್ಟಾರ ದೃಷ್ಟಿಯಲ್ಲಿ ಮಾತ್ರ ಸ್ಪಂದಗೊಳ್ಳಲು ಸಾಧ್ಯವಿದೆ. ಈ ಯುಗಳ ಸರ್ಪಗಳನ್ನೇ ಸತ್–ಚಿತ್ ಎಂದು, ಜೀವ–ಪ್ರಾಣ ಎಂದು, ಆತ್ಮ–ಪರಮಾತ್ಮ ಎಂದು ಅಧ್ಯಯನವಿದೆ. ಅದನ್ನೇ ಶ್ರೀ ಅರವಿಂದರೂ **ಮಾನವನಿಗೆ ಎರಡು ಆತ್ಮಗಳಿವೆ** ಎಂದು ಅಭಿವ್ಯಕ್ತಿಸಿದ್ದಾರೆ.

ಇಂತಹ ಅತ್ಯಪೂರ್ವವಾದ ಸಂಗತಿಯು ಎಂದಿಗೂ ವಿರತಿಗೊಳ್ಳುವದಿಲ್ಲ. ಏಕೆಂದರೆ ಇದೇ ಸಾನಂದವಾಗಿ ಅನುಭೂತಿಯಾಗಿ ನಿತ್ಯ ಸ್ಪಂದನಕ್ಕೆ ಲಭ್ಯಗೊಳ್ಳುತ್ತದೆ.

ಇಂತಹ ವಿಷಯವು ಕಾರಣಾಂತರದಿಂದ ಇಲ್ಲಿಯವರೆಗೂ ಗುಹ್ಯವಾಗಿದ್ದು, ಘನರಹಸ್ಯದಲ್ಲಿಯೇ ಉಳಿದಿತ್ತು. ಆದರೆ ಇದೀಗ ಇದ್ದಕಿದ್ದಂತೆಯೇ ಪ್ರಕಟಗೊಳ್ಳುವ ಅವಧಿ ಇದಾಗಿದೆ. ನಮ್ಮ ಧರೆಗೆ ಇದು ಲಭ್ಯಗೊಳ್ಳುವಲ್ಲಿ ಸದಾ ಸಿದ್ಧವಾಗಿದೆ.

**ಆವಿರಾವೀರ್ಮ ಏಧಿ ।**

ಇದು ಐತರೇಯೋಪನಿಷತ್ತಿನ ಮಂತ್ರ. ಇಲ್ಲಿ ಆವಿಃ ಆವಿಃ ಎಂದು ಎರಡು ಬಾರಿ ಹೇಳುತ್ತಿರುವದು, ಒಂದು, ಓರ್ವ ವ್ಯಕ್ತಿಯ ಚೈತನ್ಯವಾಗಿ ಜೀವಾತ್ಮವಾಗಿದ್ದರೆ, ಮತ್ತೊಂದು ಆವಿಃ ಎನ್ನುವದು "ಪರಮಾತ್ಮನ" ಸಲುವಾಗಿ ಇರುತ್ತದೆ. ಎರಡೂ ಒಂದೇ. ಯಾವ ರೀತಿ ಸಮುದ್ರದ ನೀರಿನ ಹನಿ ಸಮುದ್ರವೇ ಆಗಿರುತ್ತದೆಯೋ ಹಾಗೇ ಇದೂ ಸಹಿತ.

ಇದರ ಅರ್ಥ ಹೀಗಿದೆ; "ನನ್ನ ವಾಕ್ ಮನಸ್ಸಿನಲ್ಲಿ ಪ್ರತಿಷ್ಠಿತವಾಗಿದೆ; ನನ್ನ ಮನಸ್ಸು ನನ್ನ ವಾಕ್‌ನಲ್ಲಿ ಪ್ರತಿಷ್ಠಿತವಾಗಿದೆ; ನನ್ನ ಚೈತನ್ಯವು ಆತ್ಮ(ಬ್ರಹ್ಮ)ದಲ್ಲಿ ಅಭಿನಿವಿಷ್ಟಗೊಂಡಿದೆ." ಭಾಷಾ ವ್ಯವಸ್ಥೆಯಲ್ಲಿ ಮಾನವನ ಬದುಕು, ಪ್ರಕೃತಿಯ ಕೊಡುಗೆ, ವಿಶ್ವ ಸತ್ಯದ ವಿಕಸನದ ಹಂತಗಳು ಜೊತೆಗೆ ವಿಶ್ವ–ರಹಸ್ಯ (cosmic-secrecy)ವೂ ಅಡಕಗೊಂಡಿರುತ್ತವೆ. ಅದರ ಜೊತೆಗೇ ನಿರಾಕಾರ ಸ್ವರೂಪದಲ್ಲಿದ್ದ "ನಾದ"ವು "ಧ್ವನಿ"ಯಾಗಿ, ಮಾನವನ ಶರೀರದಲ್ಲಿರುವ ವ್ಯವಸ್ಥೆಯಿಂದ "ಶಬ್ದ" ಸ್ವರೂಪ ತಾಳಿ ಪ್ರಕಟಗೊಳ್ಳುತ್ತದೆ. ಈ ವಿಷಯದಲ್ಲಿ ಗಂಭೀರ ಅಧ್ಯಯನ ಬಯಸುವ ಹಲವಾರು ಗ್ರಂಥಗಳು ಶಾಕ್ತ ಪಂಥದಲ್ಲಿವೆ. ಪ್ರಾಕೃತ ಮತ್ತು ಪಾಲೀ ಭಾಷೆಯಲ್ಲಿಯೂ ಸಹಿತ ಭಾಷೆಯ ರಹಸ್ಯದ ಬಗೆಗೆ ಅಪಾರ ಅಧ್ಯಯನಗಳಿವೆ.

**ಆಧುನಿಕ ವಿಜ್ಞಾನದ ಆವಿಷ್ಕಾರ**

ಜೀವಶಾಸ್ತ್ರ ಮತ್ತು ಮನೋವಿಜ್ಞಾನದ ಆಧುನಿಕ ಸಂಶೋಧನೆಗಳ ಪ್ರಕಾರ ಮಾನವನ ಮೆದುಳಿನ ಎಡ ಭಾಗವು ವೈಚಾರಿಕತೆಯನ್ನು ಪೋಷಿಸುತ್ತದೆ. ಸಾಮಾನ್ಯವಾಗಿ ಇದು ಪುರುಷ ಪ್ರಧಾನತೆಯನ್ನು ಹೊಂದಿದೆ. ಅದೇ ರೀತಿಯಲ್ಲಿ ಮೆದುಳಿನ ಬಲ ಭಾಗವು ಮಾರ್ದವ/ಪ್ರೇಮ/ವಿಶ್ವಪ್ರೇಮ/ಪ್ರಕೃತಿಯ ಗುಣಗಳನ್ನು ಪೋಷಿಸುತ್ತದೆ. ಹೀಗಾಗಿ ಇದು ಸ್ತ್ರೀ ಪ್ರಾಧಾನ್ಯತೆಯಲ್ಲಿ ಇರುತ್ತದೆ.

ಇದೇ ವಿಷಯವನ್ನು ಕೃತಯುಗದ ಅವಧಿಯಲ್ಲಿ ಪುರುಷ ಮತ್ತು ಸ್ತ್ರೀ ಮಹತ್ವದಲ್ಲಿ (50:50) ಸಮತೆಯ ಹಂತದಲ್ಲಿ ಇದ್ದದ್ದು ತೋರುತ್ತದೆ. ತ್ರೇತಾ ಯುಗದ ಅವಧಿಯಲ್ಲಿ ಇದು 40:60 ರ ಹಂತಕ್ಕೆ ಬಂದು, ಇಡೀ ಯುಗವನ್ನು ಸ್ತ್ರೀ ಪ್ರಾಧಾನ್ಯತೆಯಲ್ಲಿ ರೂಪಣೆಗೊಳಿಸಿದ ಘಟನೆಗಳಿವೆ. ಇನ್ನು "ದ್ವಾಪರ ಯುಗ"ದಲ್ಲಿ ಪುರುಷ ಪ್ರಧಾನತೆಯ ವ್ಯವಸ್ಥೆ ಪ್ರಾರಂಭವಾದಂತೆ ಇದೆ. ಹೀಗಾಗಿ ಇಲ್ಲಿ 60:40 ರ ಅನುಪಾತದಲ್ಲಿ ಪುರುಷ–ಸ್ತ್ರೀ ವ್ಯವಸ್ಥೆ ಇದೆ. ಕಲಿ ಯುಗದಲ್ಲಿ ಇದು 70:30 ರ ಹಂತಕ್ಕೆ – ಅಂದರೆ ಸರ್ವವೂ ಪುರುಷ ಕೇಂದ್ರಿತವಾಗಿರುವ ಹಂತದಲ್ಲಿ ಘಟನೆಗಳಿವೆ.

ಆದರೆ, ಇದೀಗ ಈ ಕಲಿ ಯುಗದ ಅವಧಿಯೂ ಮುಗಿದು, ಮತ್ತೆ ಹೊಸದೊಂದು ಯುಗ ಪ್ರಾರಂಭವಾಗಿರುವ ಹಿನ್ನಲೆಯಲ್ಲಿ 50:50 ರ ಸಮತೆಯಲ್ಲಿ ರೂಪುಗೊಳ್ಳುತ್ತಿದೆ. ಇವೆಲ್ಲ ಹಿನ್ನೆಲೆಯಲ್ಲಿ ದೇಶಾದ್ಯಂತ/ವಿಶ್ವದಾದ್ಯಂತ ನಡೆದಿರುವ ಘಟನೆಗಳು, ಸ್ತ್ರೀ ಸಮಾನತೆ/50:50 ಮೀಸಲಾತಿಯ ವಿಷಯದ ಮೂಲ ಝುರಿ ಇಲ್ಲಿದೆ. ಹಾಗಾದರೆ ಬಲ ಮೆದುಳಿನ ಮೃದುತ್ವ, ಪ್ರೇಮ, ಮಾರ್ದವತೆಗಳೆಲ್ಲವೂ, ವೈಚಾರಿಕತೆಯ ಪ್ರಖರತೆಯಲ್ಲಿ ರೂಪಾಂತರ–ಗೊಳ್ಳುತ್ತಿವೆಯೇ? ಅಥವಾ ವೈಚಾರಿಕತೆಯು ಸಹಿತ ಮಾರ್ದವತೆಯಿಂದ ದೂರವಿದ್ದರೆ ಪರಿಪೂರ್ಣತೆ ಸಾಧ್ಯವಿಲ್ಲ ಎನ್ನುವದನ್ನು ಅರಿತುಕೊಂಡಿದೆಯೋ? ಈ ಎಲ್ಲ ಪರಿವರ್ತನೆಯ ಸೂಕ್ಷ್ಮತೆಯನ್ನು 'ಯುಗಳಾವತಾರ'ದ ಹಿನ್ನೆಲೆಯಲ್ಲಿ ಮರುಸಂಶೋಧನೆಗೆ ತೊಡಗಿಸಿಕೊಳ್ಳಬೇಕಾಗಿದೆ.

**ವರ್ಣಮಯ ಲೀಲೆ**

ಈ ರೀತಿಯಾಗಿ ಗುಹ್ಯವೇ ಆಗಿದ್ದ ವಿಷಯವನ್ನು ಅರಿತುಕೊಳ್ಳಬೇಕೆಂಬ ಮಾನವನ ತೀವ್ರ–ಬಯಕೆಯನ್ನು ಈಡೇರಿಸಲೆಂದು ಇದೀಗ ಸಾಕಾರಗೊಳ್ಳುತ್ತಿದೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಭೂ–ಬದುಕಿನ ಜೀವನದಲ್ಲಿ ಈ ತೀವ್ರ–ಬಯಕೆಯು ನಿಸರ್ಗ ಸಹಜವಾಗಿರುವ ವರ್ಣವನ್ನು ಪಡೆದುಕೊಳ್ಳುತ್ತದೆ. ಬಯಕೆಯ ತೀವ್ರತೆ ಹೆಚ್ಚಿದಂತೆಲ್ಲ ಅದು 'ರಕ್ತ ವರ್ಣದ' ಸ್ವರೂಪ ತಾಳುತ್ತದೆ. ವರ್ಣಗಳು ಮನೋವೈಜ್ಞಾನಿಕವಾಗಿ ತುಂಬ ಪ್ರಭಾವ ಬಿರುತ್ತವೆ. ಕೆಂಪು ವರ್ಣವು ಪ್ರೇಮ ಮತ್ತು ಬಯಕೆ ಸಂಕೇತವೇ ಆಗಿದೆ. ಅದೇ ರೀತಿ ಹಳದಿ ವರ್ಣವು ಸಂತೋಷ ಮತ್ತು ಉಲ್ಲಾಸವನ್ನು ಸಂಕೇತಿಸುತ್ತದೆ.

ಇವೆರಡರ ಹದವಾದ ಮಿಶ್ರಣವೇ ಸ್ವರ್ಣ ವರ್ಣ! ಅದಕ್ಕಾಗಿಯೇ ಸ್ವರ್ಣ ವರ್ಣದ ಫಲವಂತಿಕೆಯಲ್ಲಿ ಭೂಮಿಯು ಪ್ರಫುಲ್ಲತೆಯಲ್ಲಿ ಸಾಫಲ್ಯವನ್ನು ಪಡೆದುಕೊಳ್ಳುತ್ತದೆ. ಇಂತಹ ಆಂತರ್ಯವನ್ನು ಹೊಂದಿ ಅಭೀಪ್ಸೆ ಇದ್ದಲ್ಲಿ ಆಗ ಅಲ್ಲಿ ಸ್ವರ್ಣವರ್ಣಮಯ ಪುಷ್ಪಗಳ ವಿಕಾಸಕ್ಕೆ ಛಂದವೊಂದು ಉದಿಸುತ್ತದೆ. ಆ ಏಕೈಕ ಮೂಲದ ಆಧಾರವನ್ನೇ ಆಧಾರಕಾಂಡವನ್ನಾಗಿಸಿಕೊಂಡು ಅದನ್ನೇ ಅವಧರಿಸಿಕೊಂಡು ಲಹರಿಗಳ ತೇಲುವಿಕೆ ಸಾಧ್ಯವಾಗುತ್ತದೆ. ಆಗ ಇಲ್ಲಿ 'ಅಗಣಿತದ ಛಂದದರವಿಂದ ವೃಂದ'ಗಳ ಮೂಲಕ ಅದೃಶ್ಯವಿರುವ ನಿತ್ಯತ್ವವು ಆವಿರ್ಭಾವಗೊಳ್ಳುತ್ತದೆ. ಏಕೆಂದರೆ ಚಿತ್–ಪ್ರಕಾಶವೂ ಸ್ವರ್ಣವರ್ಣದಲ್ಲಿಯೇ ಇರುತ್ತದೆ.

ಮೃಣ್ಮಯದ ಮನುಜನು ಔನ್ನತ್ಯಗೊಳ್ಳಲು ಹಂಬಲಿಸಿ ಉತ್ಥಾನಗೊಂಡಲ್ಲಿ ಅಥವಾ ಆ ಸ್ವರ್ಗದಸ್ಮಿತೆಯ ಸ್ವರ್ಣ ವರ್ಣವು ಭೂಮಿಗೆ ಅವತರಣಗೊಳ್ಳುವಲ್ಲಿ, ಮಾನವನ ಭವದ ಬದುಕು ಅವನ ಅಂತರಂಗ ಯುದ್ಧ–ಸಂಕ್ರಾಂತಗೊಂಡಿದ್ದರೂ ಸಹಿತ, ಅದನ್ನು ತಹಬಂದಿಗೆ ತರಲು ಈ ವ್ಯವಸ್ಥೆಯು ಘನಶಾಂತ ಸ್ವರೂಪದಲ್ಲಿಯೇ ಸಾಂತದಂಗವನ್ನು ಸೃಷ್ಟಿಸುತ್ತದೆ. ಅವನ ಕ್ರಿಯಾ–ಪರ್ವಗಳೆಲ್ಲವೂ ನರಕ ಶಾಸನದ ಮಧ್ಯೆಯೇ ರಚಿತವಗಿದ್ದರೂ, ಅಲ್ಲಿಗೆ ಆಗಮಿಸಲಿರುವ ಆ ಸ್ವರ್ಗ–ಸಂದೇಶವಾಹಕನು ನೆಲೆಸಲು ಅವಕಾಶವಿದ್ದೇ ಇರುತ್ತದೆ. ಏಕೆಂದರೆ ಸರ್ವಸ್ವವೂ ಬ್ರಹ್ಮ–ಮಾನಸದ ಅವಳ ವೈಶ್ವಿಕದ ಕಕ್ಷೆಯಾ ನಕ್ಷೆಯಾಗಿರುತ್ತದೆ. ಈ ರೀತಿಯಲ್ಲಿ ಬೆಳಗು ಆತ್ಮದಾನಂದದ–ಯಜ್ಞದ ಅಧ್ವರ್ಯುವಾಗಿ ಆಗಮಿಸುತ್ತದೆ. ಅವಳದೇ ಲೋಕದಲ್ಲೊ ಘನಮೌನದ ಉಪಾಸನೆಯಲ್ಲಿ ಲೀನಗೊಳ್ಳುತ್ತದೆ. ಆ ಆದಿಶಕ್ತಿಯ ಸಾದ್ಯಂತವನ್ನು ವೇದ್ಯಗೊಳಿಸಲೆಂದು ದೀಪ್ತಿ–ತೇಜದಲ್ಲಿ ಸೂಸಿ ಬರುತ್ತದೆ. ಇಲ್ಲಿ ರೂಪಣೆಗೊಳ್ಳುವ ಛಂದಗಳು ಪ್ರಾಣಮಯ ಸ್ಪಂದದಿಂದ ಸಾದೃಶ್ಯಗೊಳ್ಳುತ್ತವೆ. ಹೀಗೆ ಇದು ಅವಳೆದೆಯ ತುಡಿತ–ಮಿಡಿತಗಳಾಗಿ ಪಡಿಮೂಡಿಕೊಳ್ಳುತ್ತದೆ. ಅದನ್ನೇ ಪ್ರತಿನಿಧಿಸುವ ಮುಖದ–ಮಂಡಲವು ಅನುರೂಪುಗೊಳ್ಳುತ್ತದೆ. ಈ ರೀತಿಯ ಸಂಯೋಗದಿಂದ ಸಂರಚನೆಗೊಳ್ಳುವ ದೇವ–ತಾಣವಾಗುತ್ತದೆ. ಜೊತೆಜೊತೆಗೆ ಇದು ಆ ಶುಭದ–ಶಕುನ ನಿತ್ಯತ್ವವಾಗಿ ಇರುವ ತಾಣವಾಗುತ್ತದೆ. ಇದನ್ನೇ ಶ್ರೀ ಅರವಿಂದರು ತಮ್ಮ ಮಂತ್ರ ಕಾವ್ಯ 'ಸಾವಿತ್ರಿ' (8–5–538) ಯಲ್ಲಿ ಸಂಕೇತಪೂರ್ಣವಾಗಿ ನೀಡಿದ್ದಾರೆ. ಇಲ್ಲಿ ರೂಪಿತದ ಆಂಗ್ಲ ಶಬ್ದ **'ಎಬೋಡ್'**

ಎನ್ನುವದು ಮೇಲ್ನೋಟಕ್ಕೆ ವಾಸಸ್ಥಾನ ಎಂದು ಕಂಡುಬಂದರೂ, ಅದನ್ನು ಉಚ್ಚರಿಸುವಾಗ ಆಗುವ ಧ್ವನಿ ಸೂಕ್ಷ್ಮತೆಯಲ್ಲಿ ಅದು **'ಏ–ಬೋಡ್'** ಆಗುತ್ತದೆ. ಇದಕ್ಕೆ **'ಭವಿಷ್ಯದ್–ವಾಣಿ' ಅಥವಾ 'ಶುಭಶಕುನದ ಆ–ವಾಸ'** ಎಂದು ಅರ್ಥವಿದೆ.

ಏಕೈಕವಾಗಿದ್ದ 'ಅವನಿಗೆ' ಇದು ಅತಿಶಯದ ಬೃಹದ್–ರೂಪವನ್ನು ಒದಗಿಸುತ್ತದೆ. 'ಅವಳ' ಉಪಾಸನೆಗಾಗಿ ಅವನು ನಿತ್ಯ ನಿರಂತರವಾಗಿ ದೀಪವಾಗಿ ಬೆಳಗತೊಡಗುತ್ತಾನೆ. ಅವನ ಶ್ರೇಯೋಭಿಲಾಷೆಗಳಿಗೆಲ್ಲ ಅಧಿಮಾತೆಯಾಗಿ ಅವಳು ಇರುತ್ತಾಳೆ. ಆರಾಧ್ಯ ಭಾವದಲ್ಲಿ ಅವಳನ್ನು ಸತತವಾಗಿಯೂ ಅನುಸರಿಸುತ್ತಾನೆ. ಅವನಿಚ್ಛೆಯನ್ನು ಕ್ರಿಯೆಗೆ ಇಳಿಸುವಂತೆ ಅವಳಿಗೂ ಸಲಹೆಯನ್ನು ನೀಡುತ್ತಲೇ, ಅವಳಿಗೆ ಸಂಪೂರ್ಣವಾಗಿ ಶರಣಾಗಿ ಕಾರ್ಯಪ್ರವೃತ್ತನಾಗುತ್ತಾನೆ. ಹಗಲಿರುಳೂ ತಪನದಲ್ಲಿ ತಪಿಸುತ್ತಾನೆ. ಅವನ ಆ ತ್ಯಾಗ ಭಾವವನ್ನು ಶೋಭೆ ದೀಪ್ತಿಯನ್ನಾಗಿಸಿ ಅವನ ಬದುಕಲ್ಲಿ ನಿಕ್ಷಿಪ್ತಗೊಳಿಸುತ್ತಾಳೆ. ಏಕೆಂದರೆ ಅವನ ಆನಂದದ ಉದ್ಗಾರದ ಮೂಲವೇ ಇವಳಲ್ಲಿ ಉದಿತವಿದೆ. ಅವಳ ಚಿತ್ಕಳೆಯ ಎಳೆಗಳನ್ನು ಪಡೆದುಕೊಂಡೇ, ಅವನ ಆ ಸರ್ವ ಭೂತ–ಶಕ್ತಿಗಳು ಪರಿಪೂರ್ಣಗೊಳ್ಳುವಂತೆ ಹಾಸು–ಹೊಕ್ಕಾಗಿಸಿ, ಅವನು ಅ ನೇಯ್ಗೆಯನ್ನು ಮುಂದುವರೆಸುತ್ತಾನೆ. ಭೌತಕಾಯಗಳ ಅಂತರಂಗದಲ್ಲಿ ಹುದುಗಿರುವ ಈ ದಿವ್ಯ ಚೇತನವನ್ನು, ಅವಳ ಮೂಲಕವೇ ಅವನು ಅರಿತುಕೊಳ್ಳುವದೇ ನಿಯತಿ–ಮಹಿಮೆಯೂ ಆಗಿದೆ.

**'ತನ್ನ ಗಾರುಡಿಯ–ಭಾವಗರ್ಭದೊಳಗವನ ಅವಳು ಇರಿಸೆ**
**ಅವಳ ಅಗಣಿತದ ಕನಸುಗಳು ಅವನ ಸಾವಿರದ ಸತ್ಯವೆನಿಸೆ.**
**ವಿಶ್ವಾತ್ಮನಿಂದು ಅಪ್ಯಾಯದಿಂದು ಅವಳಾತ್ಮ ಸನಿಹ ಬರಲು**
**ಸಾವಿರದ ಶಿಶುವು ಜನಿಸಲಿದೆ ಈಗ ತರಲಾತಿ ವರ್ಷಗಳಲು'**

– ಎಂದು **'ಸಾವಿತ್ರಿ'** (ಪುಟ 61) ಯಲ್ಲಿ ಶ್ರೀ ಅರವಿಂದರು ವಿವರಿಸಿದ್ದಾರೆ. ಇಲ್ಲಿ **'ಸಾವಿರದ ಶಿಶು'** ಎಂದರೆ ಚಿತ್–ಶಕ್ತಿಯಲ್ಲಿ ಉದಯವಾಗುವ ಚಿನ್ಮಯವಾಗಿದೆ. ಅದು ಅಮರ. ಹೀಗಾಗಿ ಸಾವಿರದ ಶಿಶು. (ಇದನ್ನು ಅಲ್ಲಮಪ್ರಭು ಅತ್ಯಂತ ವಿವರವಾಗಿ, **'ಪರಶಿವ ತತ್ತ್ವದ ಮಗಳ ಮಗ'** ಎಂದಿದ್ದಾನೆ. ಅದನ್ನೇ ನಿರಾಳವೆಂಬ ಶಿಶುವಿಗೆ ಪೃಥ್ವಿಯೆಂಬ ತೊಟ್ಟಿಲು ನಿಜೈಕ್ಯವೆಂಬ ತಾಯಿ, ಆಕಾಶ ಬಂದು ಶಿಶುವನ್ನು ಎತ್ತಿಕೊಂಡು ಆರೈಕೆ ಮಾಡಿತ್ತು. ಮೃಣ್ಮಯದ ಮಾಯಾ ಸಂಕಲ್ಪದ ಮಧ್ಯದಲ್ಲಿಯೇ ಅನುಭವದ ಮೂಲಕ, ಅದನ್ನು ಚಿತ್ತದ ಸ್ತರದಲ್ಲಿ ಅನುಭಾವಿಸಿಕೊಂಡು,) ತದನಂತರದಲ್ಲಿ ಆತ್ಮ ಸಾಕ್ಷಾತ್ಕಾರದ ಮೂಲಕ

ಅನುಭೂತಿಯೊಂದಿಗೆ ವಿಶ್ವಾತ್ಮವಾಗುವ ಸಂಗತಿಯನ್ನು 'ಸಾವಿತ್ರಿ'ಯ 61– 62 ಪುಟಗಳಲ್ಲಿ ಅತ್ಯಂತ ಕಾವ್ಯಾತ್ಮಕವಾಗಿ ಶ್ರೀ ಅರವಿಂದರು ಸಂಕೇತಿಸಿದ್ದಾರೆ.

ಇದು ತಾರೆ–ತಾರೆಗಳ ಜೊತೆಗೆ ಬಾಂಧವ್ಯದ ಬೆಸುಗೆಯಾಗುತ್ತದೆ. ದ್ವಂದ್ವ ಮೂಲದಂತೆ ಕಂಡರೂ "ಏಕ"ವಾಗಿರುವದೇ ಆ ಸರ್ವಶಕ್ತಿಯ ರಹಸ್ಯವಾಗಿದೆ. ಅವನ ಕ್ರಿಯೆಗಳು ಅವಳ ದೈವಾಜ್ಞೆಯಾಣತಿಯಂತೆಯೇ ಇರುತ್ತವೆ. ಅವಳು ಏನನ್ನು ಇಚ್ಛಿಸುತ್ತಾಳೆಯೋ ಅದೇ ರೀತಿಯಲ್ಲಿ ಅವನ ರೂಹು ಸಾಕರಗೊಳ್ಳುತ್ತದೆ. ಅವನ ಸತ್ತೆಯೂ ಸಹಿತ ಅವಳ ಅಪಾರದ ದರ್ಪಣದ ರೂಪವಾಗಿ ಇರುತ್ತದೆ. ಅವಳ ಹೃತ್ಕಮಲದ ಅನಿರ್ವಚನೀಯವಾದ ತುಡಿತಗಳನ್ನು ಅರಿತುಕೊಂಡೇ ಸಮಸ್ಪಂದಿಯಾಗಿ ಯಾನಕ್ಕೆ ತೊಡಗುತ್ತಾನೆ. ಈ ಯಾನದಲ್ಲಿ ಯಾವುದೇ ಸಂಘರ್ಷ ಬಂದರೂ ಅದನ್ನು ಸಹಿಸುತ್ತ ಸಾಗುತ್ತಾನೆ. ಹೀಗೆ ಅವಳ ಹಿತ ಸ್ಪರ್ಶ, ಅವನಿಗೊಂದು ಬದುಕು ಮತ್ತು ಅವನಾತ್ಮವನ್ನು ರೂಪುಗೊಳಿಸುತ್ತದೆ. ಅವಳ ಗತಿ–ಗಮನವೇ ಪರಂಪರೆಯಾಗಿ ಅವನಿಗೆ ನಿಯತಿ–ಕಾಲವಾಗುತ್ತದೆ. ಈ ರೀತಿಯಲ್ಲಿ **'ಯುಗಳಾವತಾರದ ಲೀಲೆ'**ಗಳನ್ನು ಶ್ರೀ ಅರವಿಂದರು ದ್ರಷ್ಟಾರರಾಗಿ 'ಸಾವಿತ್ರಿ'ಯಲ್ಲಿ ಒದಗಿಸಿದ್ದಾರೆ.

**ಆ ಒಂದು ದೃಷ್ಟಿಪಾತವದು ಅವನ ವಿಸ್ಮಯದ ಪೂರ್ಣ ದಿನವು**
**ಅವಳಧರದಿಂದ ವೈಖರಿಯ ವಾಣಿ ಯುಗಗಳಿಗೆ ರೆಕ್ಕೆಯಿದುವು.**
**ತಾ ಗೈದ ಸರ್ವ ಕ್ರಿಯೆಗವನು ಅವಳ ಆಲಂಬವಾಗಿ ಇರಿಸಿ**
**ದೃಷ್ಟಾರ ತಾನು ಸೃಷ್ಟಾರೆಯವಳು, ಮತ್ತವನ ಇರುವು ನೆಲೆಸಿ;**

**ಅಭಿಮಾನಪೂರ್ಣ ಸೌಭಾಗ್ಯವವನ ಅನುದಿನದ ಭವ್ಯ ಮಾಲೆ**
**ಅವಳುಪಾಯನವ ಆಧರಿಸಿ ಅವನು ಸಂರಚಸಿ ಜಗದ ಲೀಲೆ**
**ಬಾನಗಲದಲ್ಲಿ ಕೋರೈಸಿ ವರ್ಣ–ಸಮ್ಮೇಳ–ಕಾಂತಿಯಲ್ಲಿ**
**ಗರಿಗೆದರಿ ಕುಣಿವ ಆ ನವಿಲ–ನೃತ್ಯ ವಿನ್ಯಾಸ ಮಾಲೆಯಲ್ಲಿ**

**ಜೀವತೋಷವನು ಮೊಗೆಮೊಗೆದು ಅವಳು ತುಂತುಂಬಿ ನೀಡುತಿರಲು**
**ಅವನಿಗ ಪಥದಿ ಮುಂದೆಳೆದುಕೊಂಡು ಅನುದಿನವು ಬೆಳಗುತಿರಲು**
**ತರಣಗೊಳ್ಳುತಿಹ ಅವಳ ಆ ಮಂದಹಾಸದುತ್ಕ್ರಾಂತಿಯಲ್ಲಿ**
**ಅದರ ಚಿರಪ್ರಭೆಯ ಪ್ರಭಾವಳಿಯಲ್ಲಿ ಅವನುದಿತ ನಿತ್ಯದಲ್ಲಿ.**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 63)**

**ಈ ಬುವಿಯನೀಗ ಪರಮಪಾವಿತ್ರ್ಯಗೊಳಿಸಲೆನೆ ಹರಸುತಿಂದು**
**ಆ ಮಹಾಶಕ್ತಿ ಆವರಣಗೊಳಲು ಆಗಮಿಸಿ ಬಂದುದಿಂದು**
**ನೆಲೆಗೊಂಡಿತಿಲ್ಲಿ ಮೃಣ್ಮಯದ ಬದುಕನಾಧರಿಸಿಕೊಂಡು ನಿತ್ಯ**
**ಅನುಭವಿಸಲೆಂದು ಕಡುಕಷ್ಟ ಮತ್ತೆ ಉಚ್ಚಾಭಿಲಾಷೆ ಸತ್ಯ**

**ಈ ಬುವಿಗೆ ತಾನು ಅವತರಣಗೊಂಡು ಬಂದಿದ್ದ ಬೃಹದ್–ಬಲವು**
**ಮಹಿಮೆಗೊಳಿಸಲೆನೆ ವರವಿತ್ತು ಬುವಿಗೆ ಹರಸಿತ್ತು ತೋರಿ ಒಲವು,**
**ವೇದನೆಯಲೀಗ ಬಾಧನೆಗೆ ಸಿಲುಕಿ ಬಳಲುತಲಿ ಕಳಲಿ ಕುಂದಿ**
**ನೆಲೆಸಿತ್ತು ತಾನು ಆಧಾರದಲ್ಲಿ ಆ ಅಭೀಪ್ಸೆಯನು ಹೊಂದಿ.**

**ಕಾಲದುದ್ದಕೂ ಶೈಶವದ ಸ್ನಿಗ್ಧ ಕೋಮಲದ ಸ್ಮಿತವು ಅಂದು**
**ನಾದಗೊಂಡಿದ್ದು ತಾನೀಗ ಮತ್ತೆ ನೀರವತೆಗಿಳಿದುಕೊಂಡು;**
**ಮಾನವನ ಸಹಜ ಜೀವನದ ತೋಷ–ಸಂತೋಷವೆಲ್ಲ ಈಗ**
**ಮೇಘದಾವರಣದಾ ಛಾಯೆಯಲ್ಲಿ ಸಿಲುಕಿಕೊಂಡುದೀಗ**

**ಮತ್ತದೋ ಅವನ ತಾಪ–ಸಂತಾಪ ತಾನೀಗ ನಿಯತಿಯಲ್ಲಿ**
**ಆ ಗಮ್ಯವೀಗ ಅವನ ಮಾತೃಕೆಯ ಮೂಲದಾ ರೂಪದಲ್ಲಿ.**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 4 ಪುಟ 133)**

ಅದೇ ರೀತಿಯಲ್ಲಿ; ಇಲ್ಲಿರುವ Two in One ಎನ್ನವುದು **"ಏಕಮೇವ ಪರಂ ಬ್ರಹ್ಮ"**. ಇದರಿಂ ಶಿವ ಮತ್ತು ಶಕ್ತಿ ಎನ್ನುವ ಎರಡು ತತ್ತ್ವಗಳು ಜನಿಸುತ್ತವೆ. ಇದು ಅಷ್ಟು ಸುಲಭದಲ್ಲಿ ತನ್ನ ರಹಸ್ಯವನ್ನು ಬಿಟ್ಟುಕೊಡುವದಿಲ್ಲ. ಅದರಲ್ಲೂ ಈ ಶಿವ–ಶಕ್ತಿಯಲ್ಲಿ ಜ್ಞಾನಶಕ್ತಿ, ಇಚ್ಚಾಶಕ್ತಿ ಮತ್ತು ಕ್ರಿಯಾಶಕ್ತಿಗಳನ್ನು ತಿಳಿದುಕೊಳ್ಳುವದು ಮತ್ತೂ ಸಾಧನೆಯನ್ನು ಅಪೇಕ್ಷಿಸುತ್ತದೆ.

ಒಂದು ಪ್ರತಿಮಾತ್ಮಕ ಕಾವ್ಯವು (ಇಲ್ಲಿ ಸಾವಿತ್ರಿಯು) ಯಾವಾಗಲೂ ಯೌಗಿಕ ಚೈತನ್ಯದಿಂದಲೇ ರೂಪಿತಗೊಳ್ಳುತ್ತದೆ. ಇದು ನಿಸರ್ಗ ಸಹಜವಾಗಿರುವ ಅಭಿವ್ಯಕ್ತಿಯೂ ಆಗಿದೆ. ಹೀಗಾಗಿ ಇಲ್ಲಿ 'ಪ್ರತಿಮೆ' ಎಂದರೆ ಪ್ರಕೃತಿ. ಅದೇ ರೀತಿ ಮೂರ್ತಿ ಅಥವಾ ಶಿಲ್ಪ ಎನ್ನುವದು ಸಂಸ್ಕೃತಿಯಾಗುತ್ತದೆ. ಪ್ರತಿಮಾತ್ಮಕ ಕಾವ್ಯವು ಯಾವಾಗಲೂ ಭವಿಷ್ಯವನ್ನು ಸಶಕ್ತಗೊಳಿಸುವ ದಿಸೆಯತ್ತಲೇ ತುಡಿತ ಹೊಂದಿರುತ್ತದೆ. ಹೀಗಾಗಿ ಅದನ್ನೇ ಧ್ಯಾನಿಸುತ್ತ ಇರುತ್ತದೆ. ಅದು

ವರ್ತಮಾನದೊಂದಿಗೆ ಸ್ಪಂದಿಸುತ್ತಲೇ, ಶಾಶ್ವತ ಸತ್ಯದ ಕಡೆಗೆ ಪಥ ನಿರ್ಮಿಸುವಲ್ಲಿ ಮಾರ್ಗದರ್ಶನ ನೀಡುತ್ತದೆ. ಶಾಶ್ವತ ಸತ್ಯಗಳು ಯಾವಾಗಲೂ ವೈಶ್ವಿಕ ಆಯಾಮದಲ್ಲಿಯೇ ಇರುತ್ತವೆ.

Two are the ends of the mysterious plan to In this inalienable bliss they live..(page 56–57)ದಲ್ಲಿ "ಆದಿ ಮತ್ತು ಅಂತ್ಯ"ದ ಬಿಂದುಗಳು ಇರುವದು ಆಧಾರ ಮತ್ತು ಆ ಊರ್ಧ್ವದಲ್ಲಿ. ಈ ಎರಡೂ ತಾಣಗಳನ್ನು ಆತ್ಮ ಮಾತ್ರವೇ ಸತತ ಯೋಜನೆಯ ಮೂಲಕ ಸಂಪರ್ಕ ಸಾಧಿಸಿಕೊಳ್ಳುತ್ತದೆ. ಅಲ್ಲಿ ಪ್ರಕೃತಿ ಮತ್ತು ಚೈತನ್ಯ ಒಂದೇ ಆಗಿರುತ್ತದೆ. ಈ ರೀತಿಯಲ್ಲಿ, ಅವಕಾಶದಲ್ಲಿ ಇರುವ, ಗೋಚರಕ್ಕೆ ಸಿಗದ, ವಿಸ್ತಾರವಾಗಿಯೂ ಇರುವ, ಈ ವ್ಯವಸ್ಥೆಯ ಮೂಲಕವೇ "ವಿಶ್ವ ಸಂವಹನ" ಸಾಧ್ಯವಾಗುತ್ತಿದೆ. ಇದೇ 'ಸಂವಹನದ' ವ್ಯವಸ್ಥೆಯಲ್ಲಿಯೇ ಮಾನವನೂ ತನ್ನ ಚಿತ್ತವನ್ನು ಔನ್ನತ್ಯಗೊಳಿಸಿಕೊಳ್ಳಲು ಯತ್ನಿಸುತ್ತಿದ್ದಾನೆ. ಇದನ್ನು "ಈ–ಥರ್" ಎಂದು ಕರೆಯಲಾಗುತ್ತಿದೆ. ಆಧುನಿಕ ಪರಿಭಾಷೆಯಲ್ಲಿ ಈ ಆಂಗ್ಲ ಭಾಷಾ ವ್ಯವಸ್ಥೆಯ "ಈ–ಥರ್ ವ್ಯವಸ್ಥೆಗೆ" ಯಾವ ಯಾವ ಗುಣ ಸ್ವರೂಪಗಳನ್ನು ರೂಪಿಸಲಾಗಿದೆಯೋ ಮತ್ತು ಅಧ್ಯಯನ ಮಾಡಲಾಗುತ್ತಿದೆಯೋ, ಅದೇ ವಿವರಣೆಗಳನ್ನು ಸಂಸ್ಕೃತದ ಭಾಷಾ ವ್ಯವಸ್ಥೆಯಲ್ಲಿ 'ತಾರಾ ವ್ಯವಸ್ಥೆ' ಎನ್ನಲಾಗುತ್ತಿದೆ. ಇಲ್ಲಿ ಪೌರ್ವಾತ್ಯ ಭಾಷಾ ವ್ಯವಸ್ಥೆಯ ಶಬ್ದಗಳನ್ನು ಉಚ್ಚರಿಸುವಾಗ, ಪಾಶ್ಚಿಮಾತ್ಯ ಭಾಷಾ ಉಚ್ಚರಣೆಯ ವ್ಯವಸ್ಥೆಯಲ್ಲಿ, ಪ್ರಾರಂಭದಲ್ಲಿ 'ಇ ಅಥವಾ ಈ' ಸ್ವರದ ಜೋಡಣೆ ನಿಸರ್ಗ ಸಹಜವಾದ ವೈವಿಧ್ಯತೆ. ಹೀಗಾಗಿ ನಮ್ಮ "ತಾರಾ" ಅಲ್ಲಿ "ಈ–ಥರ್" ಆಯಿತು. ರೆಡಿಯೋ ತರಂಗಗಳನ್ನು ಈ–ಥರ್ ಮೂಲಕವೇ ಪ್ರಸಾರಗೊಳಿಸಲಾಗುತ್ತಿದೆ. ವೈರಲೆಸ್ ಸಮೂಹ ಸಂಪರ್ಕ ವ್ಯವಸ್ಥೆಯಲ್ಲಿಯೂ ಇದೇ "ಈ–ಥರ್" ವ್ಯವಸ್ಥೆ ಸಹಾಯಕಾರಿಯಾಗಿದೆ. ಭಾರತೀಯ ಅಧ್ಯಯನದಲ್ಲಿಯೂ ಈ "ಈ–ಥರ್" ವಲಯವನ್ನು ಶುಭ್ರ, ಅಚಲ, ಮೌನ, ಸ್ಥೂಲ–ಸೂಕ್ಷ್ಮಗಳು ಒಳಗು–ಹೊರಗಿನಲಿ ಒಂದಾಗಿದ್ದರೂ ವಿಚಲನೆಗೊಳ್ಳದ ಹಂತದಲ್ಲಿ ಇರುತ್ತದೆ ಎಂದೇ "ತಾರಾ ಭಾಷ್ಯವೂ" ಹೇಳುತ್ತಿದೆ. ಆದರೆ ಈ ತಾರಾ ಭಾಷ್ಯ ಪ್ರಕಟವಾಗಿ ಜನರಿಗೆ ತಲುಪಲು ಅವಕಾಶವಾಗಿಲ್ಲ. ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳು (ಶ್ರೀ ಅರವಿಂದರ ಶಿಷ್ಯ ಪರಂಪರೆಯಲ್ಲಿಯೇ ಇದ್ದವರು) ಈ "ಈ–ಥರ್' ಅಥವಾ 'ತಾರಾ ಭಾಷ್ಯ'ವನ್ನು ರಚಿಸಿದ್ದಾರೆ.

ಇನ್ನು ಈ ವಲಯದ ಕುರಿತು, ಅದು ಸ್ವಯಂ ಜ್ಯೋತಿಪೂರ್ಣವೇ ಆಗಿದ್ದು, ಶತಕೋಟಿ ಸೂರ್ಯರ ಉಜ್ವಲದ ಕಾಂತಿಗೆ ಸಮನಾಗಿರುತ್ತದೆ. ಆದರೆ ಮಾನವನ ಅಕ್ಷಿಗಳು ಇದನ್ನು ಸಹಿಸಿಕೊಳ್ಳುವ ಕ್ಷಮತೆಯನ್ನು ಹೊಂದಿಲ್ಲ. ಇದನ್ನು ಸಹ್ಯಗೊಳಿಸಿ, ಮಾನವನಿಗೆ ಸ್ಪಂದನಗೊಳ್ಳುವಂತೆ, ಅದಕ್ಕೊಂದು 'ಹಿತವಾದ ಗವಸು' (ಕವಚ) ಹಾಕಿ, ಈಗ ನಾವು ಪಡೆದುಕೊಳ್ಳುತ್ತಿರುವ ಅನುಭವವನ್ನು ಒದಗಿಸುತ್ತದೆ.

ಹಾಗಾದರೆ ಇದನ್ನು ಕವಿಗಳು/ಯೋಗಿಗಳು ಕೇವಲ ಅಲ್ಪ ಕಾಲದ ಅನುಭವದಲ್ಲಿ ಇದನ್ನು ಪಡೆಯುತ್ತಾರೆ ಎನ್ನುವದು ಅಷ್ಟೊಂದು ಸೂಕ್ತವಾಗಲಾರದು. ಏಕೆಂದರೆ ಅಮೃತದ ಒಂದೇ ಹನಿಯಾದರೂ ಸರಿ, ಅದು ತನ್ನ ಮಹತ್ವವನ್ನು ಪರಿಪೂರ್ಣಗೊಳಿಸಿಕೊಳ್ಳಲು, ರೂಪಾಂತರಣದ ಮೂಲಕ ವಿಕಾಸಗೊಳ್ಳಲು, ಇಲ್ಲಿ ಅವಕಾಶವಾಗುತ್ತಿದೆ. ಇದೇ ಲೋಕದ ವಿಕಸನಕ್ಕೆ, ಹಾಗೂ ಆ ಮೂಲಕ ಜ್ಞಾನದ ವಿಕಾಸಕ್ಕೂ ಕಾರಣವಾಗುತ್ತಿದೆ. ಇಲ್ಲಿ ನಿಶ್ಯಬ್ದ ಭಾವವೊಂದೇ ಸಂಪರ್ಕ ಒದಗಿಸುವ ಹಂತದಲ್ಲಿರುತ್ತದೆ. ಹೀಗಾಗಿ ಕೇವಲ ಅನುಭಾವದ ಮೂಲಕವೇ ಅದರ ಬಗೆಗೆ ಜ್ಞಾನವನ್ನು ಪಡೆದುಕೊಳ್ಳಬೇಕು.

ಸಾವಿತ್ರಿಯ ಈ ಭಾಗದಲ್ಲಿ, ಭಾರತೀಯ ಪ್ರಾಚೀನ ಜ್ಞಾನವನ್ನೂ ಮತ್ತು ಅದು ಆಧುನಿಕ ವೈಜ್ಞಾನಿಕ ಚಿಂತನೆಗಳಲ್ಲಿ ಹೇಗೆ ಅನ್ವಯಗೊಳಿಸಲ್ಪಟ್ಟು ಅನುಭವಕ್ಕೆ ದಕ್ಕುತ್ತಿರುವದನ್ನು ಶ್ರೀ ಅರವಿಂದರು ಇಲ್ಲಿ, ಸಂಕೇತದಲ್ಲಿ ಅದನ್ನು "In his inalienable bliss they live" ಎಂದು ರೂಪಿಸಿದ್ದಾರೆ. ಇಲ್ಲಿ Inaliaenable ಎಂದರೆ "ಅವಿಚ್ಛೇದ್ಯ"ವಾಗಿದೆ. ಇಲ್ಲಿರುವ ತೋಷಕ್ಕೆ ಯಾವುದೇ ವಿಚಲನೆಯ ಭಾವವಿರುವದಿಲ್ಲ. ಎಲ್ಲವೂ ಆ ಲೋಕ ರಕ್ಷೆಯ ನಿತ್ಯಕಕ್ಷೆಯಲ್ಲಿಯೇ ಇರುತ್ತದೆ. ಇದನ್ನು 'ಗಗನ ಸಿದ್ಧಾಂತ' ಎಂದೂ ಕರೆಯಲಾಗುತ್ತಿದೆ.

## ಯುಗಳಾವತಾರದ ಲೀಲೆ

ಜೋಡಿ–ಮನಗಳಿವು ಕೂಡಿಕೊಂಡಿರಲು ನಿತ್ಯಾನುಸಂಧದಲ್ಲಿ
ಸಂಯೋಗ ಯುಗಳ ಸಂಗಮದ ರಂಗು ರಂಗಿನಾ ನೃತ್ಯದಲ್ಲಿ
ಚಿಂತನದ –ಚಿತ್ತ ಚಿತ್ತ–ಚಿಂತನದ ಆಂತರ್ಯ ಗ್ರಹಿಸಿ ಈಗ
ದೃಷ್ಟಿಯನು ದೃಷ್ಟಿ ದೃಷ್ಟಿಸಿದೆ ಈಗ ಸಂಪುಷ್ಟಗೊಳ್ಳಲಾಗ

ಬರಿ ಮಾತು–ಮಾತಿನಲಿ ಹೂತುಕೊಳುವ ಅವಕಾಶವಿಲ್ಲದಂತೆ;
ಯುಗ್ಮ ಹೃದಯಕಿದು ಉತ್ತಾಪದಲ್ಲಿ ಉತ್ತಾಪ ಯೋಗದಂತೆ,
ನರನಾಡಿಗಳಲಿ ಭರತದೊಲು ಪುಲಕ ಉಕ್ಕುಕ್ಕಿ ಪುಟಿದು ಬಂದು
ಮಾಂಶಪೇಶಿಗಳು ಸಂಮೋದದಲೆಯ ಸಂಸ್ಪರ್ಶ ಪಡೆದುಕೊಂಡು

ಮೇಲೇರಿ ಏರಿ ಅರಳುತಲಿ ಹರಡಿ ಅವಕಾಶ ತುಂಬಲೆಂದು
ಅವರೀಗ ಅವರ ಅನುಭೂತಿಗಾಗಿ ಅನುನಯದಿ ಮಗ್ನರಿಂದು
ಇಬ್ಬಗೆಯನಳಿದು ಒಬ್ಬರಲ್ಲೊಬ್ಬರಾಗುತಲಿ ಕರಗಿ ಕರಗಿ
ಬೆಳೆಬೆಳೆದರೀಗ ಕಳೆದುಂಬಿಕೊಂಡು ಹೊಳೆಹೊಳೆದು ಅಮಿತವಾಗಿ

ಕಾಯದ್ವಯಗಳಿವು ಎಂದು ದಹಿಸುವವೊ ಸಹನೆಯಲ್ಲಿ ಕಾದು ಕಾದು
ಅಗ್ನಿಯಲಿ ಅಗ್ನಿ ಸಂಲಗ್ನಗೊಳಲು ಸಂಯೋಗ ಸೃಷ್ಟಿ ನೇದು;

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು 6 ಪುಟ 186)**

ಸ್ವರ್ಣಿಮದ ಯುಗಳ–ಸರ್ಪಗಳು ಬ್ರಹ್ಮ–ಬ್ರಹ್ಮಾಂಡದೇಣಿಯಾಗಿ
ಜೀವ–ವಾಹಿನಿಯ ಕುಂಡಲಿಯ ಸರಣಿ ಸರಣಿಗಳ ಮಾಲೆಯಾಗಿ
ಪೂರ್ಣಗೊಂಡಿಹವು ಮಂಡಲದಖಂಡ ಆವರಣ ರಕ್ಷೆಯಾಗಿ
ಪರಿಶುದ್ಧ ಮತ್ತೆ ಘನಬಲದಿ ತುಂಬಿ ಸಾಮರ್ಥ್ಯಶಾಲಿಯಾಗಿ
ಸಾಂದ್ರಪ್ರಜ್ಞೆ ಜೊತೆ ದೃಷ್ಟಾರ ದೃಷ್ಟಿಯಲಿ ದರ್ಶಗೊಂಡು ಪ್ರಕಟ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 5 ಪುಟ 524)**

(ಚಿತ್–ಪ್ರಕಾಶವು ಸ್ವರ್ಣವರ್ಣದ್ದಾಗಿರುತ್ತದೆ. ಯುಗಳ–ಸರ್ಪಗಳು ಎಂದರೆ ಸತ್ ಮತ್ತು ಚಿತ್/ಜೀವ–ಪ್ರಾಣ/ಚೈತ್ಯ ಪುರುಷ–ಪರಮಾತ್ಮ ಮತ್ತು ಆದಿಶಕ್ತಿ). ಪ್ರತಿಯೊಬ್ಬ ಮಾನವನಿಗೂ ಎರಡು ಆತ್ಮಗಳಿರುತ್ತವೆ.

# ವಾರ್ತಾಪತ್ರ


## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

## ಶ್ರೀ ಅರವಿಂದೋ ಸೊಸೈಟಿ ಕೇಂದ್ರ, ಹುಬ್ಬಳ್ಳಿ

ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ರಾಜ್ಯಮಟ್ಟದ ಸಮಾವೇಶ ದಿನಾಂಕ 05/03/2023 ಭಾನುವಾರ ಶ್ರೀ ಅರವಿಂದೋ ಸೊಸೈಟಿ ಕೇಂದ್ರ, ಹುಬ್ಬಳ್ಳಿ ವತಿಯಿಂದ ಶ್ರೀ ರಾಘವೇಂದ್ರ ಸಭಾ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವು ಜ್ಯೋತಿ ಬೆಳಗುವುದರ ಮೂಲಕ ಆರಂಭವಾಯಿತು. ಹುಬ್ಬಳ್ಳಿ ಕೇಂದ್ರದ ಅಧ್ಯಕ್ಷರಾದ ಶ್ರೀ ಆರ್.ಎಲ್. ನಾಡಿಗೇರ ರವರು ಸ್ವಾಗತ ಭಾಷಣ ಮಾಡಿದರು. ಕಾರ್ಯಕ್ರಮಕ್ಕೆ ಡಾ॥ ಅರುಣ್ ಕುಲಕರ್ಣಿ, HOD, ಅಂಗರಚನ ಶಾಸ್ತ್ರ, ಎಸ್.ಡಿ.ಎಮ್. ವೈದ್ಯಕೀಯ ಮಹಾವಿದ್ಯಾಲಯರವರು ಗೌರವ ಅತಿಥಿಗಳಾಗಿ ಆಗಮಿಸಿ ಶ್ರೀ ಅರವಿಂದರ 'ಪೂರ್ಣ ಯೋಗ'ದ ಬಗ್ಗೆ ಉಪನ್ಯಾಸ ನೀಡಿದರು. ಮಾನವರಲ್ಲಿ ಸಹಜವಾಗಿ ಕಾಡುವ ಖಿನ್ನತೆಯನ್ನು ಶ್ರೀಮಾತಾರವಿಂದರ ತತ್ತ್ವ, ಆದರ್ಶ ಹಾಗೂ ಸಿದ್ಧಾಂತಗಳನ್ನು ಅಭ್ಯಾಸ ಮಾಡಿ ಅವುಗಳನ್ನು ಅಳವಡಿಸಿಕೊಂಡು ಹೇಗೆ ಪರಿಹರಿಸಿಕೊಳ್ಳಬಹುದೆಂದು ಉದಾಹರಣೆ ಸಹಿತ ವಿವರಿಸಿದರು. ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣವನ್ನು ನೆರವೇರಿಸಿದರು. ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಡಾ॥ ಎಸ್.ಕೆ. ಕೊಪ್ಪ ಹಾಗೂ ವಲಯ ಉಪಾಧ್ಯಕ್ಷರುಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಮಧ್ಯಾಹ್ನ ಭೋಜನದ ನಂತರ ಕೇಂದ್ರ ಮತ್ತು ಶಾಖೆಗಳಿಂದ ಪ್ರತಿನಿಧಿಸಿದ ಪದಾಧಿಕಾರಿಗಳು ಸಮಾವೇಶದಲ್ಲಿ ಚಟುವಟಿಕೆಗಳ ಕುರಿತು ವರದಿಯನ್ನು ಮಂಡಿಸಿದರು. ಸಭೆಯಲ್ಲಿ ಕೇಂದ್ರ ಮತ್ತು ಶಾಖೆಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳವಣಿಗೆ ಹೊಂದಲು ಕೈಗೊಳ್ಳಬೇಕಾಗಿರುವ ಕೆಲಸಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ನಡೆಯಿತು. ಹೊಸ ಕೇಂದ್ರಗಳನ್ನು ಸ್ಥಾಪನೆ ಮಾಡಲು ಕೆಲವು ಸದಸ್ಯರು ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು. ಸದಸ್ಯತ್ವದ ಸಂಖ್ಯೆಯನ್ನು ಹೆಚ್ಚಿಸಲು ಎಲ್ಲಾ ಪದಾಧಿಕಾರಿಗಳು ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯ ಪ್ರವೃತ್ತರಾಗುತ್ತೇವೆಂದು ತಿಳಿಸಿದರು. ಹುಬ್ಬಳ್ಳಿ ಕೇಂದ್ರದ ಕಾರ್ಯದರ್ಶಿಗಳಾದ ಶ್ರೀ ಮಲ್ಲಿಕಾರ್ಜುನ ಬಿ. ನರವಣಿಯವರು ವಂದನಾರ್ಪಣೆ ನೆರವೇರಿಸಿದರು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಶ್ರೀಮತಿ ಮಂಗಳಗೌರ ಮಲ್ಲಿಕಾರ್ಜುನ ನರವಣಿ ನಿರೂಪಿಸಿದರು.



ಫೋಟೋ: ಇಮೇಜಿಂಗ್ ಸಾವಿತ್ರಿ

**ಯುಗಳಾವತಾರದ ಲೀಲೆ (ಪುಟ 75)**

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 186)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

'ಸ್ವರ್ಣಿಮದ ಯುಗಳ–ಸರ್ಪಗಳು ಬ್ರಹ್ಮ–ಬ್ರಹ್ಮಾಂಡದೇಣಿಯಾಗಿ'

– ಪುಟ್ಟು ಕುಲಕರ್ಣಿ

(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 15 ಪುಟ 297)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.